ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಸೆಪ್ಟೆಂಬರ್ 24, 2008 ರೂ. 12/-

ಟ್ರಾನ್ಸ್‌ಫರ್ ದಂಧೆ



BJP ಪಾಲಿಗೆ

ಮಗನೇ ಶನಿ!

ಕ್ಕಲಿಗರ ಸಂಘ : ಅರ್‍ಯಾಕ್ V/s ಅಕಾಡೆಮಿಕ್

ರ್ಚ್‌ಗಳ ಮೇಲೆ ಚೆಡ್ಡಿಗಳ ದಾಳಿ

ದಗ: ನಾಗರತ್ನಳನ್ನು ಗಂಡ ಬಸವರಾಜನೇ ಕೊಂದನೆ?




ಡಿಸಿಸಿ ಬ್ಯಾಂಕ್ ಲೂಟಿ ಮಾಡಿದ ನಾಗಮಾರಪಳ್ಳಿ



ದುರಂತ ನಾಯಕ ಸಿದ್ಧರಾಜು

ಜರ್ದಾರಿ



ಈತನಿಗೆ ಹಲವಾರು ಅಡ್ಡ ಹೆಸರುಗಳಿವೆ. ಪ್ಲೇಬಾಯ್, ಪೋಲೋ ಆಟಗಾರ, ಮಿ. 10% ಎಂಬುದು ಅವುಗಳಲ್ಲಿ ಪ್ರಮುಖವು. ಈ ಎಲ್ಲ ಅಡ್ಡಹೆಸರುಗಳನ್ನು ಈತ ಹೇಗೆ ತನ್ನ ಜೀವನಶೈಲಿಯಿಂದ, ಹವ್ಯಾಸಗಳಿಂದ, ಭ್ರಷ್ಟಾಚಾರದಿಂದ ಗಳಿಸಿದನೋ ಹಾಗೆಯೇ ಈಗ ತನ್ನ ಚಾಣಾಕ್ಷತನದಿಂದ ಇನ್ನೊಂದು ಬಿರುದನ್ನೂ ಪಡೆದಿದ್ದಾನೆ. ಅದು 'ಪಾಕಿಸ್ತಾನದ ಅಧ್ಯಕ್ಷ' ಎಂಬ ಸ್ಥಾನ.

ಈತ ಆಸಿಫ್ ಆಲಿ ಜರ್ದಾರಿ. ಕಳೆದ ಡಿಸೆಂಬರ್ ತಿಂಗಳಲ್ಲಿ ಕೊಲೆಗಡುಕರ ದಾಳಿಗೆ ಬಲಿಯಾದ ಬೆನಜೀರ್ ಭುಟ್ಟೋಳ ವಿಧುರ.

ಇಪ್ಪತ್ತು ವರ್ಷಗಳ ಹಿಂದೆ ಯಾರಿಗೂ ಗೊತ್ತಿರದಿದ್ದ ಈ ಜರ್ದಾರಿಯ ಬದುಕು ಬದಲಾಗಿದ್ದೇ ವಯಸ್ಸಿನಲ್ಲಿ ತನಗಿಂತ ಹಿರಿಯಳಾದ, ಸ್ಥಾನಮಾನಗಳಲ್ಲಿ ತನಗಿಂತ ಹೆಚ್ಚು ಓದಿದ್ದ (ಜರ್ದಾರಿ ಡಿಗ್ರಿಯನ್ನು ಪಡೆದಿಲ್ಲ), ಹೆಚ್ಚು ಖ್ಯಾತ ಕುಟುಂಬದಿಂದ ಬಂದಿದ್ದ ಬೆನಜೀರ್‌ಳನ್ನು ಮದುವೆ ಆದಾಗ. ಈ ಇಪ್ಪತ್ತು ವರ್ಷಗಳಲ್ಲಿ ಜರ್ದಾರಿ ಭ್ರಷ್ಟಾಚಾರದಿಂದಾಗಿಯೇ ಅಪಾರ ಐಶ್ವರ್ಯ ಗಳಿಸಿದ್ದಾನೆ, ಅದಕ್ಕೊಂದೇ ಹಲವು ವರ್ಷಗಳ ಜೈಲು ವಾಸ ಕಂಡಿದ್ದಾನೆ. ಆದರೆ ಈಗ ತನ್ನ ಚಾಣಕ್ಷತನದಿಂದ ಆ ಎಲ್ಲಾ ಆರೋಪಗಳಿಂದ ಮುಕ್ತನಾಗಿದ್ದಾನಲ್ಲದೆ, ತನ್ನ ರಾಜಕೀಯ ವೈರಿಗಳನ್ನು ಮೂಲೆಗುಂಪು ಮಾಡಿ, ತನ್ನೊಂದಿಗೆ ಸರ್ಕಾರವನ್ನು ರೂಪಿಸಲು ಸಹಕರಿಸಿದ್ದ ರಾಜಕೀಯ ನಾಯಕರಿಗೂ ದ್ರೋಹ ಬಗೆದು ಪಾಕಿಸ್ತಾನದ ಅಧ್ಯಕ್ಷ ಸ್ಥಾನಕ್ಕೇರಿದ್ದಾನೆ.

ರಾಜಕೀಯವೆಂಬ ಚದುರಂಗದಾಟವನ್ನು ಈತ ಹೇಗೆ ಆಡಿದ್ದಾನೆಂದರೆ ಕಳೆದ ಒಂಭತ್ತು ವರ್ಷಗಳಿಂದ ಪಾಕಿಸ್ತಾನವನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿದ್ದ ಸರ್ವಾಧಿಕಾರಿ ಮುಷರಫ್ ಕೂಡ ಕೊನೆಗೆ ವಿಧಿ ಇಲ್ಲದೆ ಬಾಲ ಮುದುರಿಕೊಂಡು ಜಾಗ ಖಾಲಿ ಮಾಡುವಂತೆ ನೋಡಿಕೊಂಡಿದ್ದಾನೆ. ಮಾತ್ರವಲ್ಲ, ಬೆನಜೀರ್‌ಳ ಹತ್ಯೆ ನಂತರ ಪಾಕಿಸ್ತಾನದಲ್ಲಿ ಪ್ರಜಾತಂತ್ರಿಕ ಸಮ್ಮಿಶ್ರ ಸರ್ಕಾರವನ್ನು ರೂಪಿಸಲು ಜರ್ದಾರಿಯೊಂದಿಗೆ ಸಹಕರಿಸಿದ್ದ, ಈಗಾಗಲೇ ಎರಡು ಬಾರಿ ಪಾಕಿಸ್ತಾನದ ಪ್ರಧಾನಿಯಾಗಿದ್ದ ನುರಿತ ರಾಜಕಾರಣಿ ನವಾಜ್ ಷರೀಫ್ ಕೂಡ ಏನೂ ಮಾಡಲಾಗದೆ ಕೈಕೈ ಹಿಸುಕಿಕೊಳ್ಳುವಂತೆ ಮಾಡಿದ್ದಾನೆ.

ಪ್ರಜಾಪ್ರಭುತ್ವದ ಆಶಯಗಳನ್ನೇ ಅಣಕಿಸುವಂತೆ ಜರ್ದಾರಿ ಇವತ್ತು ಪ್ರಜಾಸತ್ತಾತ್ಮಕವಾಗಿಯೇ ಅಧ್ಯಕ್ಷನಾಗಿದ್ದಾನೆ. ಪಾಕಿಸ್ತಾನದಲ್ಲಿ ಚುನಾಯಿತನಾಗಿರುವ ಪ್ರಪ್ರಥಮ ಅಧ್ಯಕ್ಷ ಎನಿಸಿಕೊಂಡಿದ್ದಾನೆ. ಸಂವಿಧಾನಬದ್ಧವಾಗಿ ಅಧ್ಯಕ್ಷ ಸ್ಥಾನಕ್ಕೇರಿದ ಜರ್ದಾರಿ ಇವತ್ತು ಸರ್ವಾಧಿಕಾರಿ ಮುಷರಫ್‌ನ ತದ್ರೂಪಿ ಆಗಿದ್ದಾನೆ.

ಬೆನಜೀರ್‌ಳನ್ನು ಮದುವೆಯಾದ ನಂತರ ಜರ್ದಾರಿಯ ಜೀವನ ಹಲವಾರು ತಿರುವುಗಳನ್ನು ಕಂಡಿದೆ. ಆದರೆ ಆಕೆಯ ಸಾವು ಜರ್ದಾರಿಯನ್ನು ಪಾಕಿಸ್ತಾನದ ಅಧ್ಯಕ್ಷ ಸ್ಥಾನದತ್ತ ಒಯ್ಯುವ ತಿರುವಾಗುತ್ತದೆ ಎಂದು ಪ್ರಾಯಶಃ ಬೆನಜೀರ್ ಇರಲಿ, ಜರ್ದಾರಿ ಕೂಡ ಕನಸ್ಸು ಮನಸ್ಸಿನಲ್ಲೂ ಊಹಿಸಿರಲಿಕ್ಕಿಲ್ಲ.

ಬೆನಜೀರ್ ತನ್ನನ್ನು 'ವಿಧಿಯ ಮಗಳು' ಎಂದು ಕರೆದುಕೊಂಡಿದ್ದಳು. ಆದರೀಗ ಆಕೆಯ ಗಂಡ ಕೂಡ 'ವಿಧಿಯ ಪುತ್ರ'ನಾಗಿದ್ದಾನೆ. ಬೆನಜೀರ್ ಇವತ್ತಿಲ್ಲ, ಆದರೆ ಅವಳ ಗಂಡ ಜರ್ದಾರಿಯ ಮುಂದೆ ತಾನೇನು ಮಾಡಬೇಕೆಂಬ ಭವಿಷ್ಯವಿದೆ.

ಪ್ರತಿಯೊಬ್ಬರ ಬದುಕಿನಲ್ಲೂ ವೈಯಕ್ತಿಕ ಇತಿಹಾಸ ಇರುತ್ತದೆ. ವಿಧಿಯ ಆಟ ಎಂತಹದ್ದೆಂದರೆ ಹಲವೊಮ್ಮೆ ಅದು ಅವರ ಮುಂದೆ ಎರಡು ಆಯ್ಕೆಗಳನ್ನು ಇಡುತ್ತದೆ. ಒಂದನೆ ಆಯ್ಕೆ: ಹಿಂದಿನಂತೆ ಜೀವನವನ್ನು ಸಾಗಿಸಿ ಇನ್ನಷ್ಟು ಮೋಜು, ಮಜಾಗಳಲ್ಲಿ ಬದುಕನ್ನು ಸಾಗಿಸುವುದು. ಎರಡನೆ ಆಯ್ಕೆ: ಹಿಂದಿನದ್ದನ್ನೆಲ್ಲ ಬದಿಗಿಟ್ಟು ವೈಯಕ್ತಿಕ ಲಾಭವನ್ನು ಪರಿಗಣಿಸದೇ ಜನ ಪರವಾಗಿ ಜೀವಿಸುವುದು.

ಪಾಕಿಸ್ತಾನದ ಅಧ್ಯಕ್ಷನಾಗಿರುವ 'ವಿಧಿಯ ಪುತ್ರ' ಜರ್ದಾರಿಯ ಮುಂದೆ ಈಗ ಈ ಎರಡೂ ಆಯ್ಕೆಗಳಿವೆ. ಆತ ಯಾವ ಹಾದಿಯನ್ನು ಹಿಡಿಯುತ್ತಾನೆ ಎಂದು ನಿರ್ಧರಿಸುವುದು ಆತನ ವಿಧಿಯಲ್ಲ, ಬದಲಾಗಿ ಆತನೆ.....

ಹಣದುಬ್ಬರ ಮತ್ತು ಪಗಾರ

ಹಣದುಬ್ಬರದಿಂದ ಸಾಮನ್ಯರು ತತ್ತರಿಸುತ್ತಿರುವಾಗ ಪ್ರಜಾಪ್ರಭುತ್ವ ಭಾರತದ ಪ್ರಧಾನಿ ಮನಮೋಹನ್ ಸಿಂಗ್‌ರವರು ಈ ದೇಶದ ನಾಮಕಾವಸ್ಥೆ ಪ್ರಭುಗಳ ಪಗಾರವನ್ನು ಏರಿಸಿದರು.

ಅದರಂತೆ ರಾಷ್ಟ್ರಪತಿಯವರ ತಿಂಗಳ ಪಗಾರವನ್ನು ಈಗಿನ 50,000ರಿಂದ 1,50,000ಕ್ಕೆ ಏರಿಸಲಾಯಿತು. ಹಾಗೆಯೇ ಉಪರಾಷ್ಟ್ರಪತಿಯವರ ತಿಂಗಳ ಆದಾಯವನ್ನು 40,000ದಿಂದ 1,25,000ಕ್ಕೆ ಹೆಚ್ಚಿಸಲಾಯಿತು. ಇವರಿಬ್ಬರ ಪಗಾರವನ್ನು ಹೆಚ್ಚಿಸಿದ ನಂತರ ರಾಜ್ಯಪಾಲರ ಸಂಬಳವನ್ನು ಹೆಚ್ಚಿಸದೆ ಇರಲಾಗುತ್ತದೆಯೇ? ಆಗಲ್ಲವಲ್ಲ, ಆದ್ದರಿಂದ ದೇಶದಲ್ಲಿರುವ ಹಲವಾರು ರಾಜ್ಯಪಾಲರ ತಿಂಗಳ ಸಂಬಳವನ್ನು 36,000ರಿಂದ 1,10,000ಕ್ಕೆ ಏರಿಸಲಾಯಿತು. ಮಾತ್ರವಲ್ಲ ಇದನ್ನು 2007ರ ಜನವರಿಯಿಂದ ಅನ್ವಯವಾಗುತ್ತದೆ ಎಂದೂ ಸೇರಿಸಲಾಯಿತು. ಅಂದಹಾಗೆ ಇದೇ ಜನವರಿ (2008)ರಲ್ಲಿ ಈ ಗಣ್ಯರ ಪಗಾರವನ್ನು ಹೆಚ್ಚಿಸಲಾಗಿದ್ದರೂ ಈಗ ಮತ್ತೊಮ್ಮೆ ಅದನ್ನು ಏರಿಸಲಾಗಿದೆ.


-ಚುರುಮುರಿ.ವರ್ಡ್‌ಪ್ರೆಸ್.ಕಾಂ

ಆತ್ಮಹತ್ಯೆ ಮತ್ತು ವಾಯುಪಡೆ

"ದೇಶದಲ್ಲಿ ಪ್ರತಿ ಲಕ್ಷ ಜನರಿಗೆ 10.5 ಜನ ಆತ್ಮಹತ್ಯೆ ಮಾಡಿಕೊಂಡರೆ, ಭಾರತೀಯ ಸೇನೆಯಲ್ಲಿ ಪ್ರತಿ ಲಕ್ಷ ಜನರಿಗೆ 11 ಮತ್ತು ಭಾರತೀಯ ನೌಕಾಪಡೆಯಲ್ಲಿ 8 ಜನ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಇದೆಲ್ಲದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ವಾಯುಪಡೆಯಲ್ಲಿ ಆತ್ಮಹತ್ಯೆಗಳು ಸಂಭವಿಸುತ್ತಿದೆ. ವಾಯುಪಡೆಯಲ್ಲಿ ಒಂದು ಲಕ್ಷ ಜನರಿಗೆ 16 ಜನ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

-ಭಾರತೀಯ ವಾಯುಪಡೆಯ ವರದಿ

ನ್ಯಾಯಾಲಯದಲ್ಲೂ ಭ್ರಷ್ಟಾಚಾರ



ಘಾಜಿಯಾಬಾದ್ ಜಿಲ್ಲಾ ನ್ಯಾಯಾಲಯದಲ್ಲಿ ಖಜಾನೆಯ ಉಸ್ತುವಾರಿ ವಹಿಸಿದ್ದ ಅಶುತೋಷ್ ಅಸ್ಥಾನ ಎಂಬಾತ ಕ್ಲಾಸ್ ಮೂರು ಮತ್ತು ನಾಲ್ಕನೇ ದರ್ಜೆಯ ನೌಕರರ ಪ್ರಾವಿಡೆಂಟ್ ಫಂಡ್‌ನಿಂದ 23 ಕೋಟಿ ರೂಪಾಯಿಗಳನ್ನು ತಾನು ಸ್ವಾಹ ಮಾಡಿರುವುದಾಗಿ ಇತ್ತೀಚೆಗೆ ಒಪ್ಪಿಕೊಂಡ. ಮ್ಯಾಜಿಸ್ಟ್ರೇಟ್ ಮುಂದೆ ಆತ ಕೊಟ್ಟಿರುವ ಹೇಳಿಕೆ ಪ್ರಕಾರ ಆ ಹಣವನ್ನು 34 ಜಡ್ಜ್‌ಗಳಿಗೆ ದುಬಾರಿ ಉಡುಗೊರೆಗಳನ್ನು ಕೊಡಲು ವೆಚ್ಚ ಮಾಡಲಾಯಿತಂತೆ. ಅವುಗಳ ಹಲವು ಸ್ಯಾಂಪಲ್‌ಗಳು ಹೀಗಿವೆ:

* ಏಪೆಕ್ಸ್ ಕೋರ್ಟಿನ ಜಡ್ಜ್ ಒಬ್ಬರಿಗೆ ದುಬಾರಿ ಪೀಠೋಪಕರಣ, ಲ್ಯಾಪ್‌ಟಾಪ್, ಟವಲ್, ಬೆಡ್‌ಶೀಟ್ ಮತ್ತು ಪಾತ್ರೆ ಪಗಡೆಗಳು.
* ಕೊಲ್ಕತ್ತಾ ಹೈಕೋರ್ಟ್‌ನ ಜಡ್ಜ್ ಒಬ್ಬರಿಗೆ ವಾಷಿಂಗ್ ಮೆಷಿನ್ ಮತ್ತು 29 ಇಂಚು ಟಿವಿ
* ಮತ್ತೋರ್ವ ಹೈಕೋರ್ಟ್ ಜಡ್ಜ್‌ಗೆ ಟಿವಿ, ಫ್ರಿಡ್ಜ್, ಎಸಿ, ಮೈಕ್ರೋವೇವ್ ಒವನ್, ಫ್ಯಾನ್, ಪೀಠೋಪಕರಣ ಮತ್ತು ಪಾತ್ರೆ ಪಗಡೆ. ಅವರು ನೊಯಿಡಾಗೆ ಹೋದಾಗಲೆಲ್ಲ ಅವರಿಗೆ ಟ್ಯಾಕ್ಸಿ ಸೇವೆ.
* ಅಲಹಾಬಾದ್ ಹೈಕೋರ್ಟ್ ಜಡ್ಜ್ ಒಬ್ಬರಿಗೆ ದುಬಾರಿ ಪಾತ್ರೆ ಪಗಡೆ. ಅವರ ಮಗನಿಗೆ ಒಂದು ಲಕ್ಷ ರೂಪಾಯಿ ಬೆಲೆಬಾಳುವ ಪೀಠೋಪಕರಣ
* ಹೈಕೋರ್ಟ್ ಜಡ್ಜ್ ಒಬ್ಬರ ನೋಯಿಡಾ ಮನೆಗೆ ಎರಡು ಎಸಿಗಳು. ಅವರಿಗೂ ಟ್ಯಾಕ್ಸಿ ಸೇವೆ. ಅವರ ಮಗನ ಮದುವೆ ಸಂದರ್ಭದಲ್ಲಿ ಕಾರ್‌ಗಳನ್ನು ಒದಗಿಸಲಾಗಿತ್ತು.

ಹಾಗೆಯೇ ಇನ್ನೊಂದು ಪ್ರಕರಣ ಹೀಗಿದೆ:

ಕಳೆದ ಆಗಸ್ಟ್ 13ರಂದು ಹರಿಯಾಣದ ಅಡಿಷನಲ್ ಅಡ್ವೋಕೇಟ್ ಜನರಲ್ ಸಂಜಯ್ ಬನ್ಸಾಲ್ ಪಂಜಾಬ್ ಮತ್ತು ಹರಿಯಾಣದ ಹೈಕೋರ್ಟ್ ಜಡ್ಜ್ ನಿರ್ಮಲ್ ಯಾದವ್ ಅವರಿಗೆ 15 ಲಕ್ಷ ರೂಪಾಯಿಗಳ ನಗದನ್ನು ಕಳುಹಿಸಿಕೊಟ್ಟ. ಆದರೆ ಜಡ್ಜ್ ಅವರ ಹೆಸರಿನ ಗೊಂದಲದಿಂದಲೋ ಏನೋ ಆ ಹಣ ಮತ್ತೋರ್ವ ಜಡ್ಜ್ ನಿರ್ಮಲ್‌ಜಿತ್ ಕೌರ್ ಅವರ ಕೈ ಸೇರಿತು. ಇದರ ಬಗ್ಗೆ ವಿಚಾರಿಸಿದಾಗ ಆ ಹಣ ದೆಹಲಿಯ ಹೋಟೆಲ್ ಮಾಲೀಕ ರವೀಂದರ್ ಸಿಂಗ್ ಬಾಸಿನ್‌ನಿಂದ ಬಂದಿದ್ದೆಂದೂ, ಅದರ ಮಾರನೇ ದಿನ ಜಡ್ಜ್ ನಿರ್ಮಲ್ ಯಾದವ್ ಅವರಿಗೆ 15 ಲಕ್ಷ ರೂಪಾಯಿಗಳ ನಗದಿನ ಎರಡನೇ ಕಂತನ್ನು ಕಳುಹಿಸಲಾಗಿತ್ತು ಎಂದೂ ಆತ ಒಪ್ಪಿಕೊಂಡ. ಆ ಹಣವನ್ನು ಜಸ್ಟೀಸ್ ಯಾದವ್ ಅವರು ಸೋಲನ್ ಹತ್ತಿರ ಭೂಮಿ ಖರೀದಿಸಲು ಉಪಯೋಗಿಸಿದ್ದರು.

ಈಗ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶ ಈ ಇಬ್ಬರು ಜಡ್ಜ್‌ಗಳನ್ನು ವಿಚಾರಿಸಿಕೊಳ್ಳಲು ಸಿಬಿಐಗೆ ಹಸಿರು ನಿಶಾನೆ ತೋರಿಸಿದ್ದಾರೆ.

-'ಔಟ್‌ಲುಕ್' ವರದಿ

ವಾರದ ಹೇಳಿಕೆ



"ಭಾರತ ಎಂಬ ದೊಡ್ಡ ಸರ್ಕಸ್ಸಿನಲ್ಲಿ ನಾನು ರಂಗೀಲಾ ಜೋಕರ್ ಆಗಿದ್ದೇನೆ. ಕಳೆದ ಹಲವಾರು ವರ್ಷಗಳಿಂದ ಈ ಸರ್ಕಸ್ಸಿನ ಟೆಂಟ್ ದೊಡ್ಡದಾಗುತ್ತಲೇ ಇದೆ. ಇದರ ತುಂಬಾ ನೂಕಾಡುವ ಜನರು ಸೇರಿದ್ದಾರೆ. ಈ ನೂಕಾಟದಲ್ಲಿ ಒಂದು ದಿನ ನನ್ನನ್ನೇ ಟೆಂಟ್‌ನಿಂದ ಹೊರ ದೂಡಿದರು. ಆದರೆ ನನ್ನ ಬೇರುಗಳು ಆಳವಾಗಿವೆ. ನನ್ನನ್ನು ಇಲ್ಲಿಂದ ಹೊರದೂಡಿದರೂ ನನ್ನನ್ನು ಬುಡಸಹಿತ ಕಿತ್ತುಹಾಕಲಾಗುವುದಿಲ್ಲ."

-ಖ್ಯಾತ ಕಲಾವಿದ ಎಂ.ಎಫ್.ಹುಸೇನ್

ಕಾಂಡಮ್ ಹಾಡಿಗೆ ಅಪಾರ ಬೇಡಿಕೆ

ಮೂರು ವಾರಗಳ ಹಿಂದೆ ಬಿಡುಗಡೆಗೊಂಡ ರಿಂಗ್‌ಟೋನ್ ಒಂದು ಎಷ್ಟು ಜನಪ್ರಿಯವಾಗಿದೆ ಅಂದರೆ ಅದನ್ನು ಈಗಾಗಲೇ ಸುಮಾರು ಮೂರು ಲಕ್ಷ ಜನ ಡೌನ್‌ಲೋಡ್ ಮಾಡಿಕೊಂಡಿದ್ದಾರಲ್ಲದೆ, ಇಂಟರ್‌ನೆಟ್‌ನಲ್ಲಿ ಎರಡು ಮಿಲಿಯನ್ ಜನ ಕೇಳಿಸಿಕೊಂಡಿದ್ದಾರೆ.

ಅಂದಹಾಗೆ ಈ ರಿಂಗ್‌ಟೋನ್ ಹಾಡಿನಲ್ಲಿ ಬರೀ ಒಂದೇ ಒಂದು ಪದವನ್ನು ವಿವಿಧ ರೀತಿ ಮತ್ತು ರಾಗಗಳಲ್ಲಿ ಹಾಡಲಾಗಿದೆ. ಆ ಪದ: ಕಾಂಡಮ್!

ವಾರದ ವಿವೇಕ

"ಖ್ಯಾತ ಕವಿ ಮಿರ್ಜಾ ಘಾಲಿಬ್ ಅವರು 'ಪರಿಸ್ಥಿತಿ ಬಿಗಡಾಯಿಸಿದೆ; ಎಲ್ಲೂ ಪರಿಹಾರ ಕಾಣಿಸುತ್ತಿಲ್ಲ/ನಾವೇನು ಮಾಡಬೇಕಿದೆ, ನಮ್ಮ ಮನೆಗೇ ಬೆಂಕಿ ಹಚ್ಚುವ ಬದಲಾಗಿ" ಎಂಬ ಪದ್ಯ ಬರೆದಿದ್ದರು. ಇವತ್ತು ಸಿಮಿಯಂತಹ ಸಂಘಟನೆಗಳಿಂದಾಗಿ ಸಾಮಾನ್ಯ ಮುಸಲ್ಮಾನರ ಬದುಕೂ ಬಿಗಡಾಯಿಸಿದೆ"

-ಮಾನವ ಹಕ್ಕು ಹೋರಾಟಗಾರ ಜಾವೆದ್ ಆನಂದ್



ಗೋಕರ್ಣದ ಮಹಾಬಲನಿಗೆ

ಅಂಬುಧಿಯ ಒಡಲಿಂದ ಹುಟ್ಟಿಬಂದ ಸೂರ್ಯ
ಪಶ್ಚಿಮದ ಗೂಡು ಸೇರುವ ಮುನ್ನ
ನಮಸ್ಕರಿಸಿದ್ದು ನಿನಗೇ ಎಂದು ಗೊತ್ತು
ಅಲೆಗಳ ಸಪ್ಪಳವನಾಲಿಸುತ ಕುಳಿತ
ಅರ್ಧನಿಮೀಲಿತ ಫಾಲನೇತ್ರನೇ.....!!

ನಿನ್ನೆದುರಿಗಿನ ತೇರು ಬೀದಿಯನ್ನೊಮ್ಮೆ ಕಣ್ತೆರೆದು ನೋಡು
ರಾತ್ರಿಯ ನೀರವ ಮೌನ ಹೆಪ್ಪುಗಟ್ಟಿ
ಅಲೆಅಲೆಗಳ ಹೆಜ್ಜೆ ಸಪ್ಪಳಗಳನೊಂದೊಂದಾಗಿ ಸೇರಿಸಿ
ಸುಕ್ಕುಗಟ್ಟಿದ ಕೈಗಳು ಪೋಣಿಸಿದ ಹೂ ಮಾಲೆಗಳು
ಬೀದಿಯಲ್ಲಿ ಕಾದು ನಿಂತಿವೆ,
ನಿನ್ನ ಕೊರಳು ಸೇರಲು.
ಕಾಯಿ ಕರ್ಪೂರದಂಗಡಿಯ ಮುದುಕ
ಹೂ ಮಾರುವ ಮುದುಕಿ
ಕಾದು ಕುಳಿತಿರುವುದು ನಿನಗಷ್ಟೆ ಅಲ್ಲ....!!

ನೀನು ಕೊರಳ ಮಾಲೆ ಧರಿಸದಿರೆ,
ಕರ್ಪೂರ ಹಚ್ಚಿ ಉರಿಸದಿರೆ
ಹತ್ತಿ ಉರಿಯಬಹುದು
ಅವರ ಮನೆಯ ಹಸಿವು....!!

ನಿನ್ನ ನಾಮದ ಬಲದ ಮೇಲೆ
ನಿಂತ ನೂಪುರ, ಗೋಪುರಗಳ ಕೆಳಗೆ
ನಿನ್ನದೇ ನೆರಳಿದೆ....
ಸಾಲಿಗೆ ಹೋಗಲೊಲ್ಲದೆ ಹಠ ಹಿಡಿದವಗೆ
'ಮಠ'ಕ್ಕೆ ಸೇರಿಸಿಬಿಡುವೆ ಎಂದು
ಹೆದರಿಸಿದ ಅವ್ವನ ನೆನಪಾಯ್ತು ಮಹಾಬಲ,
ಗೋಕರ್ಣದ ಬೀದಿಯ ತುಂಬಾ ಪ್ರತಿಧ್ವನಿಸಿದೆ
'ಮಹಾಬಲ ಮಠದ ಪಾಲಾದನಂತೆ'.....!!

ಬೇಲಿ ಬೀಳಬಹುದಿನ್ನು
ನಿನ್ನ ಜಾತಿ ಮೀರಿದ ಪ್ರೀತಿಗೆ!
ನಿನ್ನ ಮುಟ್ಟಿ
ತಲೆಗೆರಡು ಕೊಟ್ಟು ಬರುವ
ಭಕುತರ ಕೈಗಳಿಗಿನ್ನು
ಬೀಳಬಹುದು ಬೇಡಿ!!

ಬೀದಿ ಬದಿಯ ಅಜ್ಜ-ಅಜ್ಜಿಯರ ಬದಲಿಗೇ
ಟೈ-ಬೂಟು-ಸೂಟುಗಳ ದಂಡು ಬರಬಹುದು ಮಹಾಬಲ!!
ನಿನ್ನ ಹೆಸರಿನ ರಸೀದಿಗಳು
ಹಾರಾಡಬಹುದು ಗಾಳಿಪಟಗಳಂತೆ!!

ನಿನ್ನ ನೂಪುರ ನೋಡಿ ಬಂದವರಲ್ಲ
ನಿನ್ನ ಗೋಪುರ ನೋಡಿ ಬಂದವರೆಲ್ಲ
ನಿನ್ನೊಳಗಿನ ಪರಾಕ್ರಮಕ್ಕೆ ಸೋತವರಲ್ಲ
ನಿನ್ನೆದುರಿನ 'ಹುಂಡಿ' ಯಾಸೆಗೆ ಬಂದವರು!!

ಯಾವುದಕ್ಕೂ ಬೇಸರಿಸದಿರು ಮಹಾಬಲ
ಅರಬ್ಬಿ ಕಡಲಿನ ಮುಂದೆ ಹಾಗೆ ರೋದಿಸದಿರು
ಉಕ್ಕಿ ಹರಿದೀತು ಕಡಲು!!
ಬರಿದಾದೀತು ಬೀದಿಜನರ ಒಡಲು!!

■ ಬಿ. ಶ್ರೀನಿವಾಸ

ಮುಂಬೈ ಮೇರಿ ಜಾನ್

ದೆಹಲಿಯಲ್ಲಿ ಅಮಾಯಕರ ರಕ್ತ ಹರಿದಿದೆ. ಭಯೋತ್ಪಾದಕರು ನೆಟ್ಟ ಬಾಂಬ್‌ಗಳು ಸ್ಫೋಟಗೊಂಡು 20 ಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದಾರೆ. ಇತ್ತೀಚೆಗೆ ಅಹಮದಾಬಾದಿನಲ್ಲಿಯೂ ಬಾಂಬ್‌ಗಳನ್ನು ಸ್ಫೋಟಿಸಿ 29 ಜನರನ್ನು ಬಲಿ ತೆಗೆದುಕೊಂಡಿದ್ದ ಇಂಡಿಯನ್ ಮುಜಾಹಿದ್ದೀನ್ ಎಂಬ ಸಂಘಟನೆ ತಾನೇ ಈ ಕೃತ್ಯವನ್ನೂ ನಡೆಸಿದ್ದಾಗಿ ಹೇಳಿಕೊಂಡಿದೆ. ಕಾಶ್ಮೀರದಲ್ಲಿ ಹತರಾಗಿರುವ ತಮ್ಮ ನಾಯಕರಿಗೆ ಈ ರಕ್ತ ತರ್ಪಣೆ ಎಂದಿದೆ.

ಇಂಡಿಯನ್ ಮುಜಾಹಿದ್ದೀನ್‌ನ ಹೋರಾಟಕ್ಕೂ ಈಗ ಸತ್ತಿರುವ ಅಮಾಯಕರಿಗೂ ಸಂಬಂಧವೇ ಇಲ್ಲ. ಕಾಶ್ಮೀರದಲ್ಲಿ ಭಾರತದ ಸರ್ಕಾರ ಮಾಡುತ್ತಿರುವ ಅನ್ಯಾಯ ಮತ್ತು ಭಾರತದ ಸೇನೆ ನಡೆಸುತ್ತಿರುವ ಸೈನ್ಯಕ್ಕೆ ಅಮಾಯಕರು ಕಾರಣರಲ್ಲ. ಹಾಗಿದ್ದರೂ ಇವರ ರಕ್ತವನ್ನು ಹರಿಸಲಾಗಿದೆ, ಅವರನ್ನು ಬಲಿ ತೆಗೆದುಕೊಳ್ಳಲಾಗಿದೆ. ಇದೆಂತಹ ಹೋರಾಟ? ಇದೆಂತಹ ನ್ಯಾಯ? ಈ ಕೃತ್ಯ ಖಂಡನಾರ್ಹ.

ಇಂತಹ ಭಯೋತ್ಪಾದನೆ ಕೃತ್ಯಗಳಿಂದ ಇಂಡಿಯನ್ ಮುಜಾಹಿದ್ದೀನ್ ಆಗಲಿ, ಮತ್ತಿನ್ಯಾವುದೋ ಸಂಘಟನೆಯಾಗಲಿ ಎಂದೂ ತನ್ನ ಗುರಿ ಸಾಧಿಸುವುದಿಲ್ಲ, ಜನರ ಬೆಂಬಲವನ್ನು ಪಡೆಯುವುದಿಲ್ಲ. ಬದಲಾಗಿ ಅವು ಸಾಮಾನ್ಯ ಜನರ ಬದುಕನ್ನು ಛಿದ್ರಗೊಳಿಸುತ್ತದೆ, ಇನ್ನೂ ಅಸಹಾಯಕರನ್ನಾಗಿ ಮಾಡುತ್ತದೆ, ಪೂರ್ವಗ್ರಹಗಳನ್ನು ಹುಟ್ಟಿಗೊಳಿಸುತ್ತದೆ. ಪೊಲೀಸರ ಕಾರ್ಯಾಚರಣೆಯಿಂದಾಗಿ ಭಯೋತ್ಪಾದಕ ಸಂಘಟನೆಯ ಒಂದಿಬ್ಬರು ಸಿಕ್ಕಿಹಾಕಿಕೊಳ್ಳಬಹುದು. ಆದರೆ ಅದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಅಮಾಯಕರನ್ನು ಪೊಲೀಸರು ಬಂಧಿಸುತ್ತಾರೆ, ಎನ್‌ಕೌಂಟರ್‌ನಲ್ಲಿ ಮುಗಿಸುತ್ತಾರೆ. ಇದರೊಂದಿಗೆ ಸಾಮಾನ್ಯ ಜನರಲ್ಲೂ ಮುಸಲ್ಮಾನರ ಬಗೆಗಿನ ಸಂಶಯ, ದ್ವೇಷ, ಕೋಪ ಹೆಚ್ಚಾಗುತ್ತದೆ.

ಕೊನೆಗೆ ಅಮಾಯಕರನ್ನು ಕೊಂದಿದ್ದು ಮತ್ತು ಇನ್ನೂ ಹೆಚ್ಚು ಅಮಾಯಕರನ್ನು ವ್ಯವಸ್ಥೆಗೆ ಬಲಿ ಕೊಟ್ಟಿದ್ದು ಇವೆರಡಷ್ಟೇ ಈ ಭಯೋತ್ಪಾದಕ ಕೃತ್ಯದ ಸಾಧನೆಯಾಗುತ್ತದೆ.

ಇಂತಹದ್ದೇ ಭಯೋತ್ಪಾದಕ ಕೃತ್ಯ 2006 ರಲ್ಲಿ ಮುಂಬೈನಲ್ಲಿ ನಡೆದಿತ್ತು. ಅಂದು ಮುಂಬೈನ ಟ್ರೈನ್‌ಗಳಲ್ಲಿ ಸ್ಫೋಟಿಸಿದ್ದ ಸರಣಿ ಬಾಂಬ್‌ಗಳಿಂದಾಗಿ 200 ಕ್ಕೂ ಹೆಚ್ಚು ಜನ ಸತ್ತಿದ್ದರು. ದೇಶದ ಆರ್ಥಿಕ ರಾಜಧಾನಿ ಮುಂಬೈ ಈ ಸ್ಫೋಟಗಳಿಂದ ತತ್ತರಿಸಿತ್ತು.

ಇಂತಹ ಭಯೋತ್ಪಾದಕ ಕೃತ್ಯಗಳು ಹೇಗೆ ಅಮಾಯಕರ ಜೀವನವನ್ನೇ ಛಿದ್ರಗೊಳಿಸುತ್ತದೆ ಎಂಬುದನ್ನು ಕೆಲ ವಾರಗಳ ಹಿಂದೆ ಬಿಡುಗಡೆಯಾದ 'ಮುಂಬೈ ಮೇರಿ ಜಾನ್' ಎಂಬ ಹಿಂದಿ ಚಲನಚಿತ್ರ ಸೆರೆ ಹಿಡಿದಿದೆ. ನನ್ನ ತಂಗಿ ಬೇಬಿ (ಕವಿತಾ) ಒತ್ತಾಯಿಸಿದ್ದರಿಂದ ಈ ಸಿನಿಮಾವನ್ನು ಮೊನ್ನೆ ನೋಡಿದ ನಾನು, ಇವತ್ತಿನ ಸಂದರ್ಭದಲ್ಲಿ ಅದರ ಬಗ್ಗೆ ಬರೆದರೆ ಸೂಕ್ತ ಅನ್ನಿಸುತ್ತಿದೆ.


ಆ ದಿನವೂ ಎಂದಿನಂತಿದೆ. ಜನ ತಮ್ಮ ಆಫೀಸುಗಳಿಗೆ, ಬಿಸಿನೆಸ್‌ಗಳಿಗೆ ತೆರಳಿದ್ದಾರೆ. ಕೆಲ ಯುವಕರು ಪುಟ್ಟ ಹೋಟೆಲ್ ಒಂದರಲ್ಲಿ ಕೂತು ಹರಟೆ ಹೊಡೆಯುತ್ತಿದ್ದಾರೆ. ಬೀದಿಯಲ್ಲಿ ಸಣ್ಣಪುಟ್ಟ ವಸ್ತುಗಳನ್ನು ಮಾರಿ ತಮ್ಮ ಜೀವನ ಸಾಗಿಸುವವರು ತಮ್ಮ ಕೊಡುಕೊಳ್ಳುವಿಕೆಯಲ್ಲಿ ನಿರತರಾಗಿದ್ದಾರೆ. ಪೊಲೀಸರು ತಮ್ಮ ರೌಂಡ್ಸ್‌ಗಳಲ್ಲಿ, ರೋಲ್‌ಕಾಲ್‌ಗಳಲ್ಲಿ ತೊಡಗಿದ್ದಾರೆ.

ನಗರದ ಒಂದು ಭಾಗದಲ್ಲಿ ರೂಪಾಲಿ ಜೋಷಿ ಎಂಬ ಟಿವಿ ವರದಿಗಾರ್ತಿ ಯಾವುದೋ ಹಳ್ಳಿ ಪ್ರದೇಶದಲ್ಲಿ ನಡೆದಿರುವ ಗುಂಪುಕಾಳಗದ ಬಗ್ಗೆ ವರದಿ ತಯಾರಿಸಿ ತನ್ನ ಭಾವಿ ಪತಿಗೆ ತೋರಿಸುತ್ತಿದ್ದಾಳೆ. ಆ ವರದಿಯಲ್ಲಿ ಆಕೆ ಗಲಭೆಯಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯರಾಗಿರುವವರನ್ನು ಸಂದರ್ಶಿಸಲು ಪ್ರಯತ್ನಿಸುವುದು; 'ನಿಮಗೆ ಈಗ ಹೇಗನ್ನಿಸುತ್ತಿದೆ' ಎಂದು ಪ್ರಶ್ನಿಸುವುದರ ಬಗ್ಗೆ ಆತ ತಕರಾರು ಎತ್ತುತ್ತಾನೆ. "ಜನರ ನೋವು ನಿಮಗೆ ಅರ್ಥವಾಗುವುದಿಲ್ಲವೆ?" ಎಂದು ಪ್ರೀತಿಯಿಂದಲೇ ಆಕ್ಷೇಪಿಸುತ್ತಾನೆ.

ಅದೇ ಹೊತ್ತಿಗೆ ನಿಖಿಲ್ ರೈಲಿಗೆ ಕಾಯುತ್ತಾ ರೈಲ್ವೆ ನಿಲ್ದಾಣದಲ್ಲಿ ನಿಂತಿದ್ದಾನೆ. ಆತ ಕೈತುಂಬಾ ದುಡಿಯುತ್ತಿದ್ದರೂ ವೈಯಕ್ತಿಕ ಕಾರ್ ಹೊಂದುವುದು ಅನಗತ್ಯ ಅದರಿಂದ ಪರಿಸರ ನಾಶ ಎಂದೇ ನಂಬಿರುವ ಆದರ್ಶವಾದಿ. ರೈಲು ಬಂದಾಗ ಆತ ಫಸ್ಟ್‌ಕ್ಲಾಸ್ ಬೋಗಿ ಹತ್ತಲು ಹೊರಟಾಗ ಯಾರೊ ಪರಿಚಿತನೊಬ್ಬ ಆತನನ್ನು ಸೆಕೆಂಡ್ ಕ್ಲಾಸ್ ಬೋಗಿಗೆ ಎಳೆದುಕೊಂಡು ಹೋಗುತ್ತಾನೆ.

ನಗರದ ಇನ್ನೊಂದು ಕಡೆ ಥಾಮಸ್ ಎಂಬ ಬಡ ಮಲೆಯಾಳಿ ತನ್ನ ಸೈಕಲ್ ಮೇಲೆ ಟೀ ಮಾರುತ್ತಾ ಸಾಹುಕಾರರ ಅಸಡ್ಡೆಗೆ ಗುರಿಯಾಗಿದ್ದಾನೆ.

ಇನ್ನು ನಿರುದ್ಯೋಗಿ ಯುವಕ ಸುರೇಶ್‌ನದ್ದು ಇನ್ನೊಂದು



ಕತೆ. RSS ಸಿದ್ಧಾಂತವನ್ನು ತಲೆಗೆ ಹಚ್ಚಿಕೊಂಡಿರುವ ಆತನಿಗೆ ಮುಸಲ್ಮಾನರ ಬಗ್ಗೆ ಸಂಶಯ. ಆತ ಹೋಟೆಲ್‌ನಲ್ಲಿ ತನ್ನ ಸ್ನೇಹಿತರೊಂದಿಗೆ ಕೂತು ಮಾತನಾಡುತ್ತಿದ್ದರೂ ಎದುರಿನ ಟೇಬಲ್‌ನಲ್ಲಿ ಕೂತಿರುವ ಮುಸಲ್ಮಾನ ಯುವಕರ ಮೇಲೆಯೇ ಕಣ್ಣು, ಅವರೆಲ್ಲ ದೇಶದ್ರೋಹಿಗಳು ಎಂಬ ಅನುಮಾನ.

ಈ ಸಾಮಾನ್ಯ ಜನರಲ್ಲದೆ ಸರ್ಕಾರದ ಪ್ರತೀಕವಾಗಿ ನಿವೃತ್ತಿಯ ಅಂಚಿನಲ್ಲಿರುವ ನಿರುಪಯುಕ್ತ ಪೊಲೀಸ್ ಪೇದೆ ತುಕಾರಾಮ್ ಇದ್ದಾನೆ. ಆತನೊಂದಿಗೆ ಹೊಸದಾಗಿ ಪೇದೆ ಆಗಿರುವ, ಆದರೆ ತನ್ನ ಸುತ್ತಲ ಭ್ರಷ್ಟಾಚಾರವನ್ನು ಕಂಡು ಬೇಸರ ಹೊಂದಿರುವ ಯುವ ಪೇದೆಯೊಬ್ಬನಿದ್ದಾನೆ.

ಎಲ್ಲ ದಿನದಂತೆ ಇದ್ದ ಆ ದಿನದ ಯಥಾಸ್ಥಿತಿಯನ್ನು ದಿಢೀರೆಂದು ಸರಣಿ ಬಾಂಬ್ ಸ್ಫೋಟಗಳು ಛಿದ್ರಗೊಳಿಸುತ್ತದೆ.

ಸ್ವಲ್ಪದರಲ್ಲೇ ಫಸ್ಟ್‌ಕ್ಲಾಸ್ ಬೋಗಿಯನ್ನು ಹತ್ತದಿರುವ ನಿಖಿಲ್ ಪವಾಡದಂತೆ ಬಚಾವಾಗುತ್ತಾನೆ. ಆದರೆ ತನ್ನ ಸುತ್ತಲು ಇರುವ ರಕ್ತ, ಹೆಣಗಳು, ಗದ್ದಲದಿಂದ ಆತ ಶಾಕ್‌ಗೆ ಒಳಗಾಗುತ್ತಾನೆ. ಅಮೆರಿಕಾಗೆ ಹಾರಿಹೋಗದೆ ತನ್ನ ಪ್ರಾಮಾಣಿಕ ಕಾಳಜಿಯಿಂದ ಇಲ್ಲೇ ಉಳಿದಿರುವ ಬಗ್ಗೆ, ಸದ್ಯದಲ್ಲೇ ತನ್ನ ಹೆಂಡತಿಗೆ ಜನಿಸಲಿರುವ ಮಗುವಿನ ಭವಿಷ್ಯದ ಬಗ್ಗೆ, ತನ್ನ ಜೀವನದ ಸುರಕ್ಷತೆ ಬಗ್ಗೆ ಆತ ವಿಶ್ಲೇಷಿಸುವಂತೆ ಈ ದುರಂತ ಮಾಡುತ್ತದೆ.

ಟಿವಿ ವರದಿಗಾರ್ತಿಯಾಗಿರುವ ರೂಪಾ ಈ ದುರಂತದ ವಿವಿಧ ಆಯಾಮಗಳನ್ನು ಹೇಗೆ ಸೆರೆ ಹಿಡಿಯಬೇಕೆಂದು ತನ್ನ ಸಹೋದ್ಯೋಗಿಗಳೊಂದಿಗೆ ಚರ್ಚಿಸುತ್ತಿದ್ದಾಳೆ. ಆಕೆಗೆ ಇದೊಂದು ದುರಂತ ಎಂಬುದಕ್ಕಿಂತ ವರದಿ ಮಾಡಬೇಕಾದ ವಿಷಯ ಎಂಬುದೇ ಮುಖ್ಯವಾಗಿದೆ. ಆಕೆ ಇನ್ನೇನು ಆಫೀಸಿನಿಂದ ಹೊರಡಬೇಕಿದೆ. ಆಗ ಅವಳ ಮೊಬೈಲ್ ರಿಂಗಾಗುತ್ತದೆ. ಏನಾಗಿದೆ ಎಂದರೆ ಅವಳ ಭಾವಿ ಪತಿ ಕೂಡ ಬಾಂಬ್ ಸ್ಫೋಟದಲ್ಲಿ ನಾಪತ್ತೆಯಾಗಿದ್ದಾನೆ. ಆತ ಬದುಕಿದ್ದಾನೋ, ಇಲ್ಲವೋ ಗೊತ್ತಿಲ್ಲ. ಆತನಿಗಾಗಿ ಹುಡುಕಲಾರಂಭಿಸುತ್ತಾಳೆ. ಆಗ ಅವಳು ಕೆಲಸ ಮಾಡುತ್ತಿರುವ ಟಿವಿ ಚಾನೆಲ್‌ನವರು "ಈಗ ನಿನಗೆ ಹೇಗನ್ನಿಸುತ್ತಿದೆ ಎಂಬುದರ ಬಗ್ಗೆ ಮಾತನಾಡುತ್ತೀಯಾ" ಎಂದು ಕೇಳುತ್ತಾರೆ. ಪ್ರಿಯತಮನಿಗೆ ಏನಾಗಿದೆ ಎಂಬ ಆತಂಕದಲ್ಲಿ ತಾನು ಇರುವಾಗ ತನ್ನ ದುಃಖವನ್ನೇ ಟಿವಿ ಚಾನೆಲ್ ಬಂಡವಾಳ ಮಾಡಿಕೊಳ್ಳಲೆತ್ನಿಸುತ್ತಿರುವುದನ್ನು ಕಂಡು ಆಕೆಗೆ ಶಾಕ್ ಆಗುತ್ತದೆ.

ಬಾಂಬ್ ಸ್ಫೋಟಗೊಂಡಾಗ ರೈಲು ನಿಲ್ದಾಣದ ಹತ್ತಿರವೇ ಇರುವ ನಿರುದ್ಯೋಗಿ ಸುರೇಶ್ ಬದುಕುಳಿದವರ ನೆರವಿಗೆ ಧಾವಿಸುತ್ತಾನೆ. ಅಲ್ಲಿನ ರಕ್ತಸಿಕ್ತ ದೃಶ್ಯಗಳನ್ನು ಕಂಡು ದಂಗಾಗುತ್ತಾನೆ. ಮುಸಲ್ಮಾನರ ಬಗೆಗಿನ ಆತನ ಅಪನಂಬಿಕೆ ಹೆಚ್ಚಾಗುತ್ತದೆ. ಕಣ್ಣಿಗೆ ಬಿದ್ದ ಮುಸಲ್ಮಾನರೆಲ್ಲರೂ ಭಯೋತ್ಪಾದರಂತೆ ಆತನಿಗೆ ಕಾಣಿಸತೊಡಗುತ್ತಾರೆ. ಬಾಂಬ್ ಸ್ಫೋಟಗೊಂಡ ಮರುದಿನ ತಾನು ದಿನಾ ನೋಡುವ ಮುಸಲ್ಮಾನ ಯುವಕರು ಅವತ್ತು ಹೋಟೆಲ್‌ಗೆ ಬಾರದಿದ್ದನ್ನು ನೋಡಿ ಸಂಶಯಗೊಳ್ಳುತ್ತಾನೆ. ಅವರನ್ನು ಹುಡುಕಿಕೊಂಡು ಹೊರಡುತ್ತಾನೆ.

ಆ ಮುಸಲ್ಮಾನ ಹುಡುಗ ತಾನು ಪ್ರೀತಿಸುತ್ತಿರುವ ಹುಡುಗಿಯೊಂದಿಗೆ ಸರಸಸಲ್ಲಾಪಕ್ಕೆ ಹೋಗುತ್ತಾನೆ. ಆ ಹುಡುಗಿಯೂ ಭಯೋತ್ಪಾದಕಿಯಾಗಿರಬೇಕೆಂದೇ ಸುರೇಶ್ ನಂಬುತ್ತಾನೆ. ಮುಸಲ್ಮಾನರ ಬಗ್ಗೆ ಆತನಲ್ಲಿ ಅದೆಷ್ಟು ಅಸಹನೆ ಹೆಚ್ಚಾಗಿದೆ ಎಂದರೆ ಅವರಿಂದ ಉದ್ಯೋಗ ಅವಕಾಶ ಬಂದಾಗಲೂ ಅದನ್ನು ತಿರಸ್ಕರಿಸುತ್ತಾನೆ.

ಈ ಮಧ್ಯೆ ಟೀ ಮಾರುವ ಥಾಮಸ್ ತನ್ನ ಹೆಂಡತಿ ಮತ್ತು ಮಗಳೊಂದಿಗೆ ಶ್ರೀಮಂತರೇ ಭೇಟಿ ನೀಡುವ ಮಾಲ್ ಒಂದಕ್ಕೆ ಹೋಗುತ್ತಾನೆ. ಆ ಮಾಲ್‌ನಲ್ಲಿ ಬಿಟ್ಟಿ ಸಿಗುವ ಸುಗಂಧವನ್ನು ತನ್ನ ಮೇಲೆ ಸಿಂಪಡಿಸಿಕೊಳ್ಳುತ್ತಾನೆ. ಆದರೆ ಥಾಮಸ್‌ನಂತಹ ಬಡ ಜನರು ಮಾಲ್‌ನಂತಹ ಶ್ರೀಮಂತರ ಜಾಗಕ್ಕೆ ಬರುವುದೆಂದರೇನು ಎಂದು ಸೆಕ್ಯೂರಿಟಿ ಜನರು ಅವನಿಗೆ ಹೊಡೆದು ಅಲ್ಲಿಂದ ಒದ್ದೋಡಿಸುತ್ತಾರೆ.

ಥಾಮಸ್ ಈ ಅವಮಾನದಿಂದ ಕುದ್ದು ಹೋಗುತ್ತಾನೆ. ಶ್ರೀಮಂತರಿಗೆ ಪಾಠ ಕಳಿಸಬೇಕೆಂದು ನಿರ್ಧರಿಸುತ್ತಾನೆ. ಫೋನ್ ಬೂತ್‌ನಿಂದ ಕರೆ ಮಾಡಿ ಮಾಲ್‌ನಲ್ಲಿ ಬಾಂಬ್ ಇಟ್ಟಿರುವುದಾಗಿ ಬೆದರಿಸುತ್ತಾನೆ. ಯಾವ ಮಾಲ್‌ನಿಂದ ತನ್ನನ್ನು ಅವಮಾನಿಸಿ ಒದ್ದೋಡಿಸಿದ್ದರೋ ಅದೇ ಮಾಲ್‌ನಿಂದ ಶ್ರೀಮಂತರು ಜೀವ ಬೆದರಿಕೆಯಿಂದ ಕಾಲು ಕೀಳುವುದನ್ನು ನೋಡಿ ಆನಂದಿಸುತ್ತಾನೆ.



ಕಂಡಹಾಗೆ

■ ಗೌರಿ ಲಂಕೇಶ್

ಇಂತಹದ್ದೇ ಕರೆಗಳನ್ನು ಇನ್ನೂ ಹಲವು ಮಾಲ್‌ಗಳಿಗೆ ಮಾಡಿ ಸಂತೋಷಗೊಳ್ಳುತ್ತಾನೆ. ಆದರೆ ಒಂದು ಮಾಲ್‌ನಲ್ಲಿ ಮುದಿ ಶ್ರೀಮಂತನೊಬ್ಬ ಓಡಿ ಹೋಗುತ್ತಿರುವಾಗ ಹಾರ್ಟ್ ಅಟ್ಯಾಕ್ ಆಗುತ್ತದೆ. ಥಾಮಸ್‌ಗೆ ತನ್ನಿಂದಾದ ಅನಾಹುತದ ಬಗ್ಗೆ ಅರ್ಥವಾಗುತ್ತದೆ. ಶ್ರೀಮಂತನ ನೆರವಿಗೆ ಧಾವಿಸುತ್ತಾನೆ. ಆತನನ್ನು ಯಾವ ಆಸ್ಪತ್ರೆಗೆ ಸೇರಿಸುತ್ತಾರೆ ಎಂದು ನೋಡಿಕೊಂಡ ಆ ಮುದುಕ ಚೇತರಿಸಿಕೊಳ್ಳಲು ಎಂದು ಆಶಿಸುತ್ತಾನೆ.

ಇತ್ತ ಪೊಲೀಸ್ ಪೇದೆ ತುಕಾರಾಮ್ ಭ್ರಷ್ಟ ವ್ಯವಸ್ಥೆಯೊಂದಿಗೆ ಕೈಜೋಡಿಸಿದ್ದರಿಂದ ತಾನು ಏನೂ ಮಾಡಲಾಗಲಿಲ್ಲ, ಒಬ್ಬನೇ ಒಬ್ಬ ಭಯೋತ್ಪಾದಕನಿರಲಿ ಒಬ್ಬ ದೊಡ್ಡ ಕಳ್ಳನನ್ನು ಹಿಡಿಯಲಿಲ್ಲ ಎಂದು ಕುಡಿದ ಮತ್ತಿನಲ್ಲಿ ಹೇಳುತ್ತಾನೆ. ಇದನ್ನು ಕೇಳಿ ತನ್ನ ಜೀವವೂ ತುಕಾರಮನಂತೆ ನಿರುಪಯುಕ್ತವಾಗುತ್ತದೆಂದು ಹೆದರಿಯುವ ಪೇದೆ ಆತ್ಮಹತ್ಯೆ ಯತ್ನಿಸಿ ಸ್ವಲ್ಪದರಲ್ಲೇ ಬಚಾವಾಗುತ್ತಾನೆ.

ಇನ್ನೊಂದೆಡೆ ತನ್ನ ದೇಶದ ಬಗೆಗಿನ ಕಾಳಜಿ ಮತ್ತು ಮೌಲ್ಯಗಳನ್ನು ತೊರೆದು ದೂರದ ಅಮೆರಿಕಕ್ಕೆ ಹೋದರೆ ಹೇಗೆಂದು ಚಿಂತಿಸುವ ನಿಖಿಲ್‌ಗೆ ಯಾವ ದೇಶವೂ ಭಯೋತ್ಪಾದನೆಯಿಂದ ಹೊರತಾಗಿಲ್ಲ, ಅಮೆರಿಕಾ ಕೂಡ ಎಂದು ಅರಿವಾಗುತ್ತದೆ.

ಆ ದುರಂತದಲ್ಲಿ ತನ್ನ ಭಾವಿಪತಿಯನ್ನು ಕಳೆದುಕೊಂಡಿರುವ ರೂಪಾಲಿ ದುಃಖದಲ್ಲಿ ಮುಳುಗಿದ್ದಾಳೆ. ಅವಳಿಗೆ ಸಂತಾಪ ಸೂಚಿಸಲು ಬರುವ ಟಿವಿ ಚಾನೆಲ್‌ನವರು ಅವಳು ಕಣ್ಣೀರಿಡುತ್ತಿರುವುದನ್ನೇ ಸೆರೆಹಿಡಿದು 'ಕ್ರೈಮ್ ಟೈಮ್' ಕಾರ್ಯಕ್ರಮದಲ್ಲಿ ರೋಚಕವಾಗಿ ತೋರಿಸುತ್ತಾರೆ. ಇವತ್ತು ಸುದ್ದಿಯೂ ಒಂದು ಸರಕಾಗಿರುವಾಗ, ತನ್ನ ಕಣ್ಣೀರು ಆ ಸರಕನ್ನು ಮಾರಲು ಉಪಯೋಗವಾಗುತ್ತಿರುವುದು ಅವಳಲ್ಲಿ ಖಿನ್ನತೆ ಮೂಡಿಸುತ್ತದೆ.

ಒಂದು ರಾತ್ರಿ ರಸ್ತೆಯಲ್ಲಿ ಬ್ರೆಡ್ ಮಾರುತ್ತಿರುವ ಮುದಿ ಮುಸಲ್ಮಾನನನ್ನು ತಡೆಯುವ ಸುರೇಶ್ "ನಿನ್ನ ಬ್ಯಾಗ್‌ನಲ್ಲೇನಿದೆ? ಬಾಂಬ್ ಇದೆಯಾ? ಟ್ರೈನಿಗೆ ಬಾಂಬ್ ಹಾಕಿದ್ದು ನೀನೇನಾ" ಎಂದೆಲ್ಲಾ ವಿಚಾರಿಸಲಾರಂಭಿಸುತ್ತಾನೆ. ಆಗ ಪೇದೆ ತುಕಾರಾವ್ ಬಂದು ಆತನನ್ನು ತಡೆಯುತ್ತಾನೆ. ಬಂಧನದ ಭೀತಿಗೊಳಗಾಗುವ ಸುರೇಶ್ ತುಕಾರಾಮ್‌ನನ್ನು ದೂಡಿ ಪರಾರಿಯಾಗುತ್ತಾನೆ.

►►► 4

▶▶▶ 5

ಸುರೇಶನುಘವರಿಂದ ಹೇಗೆ ಸಮಾಜದಲ್ಲಿ ಅನಾಹುತವಾಗುತ್ತಿದೆ ಎಂದು ಯೋಚಿಸುವ ತುಕಾರಾಮ್‌ಗೆ ಒಂದು ರಾತ್ರಿ ಸುರೇಶ್ ಸಿಕ್ಕಿಬೀಳುತ್ತಾನೆ. ಆವನನ್ನು ತನ್ನ ಜೇಪಿಗೆ ಹತ್ತುವಂತೆ ಹೇಳುತ್ತಾನೆ. ತನ್ನನ್ನು ಬಂಧಿಸುತ್ತಿದ್ದಾರೆ ಎಂಬ ಭಯದಲ್ಲಿ ಜೀಪ್ ಹತ್ತುವ ಸುರೇಶನಿಗೆ ತುಕಾರಾಮ್ ಹೇಳುತ್ತಾನೆ: "ನೀನು ಇವತ್ತು ಒಬ್ಬರನ್ನು ತಳ್ಳುತ್ತೀಯ; ಆತನ ಹಿಂದೆ ಇಬ್ಬರು ಬಂದು ನಿಲ್ಲುತ್ತಾರೆ. ಆದನ್ನು ನೋಡಿ ನಿನ್ನ ಹಿಂದೆ ನಾಲ್ಕು ಜನ ನಿಲ್ಲುತ್ತಾರೆ. ಇದು ಹೀಗೆ ಮುಂದುವರೆದು ಎಲ್ಲಿಗೆ ಹೋಗುತ್ತೆ ಎಂಬ ಅರಿವಿದೆಯಾ ನಿನಗೆ? ಹೀಗೆ ಒಬ್ಬರನ್ನೊಬ್ಬರು ದೂಡವುದನ್ನು, ಪ್ರಚೋದಿಸುವುದನ್ನು ನಿಲ್ಲಿಸಿ. ಈಗ ಇಳಿದು ಮನೆಗೆ ಹೋಗು" ಎನ್ನುತ್ತಾನೆ.

ತನ್ನ ಜೀವನದಲ್ಲಿ ಏನನ್ನೂ ಸಾಧಿಸಲಿಲ್ಲ ಎಂದು ಕೊರಗುವ ತುಕಾರಾಮ್ ತನ್ನ ಮಾನವೀಯತೆಯಿಂದಾಗಿ ಮಹತ್ವಾದದ್ದನ್ನೇ ಸಾಧಿಸುತ್ತಾನೆ. ಪರಸ್ಪರ ಅಸಹನೆ, ಅನುಮಾನಗಳ ಜನರಲ್ಲಿ ನಂಬಿಕೆಯ ಪ್ರೀತಿಯ ಭಾವನೆ ಮಾಡಿಸುವಲ್ಲಿ ಸಫಲನಾಗುತ್ತಾನೆ.

ತುಕಾರಾಮ್‌ನ ಮಾತಿನಿಂದ ಸುರೇಶ್‌ನಲ್ಲಿ ಬದಲಾವಣೆಗಳಾಗುತ್ತವೆ. ಆತ ಯೋಚಿಸುತ್ತಾನೆ. ತನ್ನ ಸುತ್ತಲೂ ಜನ ಯಾವ ರಾಗ ದ್ವೇಷವಿಲ್ಲದೆ ಬದುಕುತ್ತಿರುವುದನ್ನು ನೋಡುತ್ತಾನೆ. ಕೊನೆಗೆ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡು ಎಂದು ಹೇಳಿದ್ದ ಮುಸಲ್ಮಾನರ ಕಂಪನಿಗೆ ಹೋಗುತ್ತಾನೆ. ಕೈತುಂಬ ಕಾಸು ದುಡಿಯುತ್ತಾನೆ. ಯಾವ ಯುವಕನನ್ನು ಸುರೇಶ್ ಭಯೋತ್ಪಾದಕ ಎಂದು ಸಂಶಯಿಸಿದ್ದನೋ ಆತ ಕೂಡ ತನ್ನಂತೆ ಹಲವಾರು ಕನಸುಗಳನ್ನು ಹೊತ್ತಿರುವ ಸಾಮಾನ್ಯ ಮನುಷ್ಯ ಎಂದು ಸುರೇಶನಿಗೆ ಅರ್ಥವಾಗುತ್ತದೆ. ಪರಸ್ಪರರನ್ನು ಸಂಶಯಿಸುವ, ದ್ವೇಷಿಸುವ ಬದಲಾಗಿ ಮಾನವೀಯತೆ ಹೊಂದಿದ್ದರೆ ಬದುಕೆಂಬುದು ಎಷ್ಟು ಸಹಜ ಮತ್ತು ಸುಂದರ ಎಂದು ಸುರೇಶನಿಗೆ ಗೊತ್ತಾಗುತ್ತದೆ.

ಮಾಲ್‌ನಲ್ಲಿ ಹೃದಯಘಾತಕ್ಕೆ ಒಳಗಾದ ಮುದುಕ ಚೇತರಿಸಿಕೊಂಡು ಮನೆಗೆ ಹೊರಡುವಾಗ ಥಾಮಸ್ ಆತನಿಗೆ ಒಂದು ಗುಲಾಬಿ ಹೂವನ್ನು ಕೊಡುತ್ತಾನೆ. ಮುಂಬೈ ತರಹದ 'ಜರಾ ಹಟ್ಕೆ, ಜರಾ ಬಚ್ಕೆ' ನಗರದಲ್ಲಿ ಯಾರನ್ನೂ ದ್ವೇಷಿಸಿದೆ ಬದುಕಬಹುದೆಂದು ಥಾಮಸ್‌ಗೆ ಅರ್ಥವಾಗುತ್ತದೆ.

ಚಿತ್ರದ ಕೊನೆಯಲ್ಲಿ ಪೇದೆ ತುಕಾರಾಮ್ ನಿವೃತ್ತಿ ಹೊಂದುತ್ತಾನೆ. ತನ್ನ ಠಾಣೆ ಬಿಟ್ಟು ಕೊನೆ ಬಾರಿ ಆತ ಹೊರಹೋಗುವ ಮುನ್ನ ತನ್ನ ಸಹದ್ಯೋಗಿಗಳೊಂದಿಗೆ ತನ್ನ ಎಂದಿನ ತಮಾಷೆಯ ಶೈಲಿಯಲ್ಲಿ ಒಂದೆರಡು ಹಿತವಚನ ನೀಡುತ್ತಾನೆ. ಶ್ರೀಮಂತರ ಬಗ್ಗೆ ಬಡವರ ಹೃದಯದಲ್ಲಿರುವ ಹರ್ತಾಳ್, ಮಕ್ಕಳಾಟವಾಗಿದ್ದ ಪಟಾಕಿ ಈಗ ಬಾಂಬ್‌ಗಳಾಗಿರುವುದು, ಸಾವಿರಾರು ಜನರಿಗೆ ಉದ್ಯೋಗ ಒದಗಿಸಿದ್ದ ಮಿಲ್‌ಗಳು ಬಂದ್ ಆಗಿ ಅವುಗಳ ಜಾಗದಲ್ಲಿ ಮಾಲ್‌ಗಳು ತಲೆ ಎತ್ತಿರುವುದು, ಭಯೋತ್ಪಾದಕರ ಬಾಂಬ್‌ಗಳು ಸಮಾಜದ ಒಗ್ಗಟ್ಟನ್ನೇ ಛಿದ್ರಗೊಳಿಸುತ್ತಿರುವುದು, ಧರ್ಮದ ಆಧಾರದಲ್ಲಿ ಜನರ ನಡುವೆ ಬಿರುಕುಗಳು ಮುಂದುತ್ತಿರುವುದು...

ಇವನ್ನೆಲ್ಲಾ ಆತ ಹೇಳುತ್ತಿರುವಾಗಲೇ ನಿಖಿಲ್ ರೈಲು ಪ್ರಯಾಣದ ಬಗೆಗಿನ ತನ್ನ ಭಯವನ್ನು ಮೀರಿ ನಿಲ್ಲುತ್ತಾನೆ, ಸುರೇಶ್ ಮತ್ತು ಮುಸಲ್ಮಾನ ಯುವಕನ ನಡುವೆ ಸ್ನೇಹ ಏರ್ಪಡುತ್ತದೆ, ಥಾಮಸ್ ನೆಮ್ಮದಿಯ ನಿಟ್ಟುಸಿರು ಬಿಡುತ್ತಾನೆ. ರೂಪಾಳಿ ಮತ್ತಷ್ಟು ಪ್ರಬುದ್ಧತೆ ಪಡೆಯುತ್ತಾಳೆ.

ಈ ಅದ್ಭುತ ಚಿತ್ರವನ್ನು ನಿರ್ದೇಶಿಸಿರುವವರು ನಿಷಿಕಾಂತ್ ಕಾಮತ್ ಎಂಬ ತರುಣ. ಇದರಲ್ಲಿ ಕೆ.ಕೆ. ಮನೇನ್, ಇರ್ಫಾನ್ ಖಾನ್, ಸೋಹಾ ಆಲಿ ಖಾನ್, ಮಾಧವನ್, ಪರೇಶ್ ರಾವಲ್, ವಿಜಯ್ ಮೌರ್ಯ ಎಲ್ಲರೂ ಚೆನ್ನಾಗಿ ನಟಿಸಿದ್ದಾರೆ. ಈ ಚಿತ್ರ ನಿಮ್ಮೂರಿಗೆ ಬಂದರೆ ತಪ್ಪದೆ ನೋಡಿ.


ಯಾಕೆಂದರೆ ಈ ಚಿತ್ರ ಭಯೋತ್ಪಾದಕರಿಗೆ ಒಂದು ಉತ್ತಮವಾಗಿದೆ. ಅವರ ಅಟ್ಟಹಾಸದಿಂದ ಭಯಬೀತರಾಗುವುದಕ್ಕಿಂತ ಆದನ್ನು ಮೀರಿ ಬದುಕಿನ ಮೌಲ್ಯವನ್ನು ಹೇಳಿಕೊಡುತ್ತದೆ.

ನಿನ್ನೆ ದೆಹಲಿಯಲ್ಲಿ ಮತ್ತು ಅದಕ್ಕೂ ಹಿಂದೆ ಅಹಮದಾಬಾದ್ ಮತ್ತು ಬೆಂಗಳೂರಿನಲ್ಲಿ ಭಯೋತ್ಪಾದಕರ ಇಂತಹ ಕೃತ್ಯಗಳಿಂದ ಅದೆಷ್ಟೋ ಅಮಾಯಕರು ಸತ್ತಿದ್ದಾರೆ. ಅವರಿಗೆ ನಮ್ಮ ಕಣ್ಣೀರು.

ಅವರೆಲ್ಲರನ್ನು ಭಯೋತ್ಪಾದಕರು ಬಲಿ ತೆಗೆದುಕೊಂಡಿರಬಹುದು. ಆದರೆ ನಮ್ಮ ಆತ್ಮಗಳನ್ನು ಅವರು ಬಲಿ ತೆಗೆದುಕೊಂಡಿಲ್ಲ, ಅದು ಎಂದೂ ಸಾಧ್ಯವಿಲ್ಲ. ಜಾತಿ, ಧರ್ಮ, ಲಿಂಗ, ವರ್ಗ ಎಂಬ ಭೇದಗಳನ್ನು ಮರೆತು ನಾವು ಒಗ್ಗಟ್ಟಾಗಿ ಜೀವಿಸುವವರಿಗೆ ನಮ್ಮ ಆತ್ಮ, ಶಾಂತಿ, ನೆಮ್ಮದಿ ಭಯೋತ್ಪಾದಕರ ಕೃತ್ಯಗಳಿಗೆ ಎಂದೂ ಬಲಿಯಾಗುವುದಿಲ್ಲ...

■ ಗೌರಿ ಲಂಕೇಶ್

ಅಕಾಡೆಮಿ ನೇಮಕ: 'ಎಷ್ಟು ಕೊಡ್ತೀರಾ' ಅಂದನಂತೆ ವಿಜಯೇಂದ್ರ



ಒಂದು ಸಾರಿ ಲಂಚದ ರುಚಿ ನೋಡಿದವರಿಗೆ ಆಮೇಲೆ ಕಾವೇರಿ ನೀರು ಹಾಗೂ ಚರಂಡಿ ನೀರಿನ ವ್ಯತ್ಯಾಸವೇ ಗೊತ್ತಾಗುವುದಿಲ್ಲವೇನೊ!

ಮುಖ್ಯಮಂತ್ರಿ ಯಡಿಯೂರಪ್ಪನ ಪುತ್ರರತ್ನ 'ಶ್ರೀಮಾನ್ ವಿಜಯೇಂದ್ರ ಸಾಹೇಬರು' ಈಗ ವರ್ಗಾ ದಂಧೆಯಲ್ಲಿ ಕೋಟ್ಯಂತರ ರೂಪಾಯಿ ಬಾಚಿಕೊಳ್ಳುವ ದೇಶೋದ್ಧಾರದ ಕೆಲಸದಲ್ಲಿ ಬ್ಯುಸಿಯಾಗಿ ಹೋಗಿದ್ದಾನಲ್ಲವೆ? ಈಗ ಅದೇ ಬಿಸಿಯಲ್ಲಿ ಕನ್ನಡದ ವಿವಿಧ ಅಕಾಡೆಮಿಗಳ ನೇಮಕಾತಿಯಲ್ಲೂ ಹಣ ವಸೂಲಿ ಮಾಡಲು ಹೊರಟದ್ದು ಮಾತ್ರ ಎಲ್ಲೂ ಸುದ್ದಿಯಾಗಲೇ ಇಲ್ಲ.

ಯಡ್ಡಿ ಸರ್ಕಾರ ಬಂದು ನೂರು ದಿನ ಆದರೂ ಸಾಹಿತ್ಯ ಅಕಾಡೆಮಿ, ನಾಟಕ, ಲಲಿತ ಕಲೆ, ಸಂಗೀತ-ನೃತ್ಯ ಜಾನಪದ ಅಕಾಡೆಮಿಗಳಿಗೆ ಇದುವರೆಗೂ ಯಾರನ್ನು ನೇಮಿಸಿಲ್ಲ.


ಇವುಗಳ ಅಧ್ಯಕ್ಷರು, ಸದಸ್ಯರುಗಳಾಗಿ ಬಹುತೇಕ 'ಬ್ರಾಹ್ಮಣಶಾಹಿ' ಬುದ್ಧಿಜೀವಿಗಳೇ ನೇಮಕಗೊಳ್ಳುವುದಂತೂ ಖಚಿತ ಮತ್ತು ಆ ಪಟ್ಟಿ ನೇರವಾಗಿ ಕೇಶವಕೃಪದಿಂದಲೇ ಯಡ್ಡಿ ಕೈ ಸೇರುವುದೂ ಗ್ಯಾರಂಟಿ ಬಿಡಿ. ಆದರೆ ಈ ನಡುವೆ ಕೆಲ ಆತುರಗಾರರು ಯಾರೋ ಮಧ್ಯವರ್ತಿಯ ಮೂಲಕ ಮೊನ್ನೆ ಯಡ್ಡಿಯ ಕಮಿಷನ್ ಏಜೆಂಟ್ ವಿಜಯೇಂದ್ರನ ಹತ್ತಿರ ಹೋಗಿ ಅಕಾಡೆಮಿ ವಿಚಾರ ಕೇಳಿದರಂತೆ. ಕಾಸು ಕೊಟ್ಟದ್ದ, ಪೊಲೀಸ್ ಇನ್ಸ್‌ಪೆಕ್ಟರುಗಳ ವರ್ಗಾ ಲಿಸ್ಟ್‌ನಲ್ಲಿ ತಲೆ ಮುಳುಗಿಸಿ ಕುಳಿತಿದ್ದ ಈ ವಿಜಯೇಂದ್ರ 'ಹ್ಞಾ... ಸರಿ, ಎಷ್ಟು ಕೊಡ್ತೀರಾ ಹೇಳಿ' ಅಂದನಂತೆ.


ಈ ವ್ಯವಹಾರದ ಮಾತು ಕೇಳಿ ಬೆಚ್ಚಿಬಿದ್ದ ಸಾಹಿತಿಗಳು 'ಸಾರ್ ಇದು ಐಎಎಸ್-ಕೆಎಎಸ್ ತರದ ಪೋಸ್ಟ್ ಅಲ್ಲಾ ಸಾರ್. ಸೇವೆ, ಸಾಹಿತ್ಯ ಸೇವೆದು' ಎಂದು ಏನೇನೊ ತೊದಲಿದರಂತೆ. ಅಷ್ಟಕ್ಕೇ ರೇಗಿಬಿದ್ದ ವಿಜಿ 'ರ್ರೀ... ನನಗೇ ಹೇಳಕ್ ಬರ್‍ತೀರಾ, ಈ ಅಕಾಡೆಮಿಗಳಿಗೆ ಎಷ್ಟು ಟರ್ನ್‌ಓವರ್ ಇದೆ. ಟಿಎ-ಡಿಎ ಎಷ್ಟಿದೆ ಎಲ್ಲಾ ನನಗೆ ಗೊತ್ತು ಹೋಗ್ರಿ' ಅಂತಾ ಕಿರುಚಿಕೊಂಡನಂತೆ.

ಅಲ್ಲಿನ ಸಂಗ ಅಭಿಮಾನ ಭಂಗ ಅಂದುಕೊಳ್ಳುತ್ತಾ ಅಕಾಡೆಮಿ ಅಧ್ಯಕ್ಷಾಕಾಂಕ್ಷಿಗಳು ವಾಪಸ್ ಬಂದರಂತೆ.

ಇದು ಒಂದು ತಮಾಷೆಯಾದರೆ ಕನ್ನಡ ಸಂಸ್ಕೃತಿ ಇಲಾಖೆಯ ಗೋಳುಗಳೇ ಬೇರೆ ಇವೆ.

'ಇದು ಭಾರಿ ಪಬ್ಲಿಸಿಟಿ ಸಿಗೋ ಇಲಾಖೆ, ಬೇರೆ ಯಾರಿಗೂ ಕೊಡಬೇಡಿ' ಅಂತ ತಲೆಕೆಟ್ಟ ಬುದ್ಧಿಜೀವಿಯೊಬ್ಬ ಹೇಳಿಕೊಟ್ಟ ಪರಿಣಾಮ ಕನ್ನಡ-ಸಂಸ್ಕೃತಿ ಇಲಾಖೆ, ಈಗ ಯಡ್ಡಿ ಕೈಲೇ ಸಿಕ್ಕು ನರಳುತ್ತಿವೆ. ಆದರ ರಾಡಿ ರಾಜಕೀಯದಲ್ಲಿ ಮುಳುಗಿಹೋಗಿರುವ ಯಡ್ಡಿ ಇದುವರೆಗೂ ಇಲಾಖೆಯ ಒಂದೇ ಒಂದು ಮುಖ್ಯ ಕಾರ್ಯಕ್ರಮದಲ್ಲಿ ಬಂದು ಭಾಗವಹಿಸಿಲ್ಲ. ಜೊತೆಗೆ ಸುಭೀರ್ ಹರಿಸಿಂಗ್ ಎಂಬ ಕನ್ನಡ ಭಾಷೆ-ಸಂಸ್ಕೃತಿಯ ಗಂಧಗಾಳಿಯೇ ಇರದ ಐಎಎಸ್ ಆಫೀಸರ್‌ನನ್ನು ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಮಾಡಿ ಕೂರಿಸಲಾಗಿದೆ. ಅಡ್ರೆಸ್ಸೇ ಇರದ ಮಂತ್ರಿ, ಕನ್ನಡವೇ ಗೊತ್ತಿರದ ಕಾರ್ಯದರ್ಶಿ ಇದ್ದರೆ ಯಾವ ಇಲಾಖೆ ತಾನೆ ಉದ್ಧಾರವಾಗಲು ಸಾಧ್ಯ ಹೇಳಿ.


ನಾಡಿಗ


ಚಿಮೂ

ಈ ನಡುವೆ ವಿವಿಧ ಅಕಾಡೆಮಿಗಳ ಅಧ್ಯಕ್ಷರ ನೇಮಕದ ವಿಚಾರಕ್ಕೆ ಇನ್ನೂ ಬಿಸಿ ಏರಿಲ್ಲ, ಆದರೂ ಆಕಾಂಕ್ಷಿಗಳಿಗೇನೂ ಬರವಿಲ್ಲದಂತಾಗಿವೆ.

ಕೇಶವಶಿಲ್ಪದಲ್ಲಿ ಪಟ್ಟಿ ರೆಡಿ

ಈ ಅಕಾಡೆಮಿಗಳ ಇತಿಹಾಸದುದ್ದಕ್ಕೂ ಕಾಂಗ್ರೆಸ್. ಜೆಡಿಎಸ್ ಯಾವುದೇ ಸರ್ಕಾರವಿದ್ದಾಗಲೂ ಪ್ರಗತಿಪರರು ಸಮಾಜವಾದಿ ಹಿನ್ನೆಲೆಯವರೇ ಅಧ್ಯಕ್ಷರು-ಸದಸ್ಯರುಗಳಾಗಿ ನೇಮಕಗೊಳ್ಳುತ್ತಾ ಬಂದಿದ್ದರು. ಆದರೆ ಈ ಬಾರಿ ಖಂಡಿತಾ ಹಾಗಾಗುವುದಿಲ್ಲ. ಶಿಕ್ಷಣ, ಸಾಹಿತ್ಯ ಸಂಸ್ಕೃತಿಯನ್ನು 'ಬ್ರಾಹ್ಮಣೀಕರಿಸುವ' ಅಜೆಂಡಾ ಇರುವ ಆರ್‌ಎಸ್‌ಎಸ್ ವಟುಗಳು ಅಕಾಡೆಮಿ ನೇಮಕದಲ್ಲೂ ತಲೆ ಹಾಕುತ್ತಾರೆ. ಯಕ್ಷಗಾನ ಅಕಾಡೆಮಿಗೆ ಕುಂಬ್ಳೆ ಸುಂದರ ರಾವ್ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಚಂದ್ರು ಈಗಾಗಲೇ ನೇಮಕವಾಗಿದ್ದಾರೆ. ಇವರಿಬ್ಬರೂ ಬಿಜೆಪಿಗಳು. ಇನ್ನು ಪುಸ್ತಕ ಪ್ರಾಧಿಕಾರಕ್ಕೆ ಕವಿ ಸಿದ್ಧಲಿಂಗಯ್ಯ ಬಂದಿದ್ದಾರೆ. ಇವರೂ ಆರ್‌ಎಸ್‌ಎಸ್ ಪೈಕಿ ಮನುಷ್ಯನೆ.

ಸಾಹಿತ್ಯ ಅಕಾಡೆಮಿಗೆ ಈಗ ಕೇಳಿಬರುತ್ತಿರುವ ಹೆಸರುಗಳು ಸುಮತೀಂದ್ರ ನಾಡಿಗ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಮತ್ತು ಕವಿ ಎಚ್.ಎಸ್. ವೆಂಕಟೇಶ್ ಮೂರ್ತಿಯವರದ್ದು... ಸಿದ್ದಲಿಂಗ ಪಟ್ಟಣಶೆಟ್ಟಿಯವರೂ ಇದಕ್ಕಾಗಿ ಲಾಬಿ ನಡೆಸುತ್ತಿದ್ದಾರಂತೆ.

ನಾಟಕ ಅಕಾಡೆಮಿಗೆ ಡಾ. ಬಿ.ವಿ. ರಾಜಾರಾಂ ಖಚಿತ ಎನ್ನಲಾಗುತ್ತಿದೆ. ಏಕೆಂದರೆ ಈತ ಮುಖ್ಯಮಂತ್ರಿ ಚಂದ್ರುರ ಖಾಸಾ ಗೆಳೆಯ. ಇನ್ನು ಜಾನಪದ ಅಕಾಡೆಮಿಗೆ ಕುವೆಂಪು ವಿ.ವಿ.ಯ ಡಾ. ಬಸವರಾಜ ನೆಲ್ಲೀಸರ ಓಡಾಡುತ್ತಿದ್ದಾರೆ. ಅವರು ಶಿವಮೊಗ್ಗದ ಏನೋ ಲಿಂಕ್ ಹಿಡಿದಿದ್ದಾರಂತೆ. ತಮಾಷೆ ಏನೆಂದರೆ ಪ್ರಗತಿಪರ ಚಿಂತನೆಗಳ ಗಾಯಕ ಅಪ್ಪಗೆರೆ ತಿಮ್ಮರಾಜು ಸೈತ ತಮ್ಮ ಪ್ರಗತಿಪರತೆ ಬಿಟ್ಟು ಅರ್ಜಿ ಕೈಲಿಡಿದು ಓಡಾಡುತ್ತಿರುವುದು.

ಮತ್ತೊಂದೆಡೆ ಮೈಸೂರಿನ 'ರಂಗಾಯಣ'ದ ಮುಖ್ಯಸ್ಥರಾಗಲೂ ಲಾಬಿಗಳು ಶುರುವಾಗಿವೆ. ಜನ್ನಿ, ಮಲ್ಲಿಕಾರ್ಜುನ ಸ್ವಾಮಿ ಮಹಾಮನೆ ಅರ್ಜಿ ಹಾಕುತ್ತಿರುವವರ ಲಿಸ್ಟ್‌ನಲ್ಲಿದ್ದಾರೆ.

ಇವರಲ್ಲಿರುವ ಕೆಲವರನ್ನು RSSಗಳು ನಂಬುವುದಿಲ್ಲವಾದ್ದರಿಂದ ಕುರ್ಚಿ ಸಿಗುವ ಛಾನ್ಸ್ ಕಡಿಮೆ. ಉಳಿದಂತೆ ಹೊರನೋಟಕ್ಕೆ ಜಾತ್ಯತೀತರಂತೆ ತೋರಿಸಿಕೊಳ್ಳುತ್ತಲೇ ಒಳಗೊಳಗೇ ಚೆಡ್ಡಿ ಬುದ್ಧಿ ಹೊಂದಿರುವವರು ನಾಳೆ ಕೇಶವ ಶಿಲ್ಪದಲ್ಲಿ ಕಾಣಿಸಿಕೊಂಡರೂ ಆಶ್ಚರ್ಯವಿಲ್ಲ. ಚಿದಾನಂದಮೂರ್ತಿ ತರಹದ ರೋಗಿಷ್ಟ ಮನಸ್ಸಿನವರಿಗೆ ಛಾನ್ಸ್ ಇಲ್ಲ ಎಂಬುದೇ ಸದ್ಯದ ಸಮಾಧಾನಕರ ವಿಚಾರ. ■

ರೈತ ಸಂಘ ಮತ್ತೆ ಒಳಜಗಳ

ದುರ್ಭಿಕ್ಷದಲ್ಲಿ ಅಧಿಕ ಮಾಸ ಎನ್ನುವಂತೆ ರಾಜ್ಯ ರೈತ ಸಂಘದಲ್ಲಿ ಮತ್ತೊಂದು ವಿಭಜನೆಯ ಸಾಧ್ಯತೆಗಳು ಕಾಣಿಸುತ್ತಿವೆ.

ಇತ್ತೀಚೆಗೆ ನಡೆದ ರೈತ ಸಂಘದ ರಾಜ್ಯ ಸಮಿತಿ ಸಭೆಯಲ್ಲಿ ಎಲ್ಲರೆದುರೇ ಕಿತ್ತಾಡಿಕೊಂಡ ಕೋಡಿಹಳ್ಳಿ ಚಂದ್ರಶೇಖರ್ ಹಾಗೂ ಪುಟ್ಟಣ್ಣಯ್ಯನವರ ವರ್ತನೆ ನೋಡಿ ರೋಸತ್ತುಹೋಗಿರುವ ಉಳಿದ ನಾಯಕರು ಈ ತೀರ್ಮಾನಕ್ಕೆ ತಲುಪಿದ್ದಾರೆ. ಬೆಳಗಾವಿಯ ಹಿರಿಯ ರೈತನಾಯಕರಾದ ಸುಭಾಷ್ ಬಾಬು ಪಾಟೀಲರು ಹಾಗೂ ಬಾಬಾಗೌಡ ಪಾಟೀಲರು ಈ ಗುಂಪಿನ ನಾಯಕತ್ವ ವಹಿಸಲು ಸಜ್ಜಾಗಿದ್ದಾರೆ.


ಪುಟ್ಟಣ್ಣಯ್ಯ

ಎಲ್ಲರಿಗೂ ಗೊತ್ತಿರುವಂತೆ ಕರ್ನಾಟಕದ ಯಾವ ಭಾಗದಲ್ಲೂ ಈಗ ರೈತ ಸಂಘ ಮೊದಲಿದ್ದಂತೆ ಒಂದು ಬಲಿಷ್ಠ ಹೋರಾಟ ಸಂಘಟನೆಯಾಗಿ ಉಳಿದಿಲ್ಲ. ಪ್ರೊ. ನಂಜುಂಡಸ್ವಾಮಿಯವರ ನಿರ್ಗಮನದ ನಂತರ ರೈತ ಸಂಘಕ್ಕಿದ್ದ ಚೂರುಪಾರು ಸಂಘಟನಾ ಸಾಮರ್ಥ್ಯ, ಹೋರಾಟದ ಕಿಚ್ಚು ಕರಗಿ ಹೋಗಿತ್ತು. ಹೀಗೆ ಒಂದೆಡೆ ಸಂಘಟನೆ ದುರ್ಬಲವಾದಂತೆ ಮತ್ತೊಂದೆಡೆ ರೈತರ ಬಿಕ್ಕಟ್ಟುಗಳು ಬೆಳೆಯುತ್ತಾ ಇವತ್ತು ರೈತರ ಆತ್ಮಹತ್ಯೆ ಎನ್ನುವುದಂತೂ ನಿತ್ಯದ ವಿದ್ಯಮಾನವಾಗಿ ಹೋಗಿದೆ.

ಈಗ ನಾನೆಚ್ಚೋ, ನೀನೆಚ್ಚೊ ಎಂದು ಜಗಳಕ್ಕೆ ಬಿದ್ದಿರುವ ನಾಯಕರುಗಳು ಈ ರೈತ ದುರಂತಗಳ ಬಗ್ಗೆ ಚೂರೂ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ, ಅದರ ಬದಲಾಗಿ ನಾಶವಾದ ಮನೆಯ ವಾರಸುದಾರತ್ವಕ್ಕೆ ಜಿದ್ದಾಜಿದ್ದಿಗೆ ಬಿದ್ದಿರುವುದು ದುರಂತಮಯವಾಗಿ ಕಾಣುತ್ತಿದೆ.

ರೈತ ಬಣಗಳ ವಿಲೀನ ಆಗೇಹೋಯಿತೆಂದು ಕಳೆದ ಒಂದೆರಡು ವರ್ಷಗಳಿಂದ ಕೇವಲ ಪತ್ರಿಕಾ ಹೇಳಿಕೆಗಳು ಬರುತ್ತಿದ್ದವಾದರೂ ಒಳಗಿನ ವಿದ್ಯಾಮಾನಗಳು ಅದಕ್ಕೆ ಪೂರಕವಾಗಿಲ್ಲ.

ಮೊನ್ನೆ ನಡೆದ ರಾಜ್ಯಸಮಿತಿ ಸಭೆ ಅದನ್ನು ಮತ್ತೊಮ್ಮೆ ಸಾಬೀತುಮಾಡಿದೆ.

'ನನಗೆ ಹೇಳದೆ ಈ ಸಭೆ ಕರೆದಿದ್ದೀರಾ' ಎಂತಲೇ ಜಗಳದ ಮೂಡ್‌ನಲ್ಲಿ ಪುಟ್ಟಣ್ಣಯ್ಯ ಸಭೆಗೆ ಬಂದರೆ, 'ನಾನು ಬನ್ನಿ ಬನ್ನಿ ಅಂತ ಎಲ್ಲರ ಹತ್ತಿರಕ್ಕೂ ಜೀ ಹುಜೂರ್ ಅಂತ ಓಡಾಡಬೇಕಾ' ಅಂತ ಕೋಡಿಹಳ್ಳಿ ಚಂದ್ರಶೇಖರ್ ಕಿಟಕಿಯಾಡಿದ್ದಾರೆ.


ಕೋಡಿಹಳ್ಳಿ

ಸಭೆಯಲ್ಲಿ ಚರ್ಚಿಸಬೇಕಾದ ಮುಖ್ಯ ವಿಚಾರಗಳನ್ನೆಲ್ಲಾ ಬಿಟ್ಟು ಯಾವಾಗ ಈ 'ಈಗೋ ಕಾಳಗ' ಹತ್ತಿಕೊಂಡಿತೋ ಇನ್ನುಳಿದವರಿಗೆ ರೇಗಿ ಹೋಗಿದೆ.

'ನೀವು ಹೀಗೇ ಕಿತ್ತಾಡಿಕೊಂಡಿರಿ ನಾವು ಬೇರೆ ಸಂಘಟನೆ ಮಾಡಿಕೊಂಡು ಕೆಲಸ ಮಾಡುತ್ತೇವೆ'ಎಂದು ಅವರೆಲ್ಲಾ ಎದ್ದು ಹೋಗಿದ್ದಾರೆ.

ಆ ಪ್ರಕಾರವಾಗಿ ಮುಂದೆ ಸುರೇಶ್‌ಬಾಬು ಪಾಟೀಲರ ನೇತೃತ್ವದಲ್ಲಿ ರೈತ ಸಂಘದ ಮೂರನೆಯ ಬಣ ಅಸ್ತಿತ್ವಕ್ಕೆ ಬಂದರೂ ಬಂದೀತೆ.

ಒಂದಂತೂ ಸತ್ಯ.


ಜೊತೆಲಿರಬೇಕಾದರವೇ ಕಿತ್ತಾಡಿಕೊಂಡರೆ, ಸ್ವಪ್ರತಿಷ್ಠೆ ಮುಂದುಮಾಡಿಕೊಂಡು ಕುಳಿತರೆ ಕೈಲಿ ವಿಷದ ಬಾಟಲಿ ಹಿಡಿದುಕೊಂಡಿರುವ ನಿಷ್ಪಾಪಿ ರೈತನಿಗೆ ಧೈರ್ಯ ನೀಡುವರರ್‍ಯಾರು?


ಯಡ್ಡಿ ಸರ್ಕಾರ ಅಮೃತಮಹಲ್ ಕಾವಲನ್ನು ಬ್ರಾಹ್ಮಣ ಮಠಾಧೀಶನೊಬ್ಬನ ಸುಪರ್ದಿಗೆ ಒಪ್ಪಿಸಲು ಹೊರಟಾಗಲೂ ಒಬ್ಬಾನೊಬ್ಬ ರೈತ ನಾಯಕನೂ ವಿರೋಧಿಸಿ ಒಂದು ಹೇಳಿಕೆಯನ್ನೂ ಕೊಡಲಿಲ್ಲ.

ಅಮೃತ ಮಹಲ್ ಹಸುಗಳು ನೇರವಾಗಿ ರೈತರ ಬದುಕಿಗೇ ಸಂಬಂಧಿಸಿದ್ದಾಗಿದ್ದಾಗಲೂ!

ಕೋಡಿಹಳ್ಳಿ ಚಂದ್ರಶೇಖರ್, ಪುಟ್ಟಣ್ಣಯ್ಯ ಸುರೇಶ್ ಬಾಬು, ಪಾಟೀಲರು ಒಂದು ಕ್ಷಣ ತಣ್ಣಗೆ ಕೂತು 'ಈ ಕೆಲಸಕ್ಕೆ ಬಾರದ ಜಗಳದಿಂದ ಏನುಪಯೋಗ' ಎಂದು ಯೋಚಿಸಬಾರದಾ? ■

ಅಶೋಕ್-ಲಿಂಬಾವಳಿ ಜಂಗಿಕುಸ್ತಿ





ಕಾಂಗ್ರೆಸ್ ದಳಪತಿಗಳ ಪಾಲಿಗಿದು ಸಂತೋಷದ ಸುದ್ದಿಯೋ ಅಥವಾ ಅವಮಾನಕರ ಸಂಗತಿಯೋ ಗೊತ್ತಿಲ್ಲ.

ಕಚ್ಚಾಟದಲ್ಲಿ ಬಿಜೆಪಿ ಮಂತ್ರಿಗಳು ತಾವು ಕಾಂಗ್ರೆಸ್ ನಂಟರುಗಳಿಗಿಂತಲೂ ಒಂದು ಕೈ ಮೇಲೆಂದು ಸಾಬೀತು ಮಾಡಿದ್ದು ತೀರ ಇತ್ತೀಚೆಗೆ. ಇಲ್ಲಿಗೆ ವಾರದ ಹಿಂದೆ ಭದ್ರಾ ಮೇಲ್ದಂಡೆಗೆ ಸಂಬಂಧಪಟ್ಟಂತೆ ಯಡ್ಡಿ ಸಂಪುಟದ ಕ್ಯಾಬಿನೆಟ್ ಮೀಟಿಂಗ್ ಇತ್ತಲ್ಲ; ಅಲ್ಲಿ ಸಾರಿಗೆ ಮಂತ್ರಿ ಅಶೋಕ್ ಮತ್ತು ಉನ್ನತ ಶಿಕ್ಷಣ ಮಂತ್ರಿ ಲಿಂಬಾವಳಿ ಹೊಡೆದಾಡಿಕೊಳ್ಳುವುದೊಂದೇ ಬಾಕಿ!

ಅವತ್ತು ನಡೆದದ್ದಿಷ್ಟು. ಸಂಪುಟ ಸಭೆಯಲ್ಲಿ ಭದ್ರಾ ಮೇಲ್ದಂಡೆಗೆ ಸಂಬಂಧಪಟ್ಟಂತೆ ಈಶ್ವರಪ್ಪ ಮತ್ತು ಶಂಕರಮೂರ್ತಿ ಪರವಹಿಸಿ ಮಾತಿಗಿಳಿದರೆ ಅದನ್ನು ರವೀಂದ್ರನಾಥ್ ಖಂಡಿಸಿದ್ದಾರೆ. ಈ ಮಧ್ಯೆ ರಾಜ್ಯ ಒಕ್ಕಲಿಗರ ಪ್ರಶ್ನಾತೀತ ನಾಯಕ ನಾನೇ ಎಂಬ ಗತ್ತಿನಲ್ಲಿ ಅದೇನೋ ಹೇಳಲು ಎದ್ದ ಸಾರಿಗೆ ಮಂತ್ರಿ ಅಶೋಕ್‌ರನ್ನು ಲಿಂಬಾವಳಿ ಕೆಣಕಿದ್ದಾರೆ. ಮಾತಿಗೆ ಮಾತು ಬೆಳೆದು ಅದು 'ಅಮ್ಮಾ ಅಕ್ಕ'ದ ಹಂತ ಮುಟ್ಟಿದೆ.

ಇದ್ದಕ್ಕಿದ್ದಂತೆ ನಡೆದ ಈ ಘಟನೆಯಿಂದ ಅಂದು ಸಭೆಯಲ್ಲಿದ್ದ ಸಚಿವರೆಲ್ಲ ದಂಗಾಗಿ ಇನ್ನೇನು ಕೈಕೈ ಮಿಲಾಯಿಸಬೇಕಿದ್ದ ಅಶೋಕ್ ಮತ್ತು ಲಿಂಬಾವಳಿ ಯನ್ನು ಎಳೆದೆಳೆದು ಕೂರಿಸಿದ್ದಾರೆ.

ಅಷ್ಟಕ್ಕೂ ಒಂದಾನೊಂದು ಕಾಲಕ್ಕೆ ಅನಂತ್ ಕುಮಾರ್ ಭಟ್ಟಂಗಿಗಳಂತಿದ್ದ ಈ ಪಡ್ಡೆ ಮಂತ್ರಿಗಳಿಬ್ಬರೂ ಈಗ ಹಾವು ಮುಂಗುಸಿಗಳಂತೆ ಕಚ್ಚಾಟಕ್ಕಿಳಿದದ್ದಕ್ಕೆ ಕಾರಣವೇ ಬೇರೆ. ಸದ್ಯ ಅಶೋಕ್ ಯಡ್ಡಿಯ ಪಕ್ಕಾ ಬಂಟ. ಸಾರಿಗೆಯಂಥ ಸವಕಲು ಖಾತೆ ಕೊಟ್ಟದ್ದಕ್ಕೆ ಅಶೋಕ್‌ಗೆ ಮೊದಮೊದಲು ಯಡ್ಡಿಯ ಮೇಲೆ ಮುನಿಸಿತ್ತಾದರೂ ತನ್ನ ತಮ್ಮ ರವಿಯ ರಿಯಲ್ ಎಸ್ಟೇಟ್ ದಂಧೆಗೆ ನೇರವಾಗಿ ಐನೂರು ಕೋಟಿ ಮೊತ್ತದ ಬಿಡಿಎ ಭೂಮಿಯನ್ನು ಡೀನೋಟಿಫೈ ಮಾಡಿ ಕೊಟ್ಟ ಮೇಲೆ ಆತ್ಮ ಸಂತೃಪ್ತಿಗೊಂಡಿದೆ.

ಹೀಗಾಗಿ ಅಶೋಕ್‌ಗೀಗ ಅನಂತುಗಿಂತಲೂ ಯಡ್ಡಿಯೇ ಪರಮಗುರು. ಆದರೆ ಲಿಂಬಾವಳಿ ಹಾಗಲ್ಲ, ಮೇಲುನೋಟಕ್ಕೆ ಯಡ್ಡಿಗೆ ಮಸ್ಕಾ ಹೊಡೆದರೂ ಒಳಗೊಳಗೇ ಅನಂತು ನಂಟರೆ. ಮೊನ್ನೆ 'ಅಕ್ಕ' ಸಮ್ಮೇಳನಕ್ಕೆ ಹೋಗುವ ಮುನ್ನ ಯಡ್ಡಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ಟ್ರಾನ್ಸ್‌ಫರ್ ಮಾಡಿ ಹೋದರಲ್ಲ; ಅವತ್ತು ಬೆಂಗಳೂರು ನಗರದ ಶಾಸಕರೊಂದಿಗೆ ಗೃಹ ಸಚಿವರನ್ನು ಅಶೋಕ್ ಮತ್ತು ಲಿಂಬಾವಳಿ ಭೇಟಿ ಮಾಡಿ ವರ್ಗಾವಣೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಆದರೆ ಮುಖ್ಯಮಂತ್ರಿ ವಾಪಸ್ಸು ಬೆಂಗಳೂರಿಗೆ ಇಳಿಯುತ್ತಿದ್ದಂತೆ, ಇದಕ್ಕೆಲ್ಲ ಅನಂತ್ ಶಿಷ್ಯ ಲಿಂಬಾವಳಿಯೇ ಕಾರಣ ಎಂದು ಅಶೋಕ್ ಬತ್ತಿ ಇಟ್ಟಿದ್ದಾರೆ. ಇತ್ತೀಚೆಗೆ ಯಡ್ಡಿ ಬಗ್ಗೆ ಸಾಫ್ಟ್ ಆಗುತ್ತಿದ್ದ ಲಿಂಬಾವಳಿಗೆ ಈ ಬಗ್ಗೆ ಹುಳಿ ಹಿಂಡಿದ ಅಶೋಕ್ ವಿರುದ್ಧ ಪೌರುಷ ತೋರಿಸಬೇಕಿತ್ತು,

ಅದಕ್ಕೆ ಸಂಪುಟ ಸಭೆಯೇ ವೇದಿಕೆಯಾಗಬೇಕೆ?

■ ರಾ.ಸೋ.

ಒಕ್ಕಲಿಗರ ಸಂಘ
ಅರ್ರ್ಯಾಕ್ V/s ಅಕಾಡೆಮಿಕ್

ಹಾಳೂರಿಗೆ ಉಳಿದವನೇ ಗೌಡ ಎಂಬ ನಾಣ್ನುಡಿಯನ್ನು ಕೊಂಚ ಮಾರ್ಪಡಿಸಿ 'ಬೆಂಗಳೂರಲ್ಲಿ ಹಾಳಾದವನೇ ಗೌಡ' ಎಂದರೆ ಹೇಗಿರುತ್ತದೆ?

ರಾಜ್ಯ ಒಕ್ಕಲಿಗರ ಸಂಘದ ದುರಂತ, ಅದರ ನೈತಿಕ ದಾರಿದ್ರ್ಯ, ಈಗ ನಡೆಯುತ್ತಿರುವ ಚುನಾವಣೆ, ನಿಂತ ಅಭ್ಯರ್ಥಿಗಳ ಹಿನ್ನೆಲೆ, ಮಾಡುತ್ತಿರುವ ದುಂದುವೆಚ್ಚ ಎಲ್ಲವನ್ನೂ ಲೆಕ್ಕಹಾಕಿ ಹೇಳುವುದಾದರೆ ಬೆಂಗಳೂರು ಹಾಳಾಗಿದ್ದಕ್ಕೂ, ಇಲ್ಲಿನ ಒಕ್ಕಲಿಗರ ದುರ್ಗತಿಗೂ ಮತ್ತು ಒಕ್ಕಲಿಗರ ಸಂಘ ಎಂಬ ದೈತ್ಯ ಸಂಘಟನೆಯೊಂದರ ಅವನತಿಗೂ ಪರಸ್ಪರ ಸಂಬಂಧವಿದ್ದೇ ಇದೆ.

ಇದೇ ಸೆಪ್ಟೆಂಬರ್ 21 ಕ್ಕೆ ನಡೆಯಲಿರುವ ಒಕ್ಕಲಿಗರ ಸಂಘದ ಚುನಾವಣೆಯೊಂದೇ ಸಾಕು, ಮೊಂದೊಂದು ದಿನ ಈ ಸಂಘ ಯಾವ ಗತಿ ಕಾಣಬಹುದೆಂಬುದಕ್ಕೆ ಕನ್ನಡಿಯಂತಿದೆ. ಸದ್ಯ ಚುನಾವಣೆಗೆ ನಿಂತ ಬಹುತೇಕರೆಲ್ಲ ಈಗಾಗಲೇ ನಿರ್ದೇಶಕರಾಗಿದ್ದು ಅಧಿಕಾರ ಉಂಡವರೆ. ಈ ಪೈಕಿ ಲಿಕ್ಕರ್ ದೊರೆಗಳು, ಲ್ಯಾಂಡ್ ಡೀಲರುಗಳು, ಮೆಡಿಕಲ್ ಸೀಟು ಬ್ರೋಕರುಗಳೂ ಚುನಾವಣೆಗೆ ನಿಂತಿದ್ದಾರೆ. ತಂತಮ್ಮ ಶಕ್ತ್ಯಾನುಸಾರ ಬಾಡೂಟ, ಲಿಕ್ಕರ್, ಗಿಫ್ಟು ಎಲ್ಲವನ್ನೂ ಕೊಡುತ್ತಿದ್ದಾರೆ. ಇಂಥವರ ದುಡ್ಡಿನ ಬಲದ ಮುಂದೆ ನಿಜಕ್ಕೂ ಒಕ್ಕಲಿಗ ಜನಾಂಗದ ಮೇಧಾವಿಗಳು, ಪ್ರಾಮಾಣಿಕರು ಮತ್ತು ಜನಾಂಗದ ಕಳಕಳಿಯುಳ್ಳವರು ಗೆಲ್ಲುತ್ತಾರಾ?

ಹಾಗೊಮ್ಮೆ ದುಷ್ಟರೆಲ್ಲ ದುಡ್ಡಿನ ಬಲದಿಂದ ಗೆದ್ದು ಶಿಷ್ಟರೆಲ್ಲ ಸೋತು ಹೋದರೆ ಒಕ್ಕಲಿಗರ ಸಂಘದ ಗತಿಯೇನು?

ಇದು ಬೆಂಗಳೂರಿನ ಒಕ್ಕಲಿಗರ ಮುಂದಿರುವ ಪ್ರಶ್ನೆ. ಒಟ್ಟು 36 ಮಂದಿ ನಿರ್ದೇಶಕರುಳ್ಳ ಒಕ್ಕಲಿಗರ ಸಂಘಕ್ಕೆ ಬೆಂಗಳೂರು ನಗರ ಮತ್ತು ಗ್ರಾಮಾಂತರದಿಂದಲೇ 15 ಮಂದಿ ಡೈರೆಕ್ಟರ್‌ಗಳು ಗೆದ್ದುಬರುತ್ತಾರೆ. ಮಂಡ್ಯ, ಹಾಸನ, ಮೈಸೂರು, ಕೋಲಾರ, ತುಮಕೂರು, ಚಿಕ್ಕಮಗಳೂರು, ಚಿತ್ರದುರ್ಗ, ಕೊಡಗು, ದಕ್ಷಿಣ ಕನ್ನಡದಿಂದಲೂ ಪ್ರಾತಿನಿಧ್ಯವಿದೆ. 1994 ರ ಜುಲೈ ತಿಂಗಳಲ್ಲಿ ಚಿನ್ನಪ್ಪ ರೆಡ್ಡಿ ವರದಿಯ ವಿರುದ್ಧ ಇಡೀ ರಾಜ್ಯದ ಒಕ್ಕಲಿಗರು ಬೀದಿಗಿಳಿದದ್ದೇ ಕೊನೆ.

ಅದರ ಫಲವಾಗಿ ದೇವೇಗೌಡರು ಪ್ರಧಾನಿಯಾದರು. ಅವರನ್ನೂ ಸೇರಿಸಿ ಕೃಷ್ಣ ಕುಮಾರಸ್ವಾಮಿಯಂಥ ಮೂವರು ಮುಖ್ಯಮಂತ್ರಿಗಳನ್ನು ಒಕ್ಕಲಿಗ ಜನಾಂಗ ಹುಟ್ಟು ಹಾಕಿತು. ಆದರೆ ಇದೇ ಹೊತ್ತಿಗೆ ಒಕ್ಕಲಿಗರ ಸಂಘದ ದುರಂತವೂ ಶುರುವಾಗಿತ್ತು, ಜನಾಂಗವೊಂದರ ನೇತೃತ್ವ ಲಿಕ್ಕರ್ ದೊರೆಗಳು, ಲ್ಯಾಂಡ್ ಬ್ರೋಕರುಗಳು ಮತ್ತು ಪುಢಾರಿಗಳ ಕೈ ಸೇರಿತೆಂದರೆ ಏನೆಲ್ಲಾ ಅನಾಹುತವಾಗುತ್ತೋ ಅದೆಲ್ಲವೂ ಒಕ್ಕಲಿಗರ ಸಂಘದಲ್ಲಿ ತಲೆ ಎತ್ತಿತ್ತು.

ಅದಕ್ಕೆ ಕಾರಣವಾಗಿದ್ದು ಒಕ್ಕಲಿಗರ ಸಂಘದ ಆಸ್ತಿ. ಒಂದೆಡೆ ಮೆಡಿಕಲ್ ಕಾಲೇಜು, ಕಿಮ್ಸ್ ಆಸ್ಪತ್ರೆ, ಡೆಂಟಲ್ ಕಾಲೇಜು ಮತ್ತು ಬೆಂಗಳೂರು ಸುತ್ತಮುತ್ತ ಅದಕ್ಕೆ ಧಾನವಾಗಿ ಬಂದಿದ್ದ ಬೇಕಾಬಿಟ್ಟಿ ಭೂಮಿಗೆ ಚಿನ್ನದ ಬೆಲೆ ಬಂದಿದ್ದೇ ಒಕ್ಕಲಿಗರ ಸಂಘಕ್ಕೆ ಮುಳುವಾಯಿತು. ಹೀಗೆ ದಾನವಾಗಿ ಬಂದಿದ್ದ ಸಜ್ಜೆಪಾಳ್ಯದ ಒಟ್ಟು 96 ಎಕರೆ ಭೂಮಿಯೊಂದೇ ಇಡೀ ಒಕ್ಕಲಿಗರ ಸಂಘವನ್ನು ಹೇಗೆ ಕುಲಗೆಡಿಸಿತೆಂಬುದಕ್ಕೆ ಸದ್ಯದ ಚುನಾವಣೆಯೇ ಸಾಕ್ಷಿ ನೀಡುತ್ತಿದೆ.

ಅದು ವಿಜಯನಗರದಿಂದ ಫರ್ಲಾಂಗ್ ದೂರಕ್ಕಿರುವ ಸಜ್ಜೆಪಾಳ್ಯದ 96 ಎಕರೆಗಳಷ್ಟು ಭೂಮಿಯ ದುರಂತ ಕತೆ. ಕಾಮಾಕ್ಷಿಪಾಳ್ಯ ಮತ್ತು ಮೂಡಲಪಾಳ್ಯ ಏರಿಯಾಗಳ ಮಧ್ಯದ ಈ ಭೂಮಿಯ ಸದ್ಯದ ಮಾರುಕಟ್ಟೆ ಬೆಲೆ ಕಮ್ಮಿಯೆಂದರೂ ಐನೂರು ಕೋಟಿ. 1962 ರಲ್ಲಿ ಅದನ್ನು ಒಕ್ಕಲಿಗರ ಸಂಘಕ್ಕೆ ದಾನವಾಗಿ ಬರೆದ ರಂಗಮ್ಮ ತಮ್ಮ ಮೃತ ಪತಿ ಕೃಷ್ಣಪ್ಪನವರ ಹೆಸರಲ್ಲಿ ಒಕ್ಕಲಿಗ ಜನಾಂಗದ ಬಡ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಅನುವಾಗಲೆಂದೇ ಕೊಟ್ಟಿದ್ದರು. ಅದಕ್ಕೆಂದೇ ಟ್ರಸ್ಟ್ ಒಂದನ್ನು ಹುಟ್ಟುಹಾಕಿ ಅದಕ್ಕೆ ಸಂಘದ ಹತ್ತು ಮಂದಿ ನಿರ್ದೇಶಕರು ಟ್ರಸ್ಟ್‌ಗಳಾಗಿರುವಂತೆ ಮತ್ತು ತಮ್ಮ ಸಂಬಂಧಿ ಕೆ. ಪುಟ್ಟಸ್ವಾಮಿ ಮತ್ತು ಅವರ ಪುತ್ರ ಮಹೇಂದ್ರ ಕೂಡ ಟ್ರಸ್ಟಿನಲ್ಲಿರುವಂತೆ ಮಾಡಿದ್ದರು.

ಯಾವತ್ತು ಈ ಭೂಮಿಗೆ ಕೋಟಿಗಟ್ಟಲೇ ಬೆಲೆ ಬಂತೋ ಅದೇ ಹೊತ್ತಿಗೆ ವೆಂಕಟಗಿರಿ ಗೌಡರು ಅಧ್ಯಕ್ಷರಾಗಿ, ಲಿಕ್ಕರ್ ದೊರೆ ಕೆಂಚಪ್ಪ ಗೌಡ ಪ್ರಧಾನ ಕಾರ್ಯದರ್ಶಿಯಾಗಿದ್ದ. ಅದಕ್ಕೂ ಮುನ್ನ ಹಾಲಿ ಬಿಜೆಪಿ ಸರ್ಕಾರದ ಮಂತ್ರಿ ರಾಮಚಂದ್ರೇಗೌಡರ ಮಾವ ಕಾಮಾಕ್ಷಿಪಾಳ್ಯದ ಮರಿಯಣ್ಣ ಅವರ ಪುತ್ರ ಪೇಟೆ ಚನ್ನಪ್ಪ ಮುಂತಾದವರು ನಕಲಿ ದಾಖಲೆ ಸೃಷ್ಟಿಸಿ ತಾವೇ ಸದರಿ ಜಮೀನಿನ ಗೇಣಿದಾರರೆಂದು ಖೊಟ್ಟಿ ಕೇಸೊಂದನ್ನು ಹಾಕಿದ್ದರು. ಜೊತೆಗೆ ದಾನಕೊಟ್ಟ ಭೂಮಿಯು ದುರುಪಯೋಗವಾಗದಂತೆ ಕಾಯಬೇಕಿದ್ದ ಪುಟ್ಟಸ್ವಾಮಿಯ ಮಗ ಮಹೇಂದ್ರ ಎಂಬಾತನೂ 96 ಎಕರೆಗಳ ಪೈಕಿ ತನಗೆ 45 ಎಕರೆ ಭೂಮಿ ದಕ್ಕಬೇಕೆಂದು ಮತ್ತೊಂದು ಕೇಸು ಜಡಿದ. ಸಂಘದ ಆಸ್ತಿಯಾಗಿದ್ದ ಇದನ್ನು ಲಪಟಾಯಿಸಲು ಪ್ರ.ಕಾ. ಕೆಂಚಪ್ಪ ಗೌಡನೇ ನಿಂತು ಷಡ್ಯಂತ್ರ ರಚಿಸಿದ್ದ. ಪರಿಣಾಮ ನಕಲಿ ಗೇಣಿದಾರರ ಹೆಸರಲ್ಲಿ ಮಂತ್ರಿ ರಾಮಚಂದ್ರೇಗೌಡರ ಸಂಬಂಧಿಗಳು 51 ಎಕರೆ ಲಪಟಾಯಿಸಿದರೆ, ಉಳಿಕೆ 45 ಎಕರೆಗಳ ಪೈಕಿ ಸಂಘ ಕೇವಲ ಆರೂವರೆ ಎಕರೆಯಷ್ಟನ್ನೇ ಉಳಿಸಿಕೊಂಡು ಮಿಕ್ಕಿದ್ದನ್ನೆಲ್ಲ ನೆಲಕಂಟಕ ಮಹೇಂದ್ರನಿಗೆ ಬರೆದುಕೊಟ್ಟಿತ್ತು.

ಇಲ್ಲಿ ಪ್ರಶ್ನೆಯೆಂದರೆ ಕಾನೂನಿನ ಪ್ರಕಾರ ಯಾವುದೇ ಹಕ್ಕಿಲ್ಲದೇ ಹೋದರೂ ಮಹೇಂದ್ರನಿಗೆ ಸಂಘದ 38.5 ಎಕರೆ ಬಿಟ್ಟುಕೊಟ್ಟದ್ದೇಕೆ? ಕೇವಲ 6.5 ಎಕರೆಯಷ್ಟೇ ಪಡೆದು ಅದರ ಬದಲಿಗೆ 38.5 ಎಕರೆ ಬಿಟ್ಟುಕೊಟ್ಟ ಸಂಘದ ಪ್ರಧಾನ ಕಾರ್ಯದರ್ಶಿ ಕೆಂಚಪ್ಪ ಗೌಡ ಇದರಲ್ಲಿ ಪಡೆದ ಪಾಲೆಷ್ಟು?

ಇವತ್ತು ಇದೇ ಕೆಂಚಪ್ಪ ಗೌಡ ತನ್ನದೇ ಒಂದು ಸಿಂಡಿಕೇಟ್ ರಚಿಸಿಕೊಂಡು ಚುನಾವಣೆಗೆ ನಿಂತಿದ್ದಾನೆ. ಮತ್ತೆ ಗೆದ್ದು ಬಂದು ಸಂಘವನ್ನು ಉದ್ಧಾರ ಮಾಡುತ್ತಾನಂತೆ. ಅಧಿಕಾರವಿದ್ದಾಗಲೇ ವೆಂಕಟಗಿರಿಗೌಡರಂಥವರನ್ನು ಯಾಮಾರಿಸಿ 90 ಎಕರೆ ಸಂಘದ ಜಮೀನನ್ನು ಮಾರಿಕೊಂಡವನು ಮತ್ತೆ ಗೆದ್ದು ಬಂದರೆ ಅಳಿದುಳಿದ ಸಂಘದ ಆಸ್ತಿಯನ್ನೂ ಮಾರಲಾರ ಎಂಬುದಕ್ಕೆ ಏನು ಗ್ಯಾರಂಟಿ?

ಹಿಂದೆ ಅಧ್ಯಕ್ಷರಾಗಿದ್ದ ಸಿ. ವಿಠಲ್ ವೃತ್ತಿಯಲ್ಲಿ ವೈದ್ಯರು. ಅಧಿಕಾರಕ್ಕೆ ಬರುವ ಹೊತ್ತಿಗಾಗಲೇ ಕೆಂಚಪ್ಪಗೌಡ ಸಂಘದ ಆಸ್ತಿಯನ್ನು ಗುಡಿಸಿ ಹಾಕಿದ್ದ. ಹೀಗೆ ವೆಂಕಟಗಿರಿಗೌಡರನ್ನು ಯಾಮಾರಿಸಿ ಐನೂರು ಕೋಟಿಯ ಸಂಘದ ಆಸ್ತಿಯನ್ನು ಮುಂಡಾಯಿಸಿದ ಕೆಂಚಪ್ಪಗೌಡ ಈಗ ತಾನೇ ಸಾಚಾ ಎಂಬಂತೆ ಕರಪತ್ರ ಹೊರಡಿಸಿದ್ದಾನೆ. ಮತ್ತೊಂದೆಡೆ ಅಪ್ಪಾಜಿಗೌಡ ಎಂಬ ಮತ್ತೊಬ್ಬ ನಾಯಕ ತನ್ನದೇ ಸಿಂಡಿಕೇಟ್ ಕಟ್ಟಿಕೊಂಡು ಓಟು ಕೇಳುತ್ತಿದ್ದಾನೆ. ಡಾ. ಚಿಕ್ಕಮೊಗರ ಸಿಂಡಿಕೇಟ್ಟು, ವಾಸಂತಿ ಶಿವಣ್ಣರ ಮತ್ತೊಂದು ಕೂಟ, ಹೀಗೆ ನಾಲ್ಕು ಪ್ರಮುಖ ತಂಡಗಳು ಚುನಾವಣೆಗೆ ನಿಂತಿವೆ.

ಡಾ. ಚಿಕ್ಕಮೊಗ ವೈದ್ಯರೇ ಆದರೂ ಅವರ ತಂಡಕ್ಕೆ ವ್ಯಾಪಕ ಬೆಂಬಲವಿಲ್ಲ ಮತ್ತು ದುಡ್ಡಿನ ತಾಕತ್ತಿಲ್ಲ, ಆದರೆ ಸಂಘದ ಆಸ್ತಿ ಪರಬಾರೆ ಕುರಿತಂತೆ ನಿರ್ಣಯ ಕೈಗೊಂಡವರಲ್ಲಿ ಚಿಕ್ಕಮೊಗ ಕೂಡ ಭಾಗಿದಾರರೇ. ಹಾಗೇ ಅಪ್ಪಾಜಿಗೌಡ ಕೂಡ ಆವತ್ತಿನ ಸಭೆಯಲ್ಲಿ ತೆಪ್ಪಗಿದ್ದವರು ಇವತ್ತು ತಾನೇ ಆಸ್ತಿ ಕಾಯಲು ಹೋರಾಡುತ್ತಿದ್ದೇನೆ ಅನ್ನುತ್ತಿದ್ದಾರೆ. ಸದ್ಯ ಪೈಪೋಟಿ ಅಂತಿದ್ದರೆ ಅದು ಡಾ. ವಿಠಲ್ ಸಿಂಡಿಕೇಟ್ ಮತ್ತು ಕೆಂಚಪ್ಪ ಗೌಡರ ಸಿಂಡಿಕೇಟಿನ ಮಧ್ಯೆಯೇ.

ಸದ್ಯ ಹೊಸಕೋಟೆ ಕಲಾಸಿಪಾಳ್ಯಗಳಲ್ಲಿ ಬಾರ್ ನಡೆಸುವ ಕೆಂಚಪ್ಪಗೌಡರ ಸಿಂಡಿಕೇಟಿನಲ್ಲಿರುವ ಬಹುತೇಕರು ಲಿಕ್ಕರ್ ಕುಳಗಳೆ. ಇದ್ದುದರಲ್ಲಿ ಒಂದಷ್ಟು ಮಂದಿ ವೈದ್ಯರು, ವಕೀಲರು, ಪ್ರೊಫೆಸರ್‌ಗಳಿರುವುದು ಡಾ. ವಿಠಲ್ ಸಿಂಡಿಕೇಟ್ಟಿನಲ್ಲೇ. ಅ. ದೇವೇಗೌಡ, ಪಿಳ್ಳಭೈರಪ್ಪ ಪ್ರೊ. ಕೆ.ಬಿ. ಲೋಕೇಶ್, ಡಾ. ಹನುಮಂತೇಗೌಡರ ಜೊತೆ ಎಮ್ಮೆಲ್ಸಿ ಪುಟ್ಟಣ್ಣ ಮತ್ತು ಮಾಜಿ ವಿದ್ಯಾರ್ಥಿ ನಾಯಕ ಆಂಜನಪ್ಪ ಸಿಂಡಿಕೇಟಿಗೆ ಅಪಿಷ್ಟು ಬೆಂಬಲ ವ್ಯಕ್ತವಾಗುತ್ತಿದೆ. 2000 ದ ಇಸವಿಯ ನಂತರ ಅದೂ ಗುತ್ತಲಗೌಡ ,ವೆಂಕಟಗಿರಿಗೌಡರಂಥವರು ತೀರಿಕೊಂಡ ತರುವಾಯ ಒಕ್ಕಲಿಗರ ಸಂಘಕ್ಕೆ ಒಬ್ಬನೇ ಒಬ್ಬ ಛಲವಂತ ನಾಯಕ ಬರಲಿಲ್ಲ. ಕೆಂಪೇಗೌಡ ಮೆಡಿಕಲ್ ಕಾಲೇಜಿನ ಮಾನ್ಯತೆಯನ್ನೇ ಮೆಡಿಕಲ್ ಕೌನ್ಸಿಲ್ ರದ್ದು ಮಾಡಿತು. ಇದಕ್ಕೂ ಕೆಂಚಪ್ಪಗೌಡನೇ ಕಾರಣನಾದ. ಮುಂದೆ ಕಿಮ್ಸ್ ಆಸ್ಪತ್ರೆಯೇ ದಿವಾಲಿಯಾಯಿತು. ಒಂದಾನೊಂದು ಕಾಲಕ್ಕೆ 26 ಕೋಟಿ ರೂಪಾಯಿಗಳಷ್ಟು ಬ್ಯಾಂಕ್ ಠೇವಣಿ ಹೊಂದಿದ್ದ ಸಂಘ ಇವತ್ತು ಕಾರ್ಪೋರೇಷನ್ ಸಮೀಪದ ಒಕ್ಕಲಿಗರ ಭವನವನ್ನೇ ಒತ್ತೆ ಇಟ್ಟು 20 ಕೋಟಿಯ ಸಾಲ ಮಾಡಿದೆ.


ಹೊಸ ಕಾಲೇಜುಗಳನ್ನು ತೆರೆದಿಲ್ಲ, ಒಕ್ಕಲಿಗರ ಮಕ್ಕಳು ಡಾಕ್ಟರ್‌ಗಳಾಗಿಲ್ಲ, ಮೆಡಿಕಲ್ ಕಾಲೇಜಿದ್ದರೂ ಅದರ ಸೀಟು ಮಾರಿಕೊಂಡೇ ಸಂಘ ನಡೆಸಬೇಕು. ಕೊನೆಕೊನೆಗೆ ಕಿಮ್ಸ್ ಆಸ್ಪತ್ರೆಯ ಮೆಡಿಕಲ್ ಸ್ಟೋರ್ ಮತ್ತು ಸೀಟಿ ಸ್ಕ್ಯಾನ್‌ಗಳನ್ನು ಮಾರ್ವಾಡಿಗಳಿಗೆ ಬಾಡಿಗೆಗೆ ಕೊಟ್ಟು ಸಂಘ ನಡೆಸಬೇಕಾದ ದುಸ್ಥಿತಿಗೆ ಮುಟ್ಟಿದ ಒಕ್ಕಲಿಗರ ಸಂಘಕ್ಕೆ ಪ್ರಾಮಾಣಿಕರು, ಜನಾಂಗದ ಬಗ್ಗೆ ಕಳಕಳಿಯುಳ್ಳವರು ಗೆದ್ದರಷ್ಟೇ ಅದು ಉಳಿಯುತ್ತದೆ. ವಿಸ್ಕಿ ಬಾಡೂಟಕ್ಕೆ ಓಟು ಮಾರಿಕೊಂಡರೆ ಏನಾಗುತ್ತದೆ ಎಂಬುದಕ್ಕೆ ಈಗಾಗಲೇ ಪಾಠ ಕಲಿತಾಗಿದೆ.

ಪ್ರಜ್ಞಾವಂತ ಒಕ್ಕಲಿಗರಿಗಿಗೊಂದು ಅವಕಾಶವಷ್ಟೆ.


■ ರಾ.ಸೋ.




ಡಾ. ಸಿ.ವಿಠ್ಠಲ್




ಪುಟ್ಟಣ್ಣ



ಎಂ.ಆಂಜನಪ್ಪ



ಅ.ದೇವೇಗೌಡ



ಡಿಸಿಕೆ ಕಾಳೇಗೌಡ



ಎಸ್.ಕೃಷ್ಣಪ್ಪ

ಗಟ್ಟಿಗಿತ್ತಿಯರಿಬ್ಬರ ಹೋರಾಟ



ಮಾಗಡಿ ಕಮಲಮ್ಮ

ಕಾಂಗ್ರೆಸ್ ನಾಯಕಿ ವಾಸಂತಿ ಶಿವಣ್ಣ ಮತ್ತು ಮಹಿಳಾ ಅಭಿವೃದ್ಧಿ ನಿಗಮಕ್ಕೆ ಮಾಜಿ ಅಧ್ಯಕ್ಷೆಯಾಗಿದ್ದ ಮಾಗಡಿ ಕಮಲಮ್ಮ ಎಂಬಿಬ್ಬರು ಗಟ್ಟಿಗಿತ್ತಿಯರ ಸಣ್ಣ ಸಿಂಡಿಕೇಟ್ಟೊಂದು ವಿಶೇಷ ಗಮನ ಸೆಳೆಯುತ್ತಿದೆ.

ಅದು ಹೋರಾಟದ ಹಾದಿ. ಗುತ್ತಲಗೌಡ ಬದುಕಿದ್ದಷ್ಟೂ ದಿನ ವಾಸಂತಿ ಶಿವಣ್ಣರಂಥ ಹೆಣ್ಣುಮಕ್ಕಳು ಸಂಘಕ್ಕೆ ಆಯ್ಕೆಯಾಗುತ್ತಿದ್ದರು. 96 ರ ನಂತರ ಇಂಥ ಒಬ್ಬೇ ಒಬ್ಬ ಹೆಣ್ಣುಮಗಳು ಗೆದ್ದು ಬರಲಿಲ್ಲ, ಹಾಗಂಥ ವಾಸಂತಿ ಶಿವಣ್ಣ, ಕಮಲಮ್ಮರಂಥವರು ಹೋರಾಟ ಬಿಡಲಿಲ್ಲ. ಸಂಘದ ಕೈತಪ್ಪಿದ ಐನೂರು ಕೋಟಿಯ ಆಸ್ತಿಯ ಪುನರ್ ವಶಕ್ಕೆ ಕೋರ್ಟ್ ಕಟಕಟೆ ಹತ್ತಿ, ಸಂಘದ ಅಧಿಪತಿಗಳ ವಿರುದ್ಧ ಧರಣಿ ಕೂತರು. ತಾನು ಗೆದ್ದರೆ ದೆಹಲಿಯಲ್ಲಿ ಹಾಸ್ಟೆಲ್ ಕಟ್ಟಿಸಿ ಒಕ್ಕಲಿಗರ ಹೆಣ್ಣುಮಕ್ಕಳಿಗೆ ಐಎಎಸ್ ಮತ್ತು ಐಪಿಎಸ್ ತರಬೇತಿ ಕೊಡಿಸುತ್ತೇನೆ, ಕಳೆದ ಮೂರು ವರ್ಷಗಳಿಂದ ನಿಂತು ಹೋದ ಸರ್ವ ಸದಸ್ಯರ ಸಭೆ ಕರೆಯುತ್ತೇನೆ, ಒಕ್ಕಲಿಗರ ಭೂಮಿ ದೋಚುವ ಕಿಐಎಡಿಬಿ ಸಜ್ಜೆಪಾಳ್ಯದ ಭೂಮಿ ಉಳಿಸಿಕೊಳ್ಳುತ್ತೇನೆ, ತೊರವಲಯದಲ್ಲಿ ಮತ್ತೊಂದು ಆಸ್ಪತ್ರೆ, ಬೆಂಗಳೂರಿನ ನಾಲ್ಕು ದಿಕ್ಕಿಗೆ ಹೈಸ್ಕೂಲ್, ಒಕ್ಕಲಿಗರ ಭೂಮಿ ದೋಚುವ ಕಿಐಎಡಿಬಿ ... ಕಾಯ್ದೆಗೆ ತಿದ್ದುಪಡಿ ಒತ್ತಾಯಿಸಿ ಹೋರಾಟದ ಮಾತಾಡುವ ವಾಸಂತಿ ಶಿವಣ್ಣ ಮತ್ತು ಮಾಗಡಿ ಕಮಲಮ್ಮರಂಥ ಮಹಿಳೆಯರು ಗೆಲ್ಲುವಂತಾಗುವುದೆ?



ವಾಸಂತಿ ಶಿವಣ್ಣ

ಚರ್ಚ್‌ಗಳ ಮೇಲೆ ಚೆಡ್ಡಿಗಳ ದಾಳಿ

ಚರ್ಚುಗಳ ಮೇಲೆ ದಾಳಿ ಮಾಡಿದಾಗಲಾಗಲೀ, ಕ್ರೈಸ್ತರ ಮೇಲೆ ದಾಳಿ ಮಾಡಿದಾಗಲಾಗಲೀ ಸಂಘ ಪರಿವಾರದ ಚೆಡ್ಡಿಗಳು ತಮ್ಮ ಯಾವತ್ತಿನ ಹೇಡಿತನವನ್ನು ಪ್ರದರ್ಶಿಸಿ ತಮ್ಮ ಮೇಲೆಯೇ ಕ್ರೈಸ್ತರು ಹಲ್ಲೆ ನಡೆಸಿದ್ದಾರೆಂದು, ಪ್ರಾಣ ಬೆದರಿಕೆ ಒಡ್ಡಿದ್ದಾರೆಂದೂ ಬಹಳಷ್ಟು ಮಂದಿ ಕ್ರೈಸ್ತರ ಮೇಲೆ ಕೇಸು ದಾಖಲಿಸಿ ಕ್ರೈಸ್ತರು ಜೈಲು ಪಾಲಾಗುವಂತೆ ಮಾಡಿದ್ದಾರೆ.



"ರಾಜ್ಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ದಶಕಗಳಿಂದ ಆಳ್ವಿಕೆ ನಡೆಸಿ ರಾಜ್ಯವನ್ನು ಅಧೋಗತಿಗೆ ತಂದು ನಿಲ್ಲಿಸಿವೆ. ನಮಗೂ ಒಮ್ಮೆ ಅಧಿಕಾರ ಕೊಟ್ಟು ನೋಡಿ. ರಾಜ್ಯವನ್ನು ಹೇಗೆ ಅಭಿವೃದ್ಧಿಪಡಿಸುತ್ತೇವೆ" ಎಂದು ಬಿಜೆಪಿ ನಾಯಕರು ಚುನಾವಣಾ ಪೂರ್ವದಲ್ಲಿ ಭಾರಿ ಭಾಷಣ ಬಿಗಿದಿದ್ದರು. "ಹೌದಲ್ಲವೇ? ಎಲ್ಲ ರಾಜಕೀಯ ಪಕ್ಷಗಳ ಆಡಳಿತವನ್ನು ನೋಡಿದ್ದೇವೆ. ಈ ಬಾರಿ ಬಿಜೆಪಿಯನ್ನು ಆರಿಸಿ ನೋಡೋಣ. ಅವರಿಗೂ ಒಂದು ಛಾನ್ಸು ಕೊಡೋಣ" ಅಂತ ಜನ ಕೂಡ ಇವರ ಮಾತಿಗೆ ಮರುಳಾಗಿ ಓಟು ಹಾಕಿ ಬಿಜೆಪಿಯನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತಂದರು. ಅಧಿಕಾರಕ್ಕೇರಿ ನೂರು ದಿನ ತುಂಬುತ್ತಿದ್ದಂತೆ ಬಿಜೆಪಿಯ ಆಡಳಿತ ರಾಜ್ಯದ ಜನತೆಗೆ ಸುಸ್ತು ಹೊಡೆಸುತ್ತಿದೆ. ಅಧಿಕಾರಕ್ಕೇರುತ್ತಿದ್ದಂತೆ ಹಾವೇರಿಯಲ್ಲಿ ಅನ್ನದಾತರನ್ನು ಬಲಿತೆಗೆದುಕೊಂಡಿದ್ದಾಯಿತು. ಕೋಟಿ ಕೋಟಿ ಬಾಳುವ ಸಾರ್ವಜನಿಕ ಸಂಪತ್ತನ್ನು ರಾಮಚಂದ್ರಾಪುರಮಠದಂತಹ ಸಂಘಪರಿವಾರದ ಬ್ರಾಹ್ಮಣರ ಪಾದಾರವಿಂದಗಳಿಗೆ ಅರ್ಪಿಸಿದ್ದಾಯಿತು. ಈಗ ಅದರ ಮುಂದುವರೆದ ಭಯಾನಕ ಭಾಗ ಆರಂಭವಾಗಿದೆ. ಸರ್ಕಾರವೇ ಭಜರಂಗದಳಗಳಂತಹ ಹಿಂದೂ ಭಯೋತ್ಪಾದಕ ಸಂಘಟನೆಗಳ ಬೆನ್ನಿಗೆ ನಿಂತು ಕ್ರಿಶ್ಚಿಯನ್ನರ ಮಾರಣ ಹೋಮಕ್ಕಿಳಿದಿದೆ. ಪ್ರಾಯಶಃ ಬಿಜೆಪಿಯನ್ನು ಅಧಿಕಾರಕ್ಕೆ ತಂದಿರುವ ರಾಜ್ಯದ ಜನತೆಗೆ ಈಗ ತಾವು ಮಾಡಿದ ತಪ್ಪಿನ ಅರಿವಾಗಿರಬಹುದು.

ಭಾನುವಾರ ಬೆಳ್ಳಂಬೆಳಗ್ಗೆ ಉಡುಪಿ, ಜಯಪುರ, ಬೆಳ್ತಂಗಡಿ, ಮಂಗಳೂರು, ಚಿಕ್ಕಮಗಳೂರು, ಮೂಗೋಡು - ಹೀಗೇ ಕರಾವಳಿ ಮತ್ತು ಮಲೆನಾಡು ಕರ್ನಾಟಕದ ಸುಮಾರು 15-19 ಚರ್ಚುಗಳ ಮೇಲೆ ಭಜರಂಗದಳದ ಹಿಂದೂ ಭಯೋತ್ಪಾದಕರು ದಾಳಿ ಮಾಡಿದ್ದಾರೆ. ಚರ್ಚುಗಳಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದ ಜನರ ಮೇಲೆ ಈ ಸಂಘಪರಿವಾರಿಗಳು ಮಕ್ಕಳುಮರಿಗಳೆನ್ನದೇ, ಮಹಿಳೆಯರು ವೃದ್ಧರೆನ್ನದೇ ಎರಗಿ ದಾಳಿ ಮಾಡಿದ್ದಾರೆ. ಈ ಘಟನೆಗಳಲ್ಲಿ ಮಕ್ಕಳು, ಮಹಿಳೆಯರು, ವೃದ್ಧರು ಗಾಯಗೊಂಡಿದ್ದಾರಲ್ಲದೇ ಚರ್ಚುಗಳ ಪೀಠೋಪಕರಣಗಳು, ಕಿಟಕಿ ಗಾಜುಗಳು ಪುಡಿಪುಡಿಯಾಗಿವೆ. ಒಂದೇ ದಿನ ಒಂದೇ ಸಮಯಕ್ಕೆ ಎಲ್ಲಾ ಕಡೆ ದಾಳಿ ನಡೆಸಿರುವುದನ್ನು ನೋಡಿದರೆ ಇದು ಸ್ವಯಂಪ್ರೇರಿತವಾಗಿ ನಡೆದದ್ದಲ್ಲ, ಸಂಘಪರಿವಾರವೇ ವ್ಯವಸ್ಥಿತವಾಗಿ ಯೋಜಿತವಾಗಿ ನಡೆಸಿದ ದಾಳಿ ಎಂಬುದರಲ್ಲಿ ಯಾವುದೇ ಅನುಮಾನ ಇಲ್ಲ.

ದಾಳಿಯ ಕಾರ್ಯಾಚರಣೆ ಮುಗಿಯುತ್ತಿದ್ದಂತೆ ಟಿವಿಗಳ, ಪತ್ರಿಕೆಗಳ ಕ್ಯಾಮರಾಗಳಿಗೆ ಪೋಜು ಕೊಟ್ಟ ಭಜರಂಗದಳದ ರಾಜ್ಯ ಸಂಚಾಲಕ ಮಹೇಂದ್ರ ಕುಮಾರ್ "ಚರ್ಚುಗಳ ಮೇಲೆ ದಾಳಿ ಮಾಡಿದ್ದು ನಿಜ. 15-19 ಕಡೆ ದಾಳಿ ನಡೆಸಿದ್ದೇವೆ. ಅಷ್ಟೇ ಅಲ್ಲ, ಈ ದಾಳಿಗಳನ್ನು ಇನ್ನು ಮುಂದೆಯೂ ಮುಂದುವರೆಸುತ್ತೇವೆ" ಎಂದು ಹೂಂಕರಿಸಿದ್ದಾನೆ. ಆದರೆ ದುರಂತ ಎಂದರೆ, ದಾಳಿ ಮಾಡಿದ್ದು ತಾವೇ ಎಂದು ಬಹಿರಂಗವಾಗಿ ಮಾಧ್ಯಮಗಳೆದುರು ಒಪ್ಪಿಕೊಂಡರೂ ಅವನನ್ನು ಬಂಧಿಸುವ ಗಡುಸುತನವನ್ನು ರಾಜ್ಯದ ನಾಮರ್ಧ ಪೊಲೀಸರು ತೋರಿಲ್ಲ. ಒಂದು ವೇಳೆ ಹಿಂದೂಗಳ ದೇವಾಲಯಗಳ ಮೇಲೆ ದಾಳಿ ಮಾಡಿ ಅದನ್ನು ನಾವೇ ಮಾಡಿದ್ದು ಅಂತ ಮುಸ್ಲಿಮರಾಗಲೀ, ಕ್ರಿಶ್ಚಿಯನ್ನರಾಗಲೀ ಬಹಿರಂಗವಾಗಿ ಹೇಳಿದ್ದರೆ ಇದೇ ಪೊಲೀಸರು ಸುಮ್ಮನಿರುತ್ತಿದ್ದರೆ? ಖಂಡಿತಾ ಇಲ್ಲ. ಕ್ರಿಶ್ಚಿಯನ್ನರನ್ನು, ಮುಸ್ಲಿಮರನ್ನು ಹಿಡಿಯುವುದಕ್ಕೆ, ಕೇಸು ಹಾಕುವುದಕ್ಕೆ ನಮ್ಮ ಪೊಲೀಸರಿಗೆ ಎಲ್ಲಿಲ್ಲದ ತಾಕತ್ತು ಬಂದುಬಿಡುತ್ತದೆ!

ಬಿಜೆಪಿಗಳು ಕರ್ನಾಟಕವನ್ನು ಗುಜರಾತ್ ಆಗಿ ಪರಿವರ್ತಿಸುತ್ತೇವೆ ಎಂದು ಬಹಿರಂಗವಾಗಿ ಬೊಬ್ಬೆಯಿಟ್ಟಾಗ ನಾಡಿನ ಶಾಂತಿಪ್ರಿಯ ಜನರು, ಪ್ರಜಾತಂತ್ರ ಪ್ರೇಮಿಗಳು ತುಸು ಆತಂಕಗೊಂಡಿದ್ದರು. ಗುಜರಾತ್‌ನ ರಕ್ತಸಿಕ್ತ ಅಧ್ಯಾಯಗಳು, ಕೋಮುದಳ್ಳುರಿಗಳು, ಅಲ್ಪಸಂಖ್ಯಾತರ ಮಾರಣಹೋಮಗಳು ರಾಜ್ಯದಲ್ಲಿಯೂ ತಲೆಯೆತ್ತಿ ರಾಜ್ಯದ ನೆಮ್ಮದಿಯೇ ಹಾಳಾಗಿ ಹೋಗುತ್ತದೆಂದು ಭಯಭೀತಗೊಂಡಿದ್ದರು. ತಮ್ಮ ಆತಂಕಗಳನ್ನು ಬಹಿರಂಗವಾಗಿಯೇ ಮಾಧ್ಯಮಗಳಲ್ಲಿ ತೋಡಿಕೊಂಡಿದ್ದರು. ಅವರೆಲ್ಲರಿಗೆ ಕಣ್ಣೊರೆಸುವ ನಾಟಕವಾಡಿದ ಇದೇ ಮುಖ್ಯಮಂತ್ರಿ ಯಡಿಯೂರಪ್ಪ ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎಂದರೆ ಅಲ್ಲಿನ ರಕ್ತಸಿಕ್ತ ಅಧ್ಯಾಯಗಳನ್ನು ಇಲ್ಲಿ ಪ್ರಾರಂಭಿಸುತ್ತೇವೆ ಎಂದಲ್ಲ; ಬದಲಿಗೆ ಅಲ್ಲಿ ಸಾಧಿಸಲಾದ ಅಭಿವೃದ್ಧಿಯನ್ನು ಇಲ್ಲಿಯೂ ಸಾಧಿಸುತ್ತೇವೆ ಎಂದು ಸಮರ್ಥಿಸಿಕೊಂಡಿದ್ದರು. ಯಡ್ಡಿಯ ಮಾತನ್ನು ಜನ ನಂಬಿದರು. ಗುಜರಾತ್ ಸಾಧಿಸಿದ ಅಭಿವೃದ್ಧಿಯ ಬಗ್ಗೆ, ಅದರ ಅಭಿವೃದ್ಧಿಯ ಮಾದರಿಯ ಬಗ್ಗೆ ಹಲವಾರು ಪ್ರಶ್ನೆಗಳಿದ್ದರೂ, ಅದನ್ನು ಒಪ್ಪದಿದ್ದರೂ ರಾಜ್ಯದಲ್ಲಿ ಕನಿಷ್ಠ ಗುಜರಾತ್‌ನ ರಕ್ತಸಿಕ್ತ ಅಧ್ಯಾಯಗಳು ಪ್ರಾರಂಭವಾಗುವುದಿಲ್ಲವಲ್ಲ ಎಂದು ಜನ ಒಂದಿಷ್ಟು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದರು. ಆದರೆ ಈಗ ಅರ್ಥವಾಗುತ್ತಿದೆ. ಯಡ್ಡಿ ಹೇಳಿದ್ದು ಕೇವಲ ಜನರ ಕಣ್ಣೊರೆಸುವುದಕ್ಕಾಗಿ ಎಂದು. ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆಂಬುದರ ನೈಜ ಅರ್ಥ ಈಗ ಗೊತ್ತಾಗುತ್ತಿದೆ.

ದಾವಣಗೆರೆಯಲ್ಲಿ ಯಶಸ್ವಿ ಪ್ರಯೋಗ!

ಚೆಡ್ಡಿಗಳು ಕರಾವಳಿಯಲ್ಲಿ ಇಂತಹ ವ್ಯವಸ್ಥಿತ ಯೋಜಿತ ದಾಳಿಗಳನ್ನು ಪ್ರಾರಂಭಿಸುವ ಮೊದಲು ಅದನ್ನು ಈ ಹಿಂದೆಯೇ ದಾವಣಗೆರೆಯಲ್ಲಿ ಪ್ರಯೋಗಾರ್ಥವಾಗಿ ಮಾಡಿ ನೋಡಿದ್ದರು. ಸದ್ಯಕ್ಕೆ ಮುಸ್ಲಿಮರನ್ನು ಬದಿಗಿಟ್ಟು ಕ್ರಿಶ್ಚಿಯನ್ ಸಮುದಾಯವನ್ನೇ ಟಾರ್ಗೆಟ್ ಮಾಡಿ ಬಹಳ ಹಿಂದಿನಿಂದಲೇ ಚರ್ಚುಗಳ ಮೇಲೆ ದಾಳಿಯ ರಿಹರ್ಸಲ್ ಪ್ರಾರಂಭಿಸಿದ್ದರು. ಅದರ ಮುಂದುವರೆದ ಭಾಗವಾಗಿ ಇದೇ ತಿಂಗಳ 7 ರಂದು ದಾವಣಗೆರೆ ಜಿಲ್ಲೆಯ ಬಾಡ ಎಂಬ ಗ್ರಾಮದಲ್ಲಿ ಚರ್ಚೊಂದನ್ನು ಸಾರ್ವಜನಿಕವಾಗಿ ಸುಟ್ಟುಹಾಕುವುದರೊಂದಿಗೆ ಗುಜರಾತ್ ಮಾದರಿಯ ಪ್ರಯೋಗಕ್ಕೆ ಅಧಿಕೃತ ಚಾಲನೆ ಕೊಟ್ಟಿದ್ದರು.

ಹಾಗೆ ನೋಡಿದರೆ ದಾವಣಗೆರೆ ಜಿಲ್ಲೆಯೊಂದರಲ್ಲೇ ಕ್ರೈಸ್ತ ಸಮುದಾಯದವರ ಮೇಲೆ ನಡೆದಷ್ಟು ದಾಳಿಗಳು ಬೇರೆ ಯಾವ ಜಿಲ್ಲೆಯಲ್ಲೂ ನಡೆದಿರಲಿಕ್ಕಿಲ್ಲ. 26 ನವೆಂಬರ್ 2006 ರಂದು ದಾವಣಗೆರೆಯ ರಂಗಮಹಲ್‌ನಲ್ಲಿ ಕ್ರೈಸ್ತ ಸಮುದಾಯದವರ ಮೇಲೆ ಪ್ರಾರಂಭಗೊಂಡ ಕೋಮುವಾದಿಗಳ ದಾಳಿ ಅಲ್ಲಿಂದ 20.8.2007 ರಂದು ಕುಂದುವಾಡ ಕೆರೆಯ ಹತ್ತಿರ ಕ್ರೈಸ್ತ ಹೆಣ್ಣುಮಕ್ಕಳ ಮೇಲೆ ಹಲ್ಲೆ ನಡೆಸುವುದರ ಮೂಲಕ ಮುಂದುವರೆದು ದಿನಾಂಕ 1.10.2007 ರಾತ್ರಿ ದಾವಣಗೆರೆ ಜಯನಗರದಲ್ಲಿನ ನಿತ್ಯಜೀವ ಚರ್ಚಿನ ಮೇಲೆ ದಾಳಿ ಮಾಡಿ ಪೀಠೋಪಕರಣಗಳನ್ನು ಧ್ವಂಸಗೊಳಿಸುವುದರ ತನಕ ಮುಂದುವರೆದಿತ್ತು. ಅಲ್ಲಿಂದ ಇಲ್ಲಿಯವರೆಗೆ ಸರಿಸುಮಾರು 8-10 ಚರ್ಚುಗಳ ಮೇಲೆ ದಾಳಿ ಮಾಡಿದ್ದರೂ ಪೊಲೀಸರು ಮಾತ್ರ ಯಾವುದೇ ಕ್ರಮ ಕೈಗೊಳ್ಳಲಿಲ್ಲ, ವಾಸ್ತವದಲ್ಲಿ ಕ್ರಮ ಕೈಗೊಳ್ಳದಿರುವಂತೆ ರಾಜ್ಯದ ಮುಖ್ಯಮಂತ್ರಿ ಮತ್ತು ಗೃಹಮಂತ್ರಿಗಳೇ ಮೌಖಿಕ ಆದೇಶ ರವಾನಿಸಿರುವುದು ಸುಳ್ಳೇನಲ್ಲ.

ಯಾವಾಗ ತಾವೇನು ಮಾಡಿದರೂ ಪೊಲೀಸರು ಏನೂ ಕಿತ್ತುಕೊಳ್ಳುವುದಿಲ್ಲ ಎಂಬುದು ಖಾತ್ರಿಯಾಯಿತೋ ಭಜರಂಗದಳದ ಕಮಂಗಿಗಳ ಮಂಗಾಟವೂ ಮಿತಿ ಮೀರಿಬಿಟ್ಟಿತು. ಕ್ರೈಸ್ತರ ಪ್ರಾರ್ಥನಾ ದಿನವಾದ ಭಾನುವಾರವನ್ನೇ ಆಯ್ಕೆ ಮಾಡಿಕೊಂಡು ಅಂದಿನ ದಿನ ಚರ್ಚುಗಳ ಬಳಿಗೆ ಹೋಗಿ ಪತ್ರಿಕೆ ಮತ್ತು ಟಿವಿ ಮಾಧ್ಯಮದವರನ್ನ ಸ್ಥಳಕ್ಕೆ ಕರೆಯಿಸಿ ಅವರೆದುರಿನಲ್ಲೇ ಗಲಾಟೆ ಎಬ್ಬಿಸುವುದು, ತಮ್ಮ ಬೆನ್ನಿಗೆ ಕೆಲವು ಮಠಾಧೀಶರನ್ನು ನಿಲ್ಲಿಸಿಕೊಳ್ಳುವುದು, ಚರ್ಚಿಗೆ ಬರುವವರನ್ನು ಹೆದರಿಸಿ ಓಡಿಸುವುದು ಮುಂತಾದ ಹೊಸ ಹೊಸ ವರಸೆಗಳನ್ನು ಪ್ರಾರಂಭಿಸಿಬಿಟ್ಟರು.



ಚರ್ಚುಗಳ ಮೇಲೆ ದಾಳಿ ಮಾಡಿದಾಗಲಾಗಲೀ, ಕ್ರೈಸ್ತರ ಮೇಲೆ ದಾಳಿ ಮಾಡಿದಾಗಲಾಗಲೀ ಸಂಘ ಪರಿವಾರದ ಚೆಡ್ಡಿಗಳು ತಮ್ಮ ಯಾವತ್ತಿನ ಹೇಡಿತನವನ್ನು ಪ್ರದರ್ಶಿಸಿ ತಮ್ಮ ಮೇಲೆಯೇ ಕ್ರೈಸ್ತರು ಹಲ್ಲೆ ನಡೆಸಿದ್ದಾರೆಂದು, ಪ್ರಾಣ ಬೆದರಿಕೆ ಒಡ್ಡಿದ್ದಾರೆಂದೂ ಬಹಳಷ್ಟು ಮಂದಿ ಕ್ರೈಸ್ತರ ಮೇಲೆ ಕೇಸು ದಾಖಲಿಸಿ ಕ್ರೈಸ್ತರು ಜೈಲುಪಾಲಾಗುವಂತೆ ಮಾಡಿದ್ದಾರೆ.

ಪೊಲೀಸರು ಮತ್ತು ಜಿಲ್ಲಾಡಳಿತದ ಬೆಂಬಲದಿಂದಾಗಿಯೇ ಅಲ್ಪಸಂಖ್ಯಾತರ ಮೇಲಿನ ಯಶಸ್ವಿ ದಾಳಿಗಳನ್ನು ನಡೆಸಿಕೊಂಡು ಬಂದಿರುವ ಕೋಮುವಾದಿಗಳು ದಿನಾಂಕ 17.8.08 ರ ಭಾನುವಾರ ಹಿಂದೂ ಜಾಗರಣ ವೇದಿಕೆಯ ಬಸವರಾಜ, ರಾಜಶೇಖರ, ದೀಪಕ್ ಕಾನಡೆ ಮುಂತಾದವರು ದಾವಣಗೆರೆಯ ಸರಸ್ವತಿ ನಗರದ ಡಿ.ಎಚ್.ಎಂ. ಪ್ರಾರ್ಥನಾ ಮಂದಿರಕ್ಕೆ ನುಗ್ಗಿ ಪ್ರಾರ್ಥನೆಯನ್ನು ತಡೆದು ನಿಲ್ಲಿಸಿ ದಾಂಧಲೆ ಮಾಡುವ ಮೂಲಕ ಭೀತಿಯ ವಾತಾವರಣವನ್ನು ಸೃಷ್ಟಿಸಿ ಚರ್ಚ್‌ಗೆ ಬಂದಿದ್ದ ಹೆಣ್ಣುಮಕ್ಕಳ ಮೈಕೈ ಮುಟ್ಟಿ ಎಳೆದಾಡಿ ಅವರ ಸೀರೆಗಳನ್ನು ಹರಿದು ಅವರನ್ನು ತುಚ್ಛವಾಗಿ ಬೈದಿದ್ದಾರೆ. ದುರಂತ ಎಂದರೆ ಇದೆಲ್ಲಾ ಪೊಲೀಸರ ಎದುರಿನಲ್ಲೇ ನಡೆಯುತ್ತಿದ್ದರೂ ಯಾವೊಬ್ಬ ಪೊಲೀಸನೂ ಕ್ಯಾರೆ ಎನ್ನಲಿಲ್ಲ!

ಇದಾದ ಮರುದಿನ ಜಿಲ್ಲಾಡಳಿತವು ಶಾಂತಿಸಭೆಯನ್ನು ನಡೆಸಿತಾದರೂ 31.8.08 ರ ಭಾನುವಾರ ಮತ್ತೊಮ್ಮೆ ಇದೇ ಚರ್ಚಿಗೆ ನುಗ್ಗಿದ ಚೆಡ್ಡಿಗಳು ಕ್ರೈಸ್ತರನ್ನು ಪ್ರಾರ್ಥನೆ ಮಾಡದಂತೆ ತಡೆದಿದ್ದಾರೆ. ಬಹಳ ಘೋರವೆಂದರೆ 30.8.08 ರಂದು ದಾವಣಗೆರೆಯ ಕೆ.ಟಿ.ಜೆ. ನಗರದ ತಲೆಕೆಟ್ಟ ಎಸ್‌ಐ ಕ್ರೈಸ್ತ ಪಾಸ್ಟರುಗಳಿಗೆ ಪೊಲೀಸ್ ನೋಟೀಸು ನೀಡಿ ಚರ್ಚುಗಳ ಮತ್ತು ಪ್ರಾರ್ಥನೆ ಮಾಡಲು ಸಹ ಪರವಾನಗಿ ಹಾಜರುಪಡಿಸಲು ಕೇಳಿದ್ದಾನೆ. ಈ ನೋಟೀಸಿಗೆ ಪತ್ರ ಸಂಖ್ಯೆಯೂ ಇಲ್ಲದಿರುವುದನ್ನು ಗಮನಿಸಿದರೆ ಈ ಪೊಲೀಸರು ಎಷ್ಟರ ಮಟ್ಟಿಗೆ ಕೋಮುವಾದಿಗಳ ಸೇವೆ ಮಾಡುತ್ತಿದ್ದಾರೆಂದು ಅರ್ಥವಾಗುತ್ತದೆ. ಪೊಲೀಸರ ಇಂತಹವೇ ಸುಳ್ಳು ಆರೋಪಗಳಿಗೆ ಇಂಬು ನೀಡುತ್ತಾ ದಾವಣಗೆರೆಯ ತಹಶೀಲ್ದಾರ್ 13 ಮಂದಿ ಪಾಸ್ಟರುಗಳ ಮೇಲೆ 107 ಕೇಸನ್ನು ಏಕಪಕ್ಷೀಯವಾಗಿ ದಾಖಲು ಮಾಡಿದ್ದಾನೆ.

ದಿನಾಂಕ 23.8.08 ರಂದು ಡಿವೈಎಸ್‌ಪಿ ರುದ್ರಮುನಿ, ಇನ್ಸ್‌ಪೆಕ್ಟರ್ ಶ್ರೀನಿವಾಸ ಮತ್ತು ಕೆ.ಟಿ.ಜೆ. ನಗರದ ಪಿಎಸ್‌ಐ ಬ್ರಿಜೇಶ್ ಮ್ಯಾಥ್ಯು ಅವರುಗಳು ದಾವಣಗೆರೆ ಜಿಲ್ಲೆಯ ಪಾಸ್ಟರ್‌ಗಳನ್ನು ಕರೆಸಿ, ನಿಮ್ಮ ಚರ್ಚುಗಳೊಳಗೆ ಕ್ರಿಶ್ಚಿಯನ್ ಹೆಸರುಗಳುಳ್ಳವರನ್ನು ಮಾತ್ರ ಸೇರಿಸಬೇಕು, ಇತರೆ ಬೇರಾವ ಜನಾಂಗದವರನ್ನು ಸೇರಿಸಬಾರದೆಂದು ಷರತ್ತು ವಿಧಿಸಿ, ಧಾರ್ಮಿಕ ಸ್ವಾತಂತ್ರ್ಯವನ್ನು ಅಣಕ ಮಾಡಿದ್ದಾರೆ.

ದಿನಾಂಕ 24.8.08 ರ ಭಾನುವಾರದಂದು ಹಿಂದೂ ಜಾಗರಣ ವೇದಿಕೆಯ ಬಸವರಾಜ, ಮಣಿಕಂಠ ಮುಂತಾದವರು ಸರಸ್ವತಿ ನಗರದ ನಿತ್ಯಜೀವ ದೇವಾಲಯ ಚರ್ಚಿಗೆ ನುಗ್ಗಿ ಪ್ರಾರ್ಥನೆಯನ್ನು ತಡೆದು ನಿಲ್ಲಿಸಿ ದಾಂಧಲೆ ಪ್ರಾರಂಭಿಸಿದ್ದಾರೆ. ಈ ಕೋಮುವಾದಿಗಳಿಗೆ ಪೂರಕವಾಗಿ ಬೆಂಬಲ ನೀಡಲು ಬಂದಿದ್ದ ಗುಲ್ಬರ್ಗದ ಕಬೀರಾನಂದ ಸ್ವಾಮಿ ಮತ್ತು ಸೇವಾಲಾಲ್ ಸ್ವಾಮಿಗಳಿಬ್ಬರು ಕೋಮುವಾದಿಗಳ ಪರವಾಗಿ ಚರ್ಚಿನ ಮುಂದೆ ಧರಣಿ ಕುಳಿತು ತಮ್ಮ ಮಟ್ಟವನ್ನು ತೋರಿಸಿಕೊಂಡಿದ್ದಾರೆ. ಈ ಸೇವಾಲಾಲ್ ಎಂತಹ ಸ್ವಾಮಿ ಎಂದರೆ ಈ ಹಿಂದೆ ಕೆಲವರಿಗೆ ಮೋಸ ಮತ್ತು ವಂಚನೆ ಮಾಡಿದ್ದಕ್ಕೆ ಪೊಲೀಸರ ಅತಿಥಿ ಆಗಿದ್ದವನು. ಈತ ಇಂತಹ ದಗಾಕೋರ ಸ್ವಾಮಿ ಭಜರಂಗದಳದ ಮಂಗಗಳೊಂದಿಗೆ ಸೇರದೆ ಇನ್ನೇನು ಮಾಡುತ್ತಾನೆ? ಧರಣಿ, ಗದ್ದಲಗಳಿಂದ ಭಯಗೊಂಡಿದ್ದ ಕ್ರೈಸ್ತರನ್ನು ಪೊಲೀಸರು ಅಲ್ಲಿಂದ ಓಡಿಸಿದ್ದಾರೆ. ಡಾ. ಕುಮಾರ್ ಮತ್ತು ಗೀತಾ ಅವರ ಮೇಲೆ ಡಿವೈಎಸ್‌ಪಿ ರುದ್ರಮುನಿ, ಸಿಪಿಐ ಶ್ರೀನಿವಾಸ್ ದೌರ್ಜನ್ಯ ನಡೆಸಿದ್ದೇ ಅಲ್ಲದೆ ಅವರನ್ನು ಬಂಧಿಸಿ, ಚರ್ಚಿನ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ. ಆ ಪೊಲೀಸ್ ಠಾಣೆಯಲ್ಲಿ ಪ್ರಜ್ಞಾಹೀನಳಾಗಿದ್ದ ಗೀತಾರವರನ್ನು ಹೊರತುಪಡಿಸಿ ಉಳಿದವರಿಂದ ತಪ್ಪೊಪ್ಪಿಗೆ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡು ಎಲ್ಲರ ಭಾವಚಿತ್ರಗಳನ್ನು ತೆಗೆಸಿಕೊಂಡಿದ್ದಾರೆ. ಪ್ರಕಾಶ್ ಎನ್ನುವವನು (ಈತನ ಹೆಂಡತಿ ಮಹಾನಗರ ಪಾಲಿಕೆ ಸದಸ್ಯೆ) ನಿತ್ಯಜೀವ ಚರ್ಚಿನ ನೀರಿನ ಸಂಪರ್ಕದ ಕೊಳವೆಯನ್ನು ಕಿತ್ತು ಹಾಕಿದ್ದಾನೆ. ಇಷ್ಟೆಲ್ಲಾ ದೌರ್ಜನ್ಯಗಳನ್ನು ಪೊಲೀಸರು ಹಾಗೂ ಸಂಘ ಪರಿವಾರದವರು ಜಂಟಿಯಾಗಿ ನಡೆಸಿದ್ದಾರೆ.

ಜಿಲ್ಲಾಡಳಿತದ ಬೆಂಬಲ

ಈ ಹಿಂದೆ ಸಂಘ ಪರಿವಾರದವರು ಕ್ರೈಸ್ತರ ಮೇಲೆ ನಡೆಸಿರುವ ದಾಳಿಗಳಿಗೆ ಪರೋಕ್ಷವಾಗಿ ಸಹಕರಿಸುತ್ತಿದ್ದ

ದಾವಣಗೆರೆ ಜಿಲ್ಲಾಡಳಿತವು ಇತ್ತೀಚಿನ ಎರಡು ತಿಂಗಳಿನಿಂದ ಸಂಘಪರಿವಾರದವರು ಕ್ರೈಸ್ತರ ಮೇಲೆ ನಡೆಸಿರುವ ದಾಳಿಗಳಿಗೆ ಪ್ರತ್ಯಕ್ಷ ಸಹಕಾರವನ್ನು ನೀಡಿದೆ.

ಮೊದಲನೆಯದಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುತ್ತೇವೆನ್ನುವ ಪೊಲೀಸರು ಸಂಘ ಪರಿವಾರದವರ ಏಜೆಂಟರಂತೆ ವರ್ತಿಸುವ ಮೂಲಕ ಅವರು ನಡೆಸಿದ ಎಲ್ಲಾ ಅನಾಚಾರಗಳಿಗೆ ತಮ್ಮ ಪ್ರತ್ಯಕ್ಷ ಬೆಂಬಲವನ್ನು ಕೊಟ್ಟಿದ್ದಾರೆ. ಸಂಘ ಪರಿವಾರದವರು ದಾಂಧಲೆ ಮಾಡಿದ ಎಲ್ಲಾ ಸಂದರ್ಭದಲ್ಲೂ ಪೊಲೀಸರು ಕ್ರೈಸ್ತರ ಮೇಲೆಯೇ ಕೇಸುಗಳನ್ನು ದಾಖಲು ಮಾಡಿದ್ದಾರೆ. 30.8.08 ರಂದು ಕೆ.ಟಿ.ಜೆ. ನಗರ ಪೊಲೀಸ್ ಠಾಣೆಯಿಂದ ಚರ್ಚುಗಳನ್ನು ಹಾಗೂ ಪ್ರಾರ್ಥನಾ ಸ್ಥಳಗಳ ಪರವಾನಗಿ ಕೇಳಿ ಅಕ್ರಮವಾಗಿ ಪೊಲೀಸ್ ನೋಟೀಸ್ ಜಾರಿಗೊಳಿಸಿದ್ದಾರೆ. ಇಲ್ಲಿನ ಎಸ್‌ಪಿ ಸಂಘಪರಿವಾರದ ಅಜೆಂಡಾವನ್ನು ತಲೆಯ ಮೇಲೆ ಹೊತ್ತು ಕ್ರೈಸ್ತ ಅಲ್ಪಸಂಖ್ಯಾತರ ಮೇಲಿನ ದಾಳಿಗಳಿಗೆ ಸಹಕರಿಸುತ್ತಿದ್ದಾರೆ.

ಎರಡನೆಯದಾಗಿ ಪೊಲೀಸರು ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ದಾಖಲಿಸಿರುವ ದೂರುಗಳನ್ನು ಆಧಾರವಾಗಿಟ್ಟುಕೊಂಡು ಇಲ್ಲಿನ ತಹಶೀಲ್ದಾರ, 13 ಫಾಸ್ಟರುಗಳ ಮೇಲೆ ಮತ್ತು ಇತರೆ 20 ಮಂದಿ, ಕ್ರೈಸ್ತ ಅನುಯಾಯಿಗಳ ಮೇಲೆ ಕಲಂ 107 ಕೇಸು ದಾಖಲಿಸಿದ್ದಾನೆ. ಜಿಲ್ಲಾಧಿಕಾರಿ ಅಮರನಾರಾಯಣ ಇಲ್ಲಿನ ಚರ್ಚುಗಳಿಗೆ ಪರವಾನಗಿ ಇಲ್ಲವೆಂದು, ಇವುಗಳನ್ನು ತೆರವುಗೊಳಿಸಬೇಕೆಂದು ನಗರಪಾಲಿಕೆಗೆ ಆದೇಶಿಸಿದ್ದಾರೆ. ಜಿಲ್ಲಾಧಿಕಾರಿಯ ಈ ಅಕ್ರಮ ಆದೇಶವನ್ನು ಆಧಾರವಾಗಿಟ್ಟುಕೊಂಡು ಮಹಾನಗರಪಾಲಿಕೆಯವರು ಎಲ್ಲಾ ಚರ್ಚುಗಳ ಅನಧಿಕೃತವೆಂದು ಘೋಷಿಸಿ ಅವುಗಳನ್ನು ತೆರವುಗೊಳಿಸಲು ನೋಟೀಸ್ ಜಾರಿ ಮಾಡಿದ್ದಾರೆ. ಈ ನೋಟೀಸಿಗೆ ಪೂರಕವಾಗಿ ಮಹಾನಗರಪಾಲಿಕೆ ಇಂಜಿನಿಯರ್ ಒಬ್ಬ ಎಲ್ಲು ಚರ್ಚುಗಳಿಗೆ ಬೀಗ ಮುದ್ರೆ ಜಡಿದು ಸೀಲ್ ಮಾಡಿದ್ದಾನೆ. ಇದಕ್ಕಿಂತಲೂ ಆಶ್ಚರ್ಯಕರವಾದ ಸಂಗತಿಯೆಂದರೆ 31.8.08 ರ ಭಾನುವಾರದಂದು ಪೊಲೀಸರು ನಾಲ್ಕೈದು ಚರ್ಚುಗಳನ್ನು ಹೆಸರಿಸಿ ಇವುಗಳ ಸುತ್ತ 200 ಮೀಟರ್ ದೂರದವರೆಗೆ ಕಲಂ 144 ನನ್ನು ವಿಧಿಸಿ ಈ ಚರ್ಚ್‌ಗಳ ಬಳಿ ಪ್ರಾರ್ಥನೆಗೆಂದು ಕ್ರೈಸ್ತರ್‍ಯಾರೂ ಬಾರದಂತೆ ನೋಡಿಕೊಂಡಿದ್ದಾರೆ.


ದಾವಣಗೆರೆ ಜಿಲ್ಲಾಡಳಿತವು ಸಂಘ ಪರಿವಾರದ ಚೆಡ್ಡಿಗಳಿಗೆ ಸಂಪೂರ್ಣ ಕುಮ್ಮಕ್ಕು ನೀಡಿರುವುದರ ಫಲಿತಾಂಶವೇ ದಿನಾಂಕ 7.8.08 ರಂದು ಹಿಂದೂ ಜಾಗರಣ ವೇದಿಕೆ ಹಾಗೂ ಶ್ರೀರಾಮಸೇನೆಯ ಚೆಡ್ಡಿಗಳು ...ಡ ಗ್ರಾಮದ ಜನರನ್ನು ಎತ್ತಿಕಟ್ಟಿ ಅಲ್ಲಿನ ಕ್ರೈಸ್ತ ದೇವಾಲಯವೊಂದನ್ನು ಸಂಪೂರ್ಣ ನಾಶಗೊಳಿಸಿ ಸುಟ್ಟು ಹಾಕಿದ್ದು.

ಹೀಗೆ ದಾವಣಗೆರೆಯಲ್ಲಿ ನಡೆಸಿದ ಪ್ರಯೋಗ ಯಾವಾಗ ಯಶಸ್ವಿಯಾಯಿತೋ ಚಡ್ಡಿಗಳಿಗೆ ಹೊಸ ಹುರುಪು ಸಿಕ್ಕಂತಾಗಿ ಅದನ್ನೇ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಪ್ರಾರಂಭಿಸಿದ್ದಾರೆ. ದಾವಣಗೆರೆಯಲ್ಲಿ ಮಾಡಿದಂತೆಯೇ ಮಲೆನಾಡು ಮತ್ತು ಕರಾವಳಿಯಲ್ಲೂ ಜಿಲ್ಲಾಡಳಿತ ಮತ್ತು ಪೊಲೀಸರನ್ನು ತಮ್ಮ ಬೆನ್ನಿಗಿಟ್ಟುಕೊಂಡಿದ್ದಾರೆ. ದಾವಣಗೆರೆಯಲ್ಲಿ ಹೇಗೆ ಭಾನುವಾರದ ಪ್ರಾರ್ಥನಾ ದಿನವನ್ನೇ ಆಯ್ಕೆ ಮಾಡಿಕೊಂಡಿದ್ದರೋ ಕರಾವಳಿ ಮತ್ತು ಮಲೆನಾಡಿನಲ್ಲೂ ಭಾನುವಾರವನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಒಂದೇ ವ್ಯತ್ಯಾಸ ಎಂದರೆ ಕರಾವಳಿ ಮತ್ತು ಮಲೆನಾಡಿನಲ್ಲಿ ನಡೆದಿರುವ ಈ ದಾಳಿಗಳು ದಾವಣಗೆರೆಯಲ್ಲಿ ನಡೆದ ದಾಳಿಗಿಂತ ಹೆಚ್ಚು ಯೋಜಿತವಾಗಿರುವುದಲ್ಲದೇ ಹೆಚ್ಚು ವಿಸ್ತಾರವಾಗಿಯೂ ನಡೆದಿದೆ.

ಅವತ್ತು ದಾವಣಗೆರೆ, ಇವತ್ತು ಕರಾವಳಿ ಮತ್ತು ಮಲೆನಾಡು ನಾಳೆ ಇಡೀ ಕರ್ನಾಟಕವಾದರೂ ಆಶ್ಚರ್ಯವಿಲ್ಲ, ಅವತ್ತು ಮುಸ್ಲಿಮರು, ಇವತ್ತು ಕ್ರಿಶ್ಚಿಯನ್ನರು ನಾಳೆ ಈ ನಾಡಿನ ದಲಿತರು, ಮಹಿಳೆಯರು, ಗಿರಿಜನರು ಟಾರ್ಗೆಟ್ ಆದರೂ ಆಶ್ಚರ್ಯವಿಲ್ಲ, ಅಂತಹದ್ದೊಂದು ಘಟನೆ ಸಂಭವಿಸುತವಾಗದಂತೆ ತಡೆಯುವ ಜವಾಬ್ದಾರಿ ಈ ನಾಡಿನ ಜನರ ಮೇಲಿದೆ. ಬಿಜೆಪಿಗೆ ಅಧಿಕಾರ ಕೊಟ್ಟು ತಪ್ಪು ಮಾಡಿದ್ದಾಯಿತು. ಈಗ ಅದನ್ನು ಸರಿಪಡಿಸಬೇಕೆಂದರೆ ಸಂಘಪರಿವಾರ ಮತ್ತು ಬಿಜೆಪಿಗಳ ಆಟ ನಡೆಯದಂತೆ ಸಾಮೂಹಿಕ ಹೋರಾಟ ಕಟ್ಟಬೇಕಿದೆ. ಕ್ರಿಶ್ಚಿಯನ್ನರ ಮೇಲಿನ ದಾಳಿಗಳನ್ನು ಖಂಡಿಸಿ ಹಾಗೂ ಆ ದಾಳಿಗಳಿಗೆ ಬೆಂಬಲಿಸುತ್ತಿರುವ ಸರ್ಕಾರ ಮತ್ತು ಪೊಲೀಸರ ವರ್ತನೆಯನ್ನು ವಿರೋಧಿಸಿ ಸೆ. 23 ರಂದು ದಾವಣಗೆರೆಯಲ್ಲಿ ಬೃಹತ್ ಪ್ರತಿಭಟನೆ ನಡೆಯುವುದಿದೆ. ಎಲ್ಲಿಂದ ದಾಳಿ ಪ್ರಾರಂಭವಾದವೋ ಅಲ್ಲಿಂದಲೇ ಅದರ ವಿರುದ್ಧದ ಆಂದೋಲನವೂ ಆರಂಭವಾಗಬೇಕಿದೆ. ಆಗ ಮಾತ್ರ ಕರ್ನಾಟಕದಲ್ಲಿ ಶಾಂತಿ-ಸೌಹಾರ್ದತೆಗಳು ನೆಲೆಸಬಹುದು.

■ ಚಂದ್ರಶೇಖರ ತೋರಣಘಟ್ಟ

ಶಿವಮೊಗ್ಗ : ಚೆಡ್ಡಿ ಪಡೆಯ ದಾಂಧಲೆ




ನಿರೀಕ್ಷಿಸಿದ್ದಂತೆಯೇ ಶಿವಮೊಗ್ಗದಲ್ಲಿ ಚೆಡ್ಡಿ ಪಡೆ ತನ್ನ ಕನಸಿನ 'ಹಿಂದೂ ರಾಷ್ಟ್ರ' ನಿರ್ಮಾಣವಾದಂತೆ ವರ್ತಿಸ ಲಾರಂಭಿಸಿವೆ. ಇಲ್ಲಿ ಅವರು ಹೇಳಿದ್ದೇ ಕಾನೂನು ಎಂಬಂತಹ ವಾತಾವರಣ ನಿರ್ಮಾಣವಾಗಿದೆ. ಯಡ್ಡಿಯ ತವರು ಕ್ಷೇತ್ರ ಶಿಕಾರಿಪುರದಲ್ಲಿ ಅವರ ವಿರುದ್ಧ ಮಾತನಾಡಿದವರನ್ನು ಬಡಿಗೆಯಿಂದ ಬಡಿದಿದ್ದೂ ಈ ಹಿಂದೆ ನಡೆದಿತ್ತು. ಈಗ ಅಲ್ಪಸಂಖ್ಯಾತರು, ಅಧಿಕಾರಿಗಳು ಮತ್ತು ದಲಿತರು ಚೆಡ್ಡಿಗಳ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಚೆಡ್ಡಿಗಳ ಮಾತು ಕೇಳದವರಿಗೆ ಉಳಿಗಾಲವಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ.

ಗಲಾಟೆಗೆ ಈಶ್ವರಪ್ಪನೇ ಕಾರಣ

ಶಿವಮೊಗ್ಗದಲ್ಲಿ ಈ ಬಾರಿ ಗಲಾಟೆ ನಡೆಯಲು ಕಾರಣ ಸ್ಥಳೀಯ ಶಾಸಕರೂ ಆಗಿರುವ, ಸಚಿವ ಈಶ್ವರಪ್ಪನೇ ಎಂಬ ಮಾತು ಬಿಜೆಪಿ ವಲಯದಲ್ಲಿಯೇ ಕೇಳಿಬರುತ್ತಿದೆ. ರಾಜ್ಯದ ಮುಖ್ಯಮಂತ್ರಿಯಾಗಿರುವ ಯಡಿಯೂರಪ್ಪ ಜಿಲ್ಲೆಯ ಉಸ್ತುವಾರಿಯನ್ನು ತನಗೆ ವಹಿಸದೇ ತಾವೇ ಹೊತ್ತಿರುವುದು ಈಶ್ವರಪ್ಪನ ಬಾಯಿಗೆ ಬೀಗ ಬಡಿದಂತಾಗಿದೆ. ಹೀಗಾಗಿ ಶಿವಮೊಗ್ಗದಲ್ಲಿ ಏನಾದರೂ ಗಲಾಟೆ ನಡೆದರೆ ಅದಕ್ಕೆ ಯಡ್ಡಿಯೇ ಹೊಣೆಯಾಗುತ್ತಾರೆಂಬ ಕಾರಣದಿಂದ ತನ್ನ ಚೇಲಾಗಳನ್ನು ಛೂಬಿಟ್ಟು ಈಶ್ವರಪ್ಪ ಈ ಕೆಲಸವನ್ನು ಮಾಡಿಸಿರಬಹುದು ಎಂದು ಚೆಡ್ಡಿಗಳೇ ಮಾತನಾಡಿಕೊಳ್ಳುತ್ತಿವೆ.

ಈಶ್ವರಪ್ಪನ ಬೆಂಬಲಿಗರೆಲ್ಲಾ "ಗಣಪತಿ ಕೂರಿಸಲು ಪರ್ಮಿಷನ್ ಬೇಡ" ಎಂಬ ಕಾನೂನು ವಿರೋಧಿ ಚಳವಳಿ ನಡೆಸಿದ್ದನ್ನು ನೋಡಿದರೆ ಇದರಲ್ಲಿ ಹುರುಳಿರಬಹುದು ಎನಿಸುತ್ತಿದೆ. ಗಲಾಟೆಗೆ ತಾನೇ ಕಾರಣ ಎಂಬ ಚರ್ಚೆ ಪಕ್ಷದ ವಲಯದಲ್ಲಿ ಕೇಳಿಬರುತ್ತಿದ್ದಂತೆಯೇ ತನ್ನ ಪ್ಲಾನ್ ಬಹಿರಂಗವಾಯಿತಲ್ಲ ಎಂದು ಹೆದರಿದ ಈಶ್ವರಪ್ಪ ಶಿವಮೊಗ್ಗಗೆ ಓಡಿಬಂದಿದ್ದು ಎಲ್ಲರಿಗೂ ಗೊತ್ತಾಗಿದೆ.

ಗಲಾಟೆ ಮಾಡುವ ಉದ್ದೇಶದಿಂದಲೇ ಕೂರಿಸಲಾಗುವ 'ಓಂ' ಎಂಬ ಗಣಪತಿಯ ವಿಸರ್ಜನೆ ಸಂದರ್ಭದಲ್ಲಿ ಮತ್ತೆ ಗಲಾಟೆ ನಡೆದರೆ ತನ್ನ ತಲೆಗೇ ಅದನ್ನೂ ಕಟ್ಟುತ್ತಾರೆ ಎಂದು ಅರಿತ ಈಶ್ವರಪ್ಪ ಮೆರವಣಿಗೆಯಲ್ಲಿ ಭಾಗವಹಿಸಿ, ತಾನೇ ಪೊಲೀಸರಂತೆ ವರ್ತಿಸಿ, ಗಲಾಟೆ ಮಾಡಲು ಹೊರಟವರ ತಲೆಗೆ ಮೊಟಕಿ, ಬೀಸೋ ದೊಣ್ಣೆಯಿಂದ ಸದ್ಯಕ್ಕೆ ಪಾರಾಗಿದ್ದಾರೆ!



ಗಣಪತಿ ಗಲಾಟೆ ಮಾಡಿಸಿದರು!

ಈ ಬಾರಿ ಶಿವಮೊಗ್ಗದಲ್ಲಿ ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಗಲಾಟೆ ನಡೆದಿದೆ. ಈ ಗಲಾಟೆ ಮಾಡಿಸಿದವರು ಚೆಡ್ಡಿ ಪಡೆಯ ಚತುರರು ಎಂಬುದರಲ್ಲಿ ಎರಡು ಮಾತಿಲ್ಲ. ಗಣಪತಿ ಪ್ರತಿಷ್ಠಾಪಿಸಲು ಪರ್ಮಿಷನ್ನೇ ಬೇಡ ಎಂದು ತಗಾದೆ ತೆಗೆದಿದ್ದ ಚೆಡ್ಡಿಗಳು ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಅಸಭ್ಯವಾಗಿ ವರ್ತಿಸಿ, ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುವ ವಿಫಲ ಯತ್ನ ನಡೆಸಿದ್ದಾರೆ.

ಸಾರ್ವಜನಿಕವಾಗಿ ಯಾವುದೇ ಕಾರ್ಯಕ್ರಮ ನಡೆಸಿದರೂ ಅದಕ್ಕೆ ಪೊಲೀಸರ ಅನುಮತಿ ಪಡೆಯಬೇಕೆಂದು ಕಾನೂನು ಹೇಳುತ್ತದೆ. ಸಾರ್ವಜನಿಕವಾಗಿ ಗಣಪತಿ ಕೂರಿಸಲೂ ಈ ಕಾನೂನು ಅನ್ವಯವಾಗುತ್ತದೆ. ಆದರೆ ಶಿವಮೊಗ್ಗದ ಚೆಡ್ಡಿ ಪಡೆ ಈ ಕಾನೂನು ಜಾರಿಗೆಗೆ, ಮುಂದಾದ ಜಿಲ್ಲಾ ರಕ್ಷಣಾಧಿಕಾರಿಗಳ ವಿರುದ್ಧವೇ ತಿರುಗಿ ಬಿದ್ದು, ಪೊಲೀಸರ ಅನುಮತಿ ಪಡೆಯದೇ ಗಣಪತಿ ಕೂರಿಸುವಂತೆ ಕರೆ ನೀಡಿತ್ತು.

ಬಜರಂಗದಳ ಮತ್ತು ಸಂಘಪರಿವಾರದ ಇತರ ಸಂಘಟನೆಗಳ ನೇತೃತ್ವದಲ್ಲಿ ಸಭೆ ನಡೆಸಿದ ಚೆಡ್ಡಿಗಳು "ನಾವು ಹೇಳಿದ್ದೇ ಇಲ್ಲಿ ಕಾನೂನು" ಎಂದು ಘೋಷಿಸಿದವು. ಹರಕು ಬಾಯಿಯ ಈಶ್ವರಪ್ಪನಂತೆ ತಲೆ-ಬುಡವಿಲ್ಲದೆ ಮಾತನಾಡುವ ಆತನ ಶಿಷ್ಯ ಚೆನ್ನಿ ಯಾನೆ ಚೆನ್ನಬಸಪ್ಪ ಈ ಸಭೆಯನ್ನು ಉದ್ದೇಶಿಸಿ "ಇದು ಹಿಂದೂ ದೇಶ. ಇಲ್ಲಿ ಗಣಪತಿ ಕೂರಿಸಲು ಯಾರ ಪರ್ಮಿಷನ್ನೂ ಬೇಕಾಗಿಲ್ಲ. ಬೇರೆ ಕೋಮಿನವರು ಮೆರವಣಿಗೆ ನಡೆಸಲು ಪೊಲೀಸರ ಪರ್ಮಿಷನ್ ತೆಗೆದುಕೊಳ್ಳುತ್ತಾರಾ? ನಮಗೊಂದು ಕಾನೂನು, ಅವರಿಗೊಂದು ಕಾನೂನಾ?" ಎಂದೆಲ್ಲ ಮಾತನಾಡಿದ್ದಾನೆ.

ವಾಸ್ತವವಾಗಿ ನಮ್ಮ ದೇಶ ಹಿಂದು ದೇಶವಲ್ಲ, ಬದಲಾಗಿ ಜಾತ್ಯತೀತ ದೇಶ. ಇಲ್ಲಿ ಪ್ರತಿಭಟನೆ ನಡೆಸಲು, ಮೆರವಣಿಗೆ ತೆಗೆದುಕೊಂಡು ಹೋಗಲು, ಧರಣಿ ಮಾಡಲು, ಗಣಪತಿ ಕೂರಿಸಲು ಎಲ್ಲರೂ ಪೊಲೀಸರ ಮತ್ತು ನಗರಸಭೆಯ ಅನುಮತಿ ಪಡೆಯಲೇಬೇಕು. ಅದು ಮುಸಲ್ಮಾನರಿಗೂ ಹಿಂದೂಗಳಿಗೂ ಜಾತ್ಯತೀತರಿಗೂ ದಲಿತರಿಗೂ ರೈತರಿಗೂ ಎಲ್ಲಾ ಜನರಿಗೂ ಅನ್ವಯಿಸುತ್ತದೆ. ಆದರೆ ಕಾನೂನು, ಸಂವಿಧಾನ, ರೀತಿರಿವಾಜುಗಳ ಅರಿವಿಲ್ಲದ, ಯಾವದೇ ಜನಪರ ಹೋರಾಟ ಮಾಡಿರದ, ಚೆನ್ನಬಸಪ್ಪನಂತಹ ಅವಿವೇಕಿಗಳಿಗೆ ಇಂತಹದ್ದೆಲ್ಲ ಗೊತ್ತಾಗುವುದಾದರೂ ಹೇಗೆ? ಆದ್ದರಿಂದಲೇ ಆತ "ಯಾರ ಅನುಮತಿಯನ್ನೂ ಪಡೆಯದೆ ಎಲ್ಲೆಂದರಲ್ಲಿ ಗಣಪತಿ ಕೂರಿಸಿ" ಎಂಬ ಕರೆ ನೀಡಿದ್ದಾನೆ. ಇಂತಹ ಕಾನೂನು ಉಲ್ಲಂಘಿಸುವ ಕರೆಯನ್ನು ನೀಡಿದ ಚೆನ್ನಿಯನ್ನು ಕೂಡಲೇ ಒದ್ದು ಜೈಲಿಗೆ ತಳ್ಳಬೇಕಾಗಿದ್ದ ಪೊಲೀಸರು ತಮ್ಮ ಕರ್ತವ್ಯವನ್ನು ಮರೆತು ಕೈಕಟ್ಟಿ ಕುಳಿತಿದ್ದಾರೆ.



ಗಣಪತಿ ಕೂರಿಸಲು ಇದುವರೆಗೂ ಸ್ಥಳೀಯ ಪೊಲೀಸರ ಮತ್ತು ಆಡಳಿತದ -ಅಂದರೆ ನಗರಸಭೆಯ - ಪರವಾನಗಿ ಬೇಕಾಗಿತ್ತು. ಆದರೆ ಈ ಸಭೆ ನಡೆದ ನಂತರ ಮತ್ತೊಬ್ಬ ಚೆಡ್ಡಿಯಾದ ನಗರಸಭೆಯ ಅಧ್ಯಕ್ಷ ಶಂಕರ್ "ಈ ಬಾರಿ ನಗರಸಭೆಯ ಅನುಮತಿ ಪಡೆಯಬೇಕಾಗಿಲ್ಲ" ಎಂದು ಸಾರಿದನಲ್ಲದೆ, ಎಲ್ಲರೂ ಪೊಲೀಸರ ಅನುಮತಿ ಪಡೆಯಬೇಕು ಎಂದು ಸಾರ್ವಜನಿಕರಿಗೆ ಸೂಚನೆ ನೀಡಿದ್ದ ಎಸ್‌ಪಿಯನ್ನೇ ಬಹಿರಂಗವಾಗಿ ತರಾಟೆಗೆ ತೆಗೆದುಕೊಂಡಿದ್ದಾನೆ.

ಕಳೆದ ಹಲವಾರು ವರ್ಷಗಳಿಂದ ಶಿವಮೊಗ್ಗೆಯಲ್ಲಿ ಗಣಪತಿ ಹಬ್ಬದ ಸಂದರ್ಭದಲ್ಲಿ ಹಲವಾರು ಕೋಮುಗಲಭೆಗಳು ನಡೆದಿವೆ. ಈಗಾಗಲೇ ಹತ್ತಾರು ಮಂದಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಈ ಕಾರಣದಿಂದಾಗಿಯೇ ಜಿಲ್ಲಾ ರಕ್ಷಣಾ ಇಲಾಖೆಯು ಪ್ರತಿ ಬಾರಿ ಹೆಚ್ಚು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುತ್ತಿದೆ. ಆದರೆ ಶಿವಮೊಗ್ಗದ ಚೆಡ್ಡಿಗಳು ಈ ಬಾರಿ ಕಾನೂನಿಗೆ, ಜಿಲ್ಲಾಡಳಿತದ ಕ್ರಮಗಳಿಗೆ ಬೆಲೆ ನೀಡದೆ ಬಹಿರಂಗವಾಗಿ ಕಾನೂನು ಉಲ್ಲಂಘಿಸುವ ಹೇಳಿಕೆ ನೀಡುತ್ತಿದ್ದರೂ ಪೊಲೀಸರು, ಜಿಲ್ಲಾ ಆಡಳಿತ ಮೌನ ವಹಿಸಿದೆ. ಇದರ ಪರಿಣಾಮ ಪೊಲೀಸರಿಗೆ ಹೆದರದ ಕೆಲ ಬಜರಂಗಿಗಳು ಗಣಪತಿಯೊಂದರ ಮೆರವಣಿಗೆ ಸಂದರ್ಭದಲ್ಲಿ ಅತ್ಯಂತ ಸೂಕ್ಷ್ಮ ಪ್ರದೇಶವೆಂದು ಪರಿಗಣಿಸಲಾದ ಅಮಿರ್ ಅಹ್ಮದ್ ವೃತ್ತದಲ್ಲಿ ಗಲಾಟೆ ಮಾಡಿದ್ದಾರೆ. ಮಸೀದಿಗೆ ಕಲ್ಲು ತೂರಿ, ಪ್ರಚೋದನಾಕಾರಿ ಘೋಷಣೆಗಳನ್ನು ಕೂಗಿ, ಮಸೀದಿಯ ಮೇಲೆ ಬಾವುಟ ಕಟ್ಟಲು ಹೋಗಿದ್ದಾರೆ.

ಇಷ್ಟೆಲ್ಲಾ ಮಾಡಿದ ಮೇಲೆ ತಾವೇನೂ ತಪ್ಪು ಮಾಡಿಯೇ ಇಲ್ಲವೆಂಬಂತೆ ವರ್ತಿಸಿ, ಅಲ್ಪಸಂಖ್ಯಾತರೇ ಮೆರವಣಿಗೆ ಮೇಲೆ ಕಲ್ಲು ತೂರಿದ್ದಾರೆ ಎಂದು ಪರಿಸ್ಥಿತಿ ತಿರುಚಲು ಹೊರಟಿದ್ದರು. ಇದರಿಂದಾಗಿ ಶಾಂತವಾಗಿದ್ದ ಶಿವಮೊಗ್ಗದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು.

ಯಡ್ಡಿ ಮತ್ತು ಈಶ್ವರಿಗೆ ಶಿವಮೊಗ್ಗದಲ್ಲಿ ಶಾಂತಿ ನೆಲೆಸಬೇಕೆಂದಿದ್ದರೆ, ಹದ್ದು ಮೀರಿ ವರ್ತಿಸುತ್ತಿರುವ ತಮ್ಮ ಬೆಂಬಲಿಗರನ್ನು ಮಟ್ಟ ಹಾಕಲು ಪೊಲೀಸರಿಗೆ ಸೂಚಿಸಬೇಕು. ಅದನ್ನು ಬಿಟ್ಟು, ಗುಜರಾತ್ ಮಾದರಿ ಪ್ರಯೋಗ ನಡೆಸಲು ಹೊರಟರೆ ಶಿವಮೊಗ್ಗದ ಜನತೆ ಹಿಂದೆಯೂ ಸುಮ್ಮನಿರಲಿಲ್ಲ, ಮುಂದೆಯೂ ಸುಮ್ಮನಿರುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

■ ವರದಿಗಾರ


ಅಧಿಕಾರಿಗಳಿಗೆ ಬೆಲೆಯೇ ಇಲ್ಲ

ಶಿವಮೊಗ್ಗದಲ್ಲಿ ಕಾನೂನನ್ನು ತಮ್ಮ ಕೈಗೆತ್ತಿಕೊಂಡಿರುವ ಚೆಡ್ಡಿಗಳು ಅಧಿಕಾರಿಗಳಿಗೆ ಮೂರು ಕಾಸಿನ ಬೆಲೆಯನ್ನೂ ನೀಡುತ್ತಿಲ್ಲ. ಎಸ್‌ಪಿ ಇರಲಿ, ತಹಶೀಲ್ದಾರರಿರಲಿ ಎಲ್ಲರನ್ನೂ ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುತ್ತಿದ್ದಾರೆ. ಒಪ್ಪದ ಅಧಿಕಾರಿಗಳನ್ನು ಬಾಯಿಗೆ ಬಂದಂತೆ ಬೈಯುವುದು ಇಲ್ಲಿ ಸಾಮಾನ್ಯವಾಗಿದೆ.

ಇದಕ್ಕೆ ಉದಾಹರಣೆ ಸಾಗರದ ಬಿಜೆಪಿ ಶಾಸಕ ಗೋಪಾಲಕೃಷ್ಣ ಬೇಳೂರು. ಈತ ಹೊಸನಗರದ ತಹಶೀಲ್ದಾರ್ ಕೃಷ್ಣವೇಣಿ ಎಂಬುವವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ತಾನು ಕರೆದಲ್ಲಿಗೆ ಈ ಅಧಿಕಾರಿ ಬಂದಿಲ್ಲವೆಂಬ ಕಾರಣಕ್ಕೆ ತಹಶೀಲ್ದಾರ್ ಕಚೇರಿಗೆ ಗೂಂಡಾನಂತೆ ನುಗ್ಗಿದ ಶಾಸಕ ಗೋಪಾಲಕೃಷ್ಣ "ನೀನು ಯಾವ ಸೀಮೆ ತಹಶೀಲ್ದಾರ್?" ಎಂದೆಲ್ಲಾ ಏಕವಚನದಲ್ಲಿ ಅರಚಾಡಿದ್ದ. ಈ ಪ್ರಕರಣದಿಂದ ಬೇಸತ್ತ ಸರ್ಕಾರಿ ನೌಕರರ ಸಮೂಹ ಶಾಸಕನ ವಿರುದ್ಧ ತಿರುಗಿ ಬಿದ್ದು ಪ್ರತಿಭಟನೆಯನ್ನೂ ನಡೆಸಿದೆ. ತನ್ನ ಇಂತಹ ವರ್ತನೆಗಳಿಂದ ತನ್ನ ಮುಖಕ್ಕೆ ಮಸಿ ಬಳಿದುಕೊಳ್ಳುತ್ತಿದ್ದೇನೆ ಎಂದರಿತ ಗೋಪಾಲಕೃಷ್ಣ ಕೊನೆಗೆ ಯಾರ್ಯಾರದ್ದೋ ಕಾಲು ಹಿಡಿದು ಈ ಪ್ರಕರಣಕ್ಕೆ ಅಂತ್ಯ ಹಾಡಿಸುವಲ್ಲಿ ಯಶಸ್ವಿಯಾಗಿದ್ದಾನೆ.

ಆದರೂ ಯಡ್ಡಿ-ಈಶ್ವರಪ್ಪ ಅಧಿಕಾರಿಗಳನ್ನು ಬಾಯಿಗೆಬಂದಂತೆ ಬೈಯಬಹುದಾದರೆ ತಾವೇನು ಕಡಿಮೆ ಎಂಬಂತೆ ಶಾಸಕರಾದ ಗೋಪಾಲಕೃಷ್ಣ ಮತ್ತು ಕುಮಾರಸ್ವಾಮಿ ಮಾತನಾಡುತ್ತಿದ್ದಾರೆ. ಇವರಿಬ್ಬರ ವರ್ತನೆಯಿಂದ ತನಗೇ ಕಳಂಕ ಬರುತ್ತಿದೆ ಎಂದರಿತ ಯಡ್ಡಿ ಇತ್ತೀಚೆಗೆ ಶಾಸಕ ಕುಮಾರಸ್ವಾಮಿಯನ್ನು ಬಹಿರಂಗವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಶಾಸಕರ ವರ್ತನೆ ಇಂತಹದ್ದಾದರೆ ಇನ್ನು ಮರಿ ಚೆಡ್ಡಿ ಪುಂಡರು ತಾವು ಹೇಳಿದ್ದೇ ಕಾನೂನು ಎಂಬಂತೆ ವರ್ತಿಸುತ್ತಿದ್ದಾರೆ. ಮಾತ್ರವಲ್ಲ, ಕಳ್ಳನಾಟ ದಂಧೆ ಮಾಡಿಕೊಂಡು, ತಮ್ಮನ್ನು ವಿರೋಧಿಸಿದವರನ್ನೆಲ್ಲಾ ಬಡಿಯುತ್ತಾ ಮಲೆನಾಡಿನ ಶಾಂತಿಯನ್ನೇ ಕದಡುತ್ತಿದ್ದಾರೆ. ಉದಾಹರಣೆಗೆ ಕಳ್ಳನಾಟ ದಂಧೆ ಮಾಡುತ್ತಿದ್ದಾಗ ಸಿಕ್ಕಿ ಬಿದ್ದ ಸಾಗರ ತಾಲೂಕು ಪಂಚಾಯಿತಿ ಸದಸ್ಯ ಚೆಡ್ಡಿ ಹೊಸಗೋಡು ರತ್ನಾಕರ, ಅರಣ್ಯ ಇಲಾಖೆಯ ಸಿಬ್ಬಂದಿಯನ್ನೇ ಹೊಡೆದು ಅವರು ಆಸ್ಪತ್ರೆ ಸೇರುವಂತೆ ಮಾಡಿದ್ದಾನೆ. ■

ಬೀದರ್ ಡಿಸಿಸಿ ಬ್ಯಾಂಕ್ ಗುರುಪಾದಪ್ಪನ ಲೂಟಿ



ಮಾಜಿ ಮಂತ್ರಿ ಗುರುಪಾದಪ್ಪ ನಾಗಮಾರಪಲ್ಲಿಯೇ ಡಿಸಿಸಿ ಬ್ಯಾಂಕ್ ದಿವಾಳಿಯಾಗಲು ನೇರ ಕಾರಣನಾಗಿದ್ದಾನೆ. ಇದಿಷ್ಟೇ ಅಲ್ಲದೆ ನಾರಂಗ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷನಾಗಿಯೂ ಸಾಕಷ್ಟು ಲೂಟಿ ಮಾಡಿ ಈಗ ಕಾರ್ಖಾನೆಯನ್ನು ದಿವಾಳಿಯ ಸ್ಥಿತಿಗೆ ತಂದು ನಿಲ್ಲಿಸಿದ್ದಾನೆ. ಗುರುಪಾದಪ್ಪನ ಕಂಟ್ರೋಲಿನಲ್ಲಿರುವ ಇವೆರಡೂ ಸಂಸ್ಥೆಗಳ ವಿರುದ್ಧ ತನಿಖೆಗಳಾಗಿ ಈಗ ನಾಗಮಾರಪಲ್ಲಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ.

ಬೀದರ್‌ನ ಡಿಸಿಸಿ ಬ್ಯಾಂಕ್ ಸಂಪೂರ್ಣ ದಿವಾಳಿಯಾಗಿದೆ!

1985 ರಿಂದಲೂ ಈ ಬ್ಯಾಂಕಿನ ಅಧ್ಯಕ್ಷನಾಗಿ ಶನಿಯಂತೆ ವಕ್ಕರಿಸಿಕೊಂಡಿರುವ ಮಾಜಿ ಮಂತ್ರಿ ಗುರುಪಾದಪ್ಪ ನಾಗಮಾರಪಲ್ಲಿಯೇ ಡಿಸಿಸಿ ಬ್ಯಾಂಕ್ ದಿವಾಳಿಯಾಗಲು ನೇರ ಕಾರಣನಾಗಿದ್ದಾನೆ. ಇದಿಷ್ಟೇ ಅಲ್ಲದೆ ನಾರಂಗ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷನಾಗಿಯೂ ಸಾಕಷ್ಟು ಲೂಟಿ ಮಾಡಿ ಈಗ ಕಾರ್ಖಾನೆಯನ್ನು ದಿವಾಳಿಯ ಸ್ಥಿತಿಗೆ ತಂದು ನಿಲ್ಲಿಸಿದ್ದಾನೆ.

ಗುರುಪಾದಪ್ಪನ ಕಂಟ್ರೋಲಿನಲ್ಲಿರುವ ಇವೆರಡೂ ಸಂಸ್ಥೆಗಳ ವಿರುದ್ಧ ತನಿಖೆಗಳಾಗಿ ಈಗ ನಾಗಮಾರಪಲ್ಲಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾನೆ.

ಇದರಿಂದ ಹೆದರಿರುವ ಗುರುಪಾದಪ್ಪ ಶಿಕ್ಷೆಯಿಂದ ಪಾರಾಗಲೂ ಬಿಜೆಪಿ ಸೇರಲು ಹೊರಟಿದ್ದಾನೆ.

ಆಪರೇಷನ್ ಕಮಲ ಎಂದು ಹೇಳುತ್ತಾ ಗುರುಪಾದಪ್ಪನನ್ನು ಬಿಜೆಪಿಗೆ ಸೇರಿಸಿಕೊಳ್ಳಲು ಕಾದಿರುವ ಯಡ್ಡಿ ಸದಾನಂದಗೌಡರೊಮ್ಮೆ ಇವನ ಹಲ್ಕಟ್ ಕೆಲಸಗಳ ಬಗ್ಗೆ ಕೇಳಿ ತಿಳಿದುಕೊಂಡಿದ್ದರೆ ಒಳಿತಿತ್ತು, ಆದರೇನು ಮಾಡುತ್ತೀರಿ?

ಗುರುಪಾದಪ್ಪ ಒಂಥರಾ. 'ಹಿಟ್ಟು ಹಳಸಿತ್ತು' ಕ್ಯಾಟಗರಿಯವನಾದರೆ ಈ ಬಿಜೆಪಿಗಳು 'ನಾಯಿ ಹಸಿದಿತ್ತು' ತರದ ಜನ ಹಾಗಾಗಿ ಇದೊಂತರ ಕಳ್ಳರು ಕಳ್ಳರೇ ಸೇರಿ ಸಂತೆ ಮಾಡಿದಂತೆ.

ಡಿಸಿಸಿ ಬ್ಯಾಂಕ್ ದರೋಡೆ

ಸಹಕಾರ ಸಂಘಗಳ ನಿಯಮ ಸೆಕ್ಷನ್ 20 ರಂತೆ ಒಬ್ಬನೇ ವ್ಯಕ್ತಿ ಏಕಕಾಲದಲ್ಲಿ ಎರಡು ಸಹಕಾರ ಸಂಸ್ಥೆಗಳ ಮುಖ್ಯಸ್ಥರಾಗದಂತೆ ನಿಯಮ ಒಂದಿದೆ.

ಆದರೆ ಗುರುಪಾದಪ್ಪನಿಗೆ ಅದ್ಯಾವ ಲೆಕ್ಕ.

ಅವನು ಏಕಕಾಲದಲ್ಲಿ ಬೀದರ್ ಡಿಸಿಸಿ ಬ್ಯಾಂಕಿಗೆ ಚೇರ್ಮನ್ ಆಗಿಯೂ ಮತ್ತೊಂದೆಡೆ ನಾರಂಗ ಸಹಕಾರ ಸಕ್ಕರೆ ಕಾರ್ಖಾನೆ ಅಧ್ಯಕ್ಷನಾಗಿಯೂ ಈಗಲೂ ಅಧಿಕಾರ ನಡೆಸುತ್ತಿದ್ದಾನೆ.

ಇದು ಬರೀ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ್ದು ಮಾತ್ರವಲ್ಲ, ಕೋಟಿಗಟ್ಟಲೆ ಹಣ ಲೂಟಿ ಹೊಡೆದಿರುವ ಸೀರಿಯಸ್ಸಾದ ಅಧಿಕಾರ ದುರುಪಯೋಗದ ಹಗರಣ ಇದು.

2006 ಫೆಬ್ರವರಿ 15 ರಂದು ರಾಜ್ಯ ಹೈಕೋರ್ಟ್ ಈ ಬಗ್ಗೆ ತನಿಖೆಗೆ ಆದೇಶ ನೀಡಿದ್ದು ಈಗ ಅದರ ವರದಿ ರೆಡಿಯಾಗಿದೆ.

ಗುರುಪಾದಪ್ಪನ ಥಕಾಯಿತಿಗಳೆಲ್ಲಾ ಈ ತನಿಖೆಯಲ್ಲಿ ಬಯಲಿಗೆ ಬಂದಿವೆ.

ಡಿಸಿಸಿ ಬ್ಯಾಂಕುಗಳು ಪ್ರಧಾನವಾಗಿ ಕೃಷಿಕರಿಗೆ ಸಾಲ ನೀಡುವ ಸಂಸ್ಥೆಗಳಾಗಿದ್ದು ವಿಶೇಷ ಸಂದರ್ಭಗಳಲ್ಲಿ ಸರಿಯಾದ ಗ್ಯಾರಂಟಿ ಪಡೆದು ಬೇರೆ ಉದ್ದೇಶಕ್ಕೂ ಸಾಲ ನೀಡುತ್ತದೆ. ಆದರೆ ಗುರುಪಾದಪ್ಪ ತನಗೆ ಬೇಕಾದ ಹಾಗೆ ಮೀರ್ ಜಾಫರ್‌ನಿಗೆ 6.30 ಲಕ್ಷ, ರಾಜಕುಮಾರ ಶಂಕ್ರಪ್ಪನಿಗೆ 15 ಲಕ್ಷ, ಶಿವಕುಮಾರ ಕಾಶೀನಾಥ್ ಎಂಬುವನಿಗೆ 15 ಲಕ್ಷ, ರತ್ನಾ ನಿಂಗಪ್ಪ ಎಂಬುವಳಿಗೆ 10 ಲಕ್ಷ, ಶಂಕರ ಜಟೆಪ್ಪನಿಗೆ 30 ಲಕ್ಷ, ಮಂಜುಳಾ ಲಕ್ಷಣರಾವ್ ಎಂಬುವಳಿಗೆ 20 ಲಕ್ಷ.... ಹೀಗೆ ನಿಯಮಬಾಹಿರವಾಗಿ ಬ್ಯಾಂಕಿನ ಹಣ ಎತ್ತಿಕೊಟ್ಟಿದ್ದಾನೆ.

ಅದರ ಮೊತ್ತವೇ 1.61 ಕೋಟಿಯಷ್ಟಿದೆ. ಮತ್ತು ಇವರೆಲ್ಲಾ ಸಾಲ ಪಡೆದು ಬ್ಯಾಂಕಿಗೆ ಕೈ ಎತ್ತಿದ್ದಾರೆ.

ಇದೇ ರೀತಿ ಕೈಗಾರಿಕೆ ಘಟಕಗಳಿಗೆ ಸಾಲ ನೀಡುವ ನೆಪದಲ್ಲಿ 5.33 ಕೋಟಿ ರೂಪಾಯಿಗಳನ್ನು ತನ್ನ ಚೇಲಾಗಳಿಗೆ ಕೊಡಿಸಿ ಬ್ಯಾಂಕಿನ ಕುತ್ತಿಗೆ ಕುಯ್ದಿದ್ದಾನೆ.

ಈ ಸಾಲಗಳನ್ನು ಮಂಜೂರು ಮಾಡುವಾಗ ಅವರಿಗೆ ಮತ್ತೆ ಸಾಲ ತೀರಿಸುವ ಸಾಮರ್ಥ್ಯವಿದೆಯೋ, ಅವರ ಅರ್ಹತೆಯೇನು ಎಂಬಿತ್ಯಾದಿ ಕಿಂಚಿತ್ತೂ ಚೆಕ್ ಮಾಡಿಲ್ಲ, ಈ ಹಗರಣದಲ್ಲಿ ಬ್ಯಾಂಕಿನ ಡಿಜಿಎಂ ಶ್ಯಾಮರಾವ್ ಪಂಡಾ ಎಂಬಾತನೂ ಶಾಮೀಲಾಗಿ ಸಾಕಷ್ಟು ಲಂಚದ ಹಣ ನುಂಗಿ ಈಗ ನಿವೃತ್ತನಾಗಿದ್ದಾನೆ.

ತಾನೇ ಅಧ್ಯಕ್ಷನಾಗಿರುವ ಬ್ಯಾಂಕನ್ನು ಹೀಗೆ ನಿತ್ರಾಣಗೊಳಿಸಿದ ಗುರುಪಾದಪ್ಪ ತನ್ನ ರಾಜಕೀಯ ಚಟ ತೀರಿಸಿಕೊಳ್ಳಲು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾನೆ.

ಅದು ನಾರಂಗ ಸಹಕಾರ ಸಕ್ಕರೆ ಕಾರ್ಖಾನೆಗೆ ನಿಯಮಬಾಹಿರವಾಗಿ ಡಿಸಿಸಿ ಬ್ಯಾಂಕಿನಿಂದ 90 ಕೋಟಿಯಷ್ಟು ಹಣವನ್ನು ಸಾಲವಾಗಿ ಕೊಟ್ಟಿರುವ ವಿಚಾರ.

ನಾರಂಗ ಸಕ್ಕರೆ ಕಾರ್ಖಾನೆಗೂ ಕನ್ನ

ಇನ್ನೇನು ಸಾಯುವ ಸ್ಥಿತಿಯಲ್ಲಿರುವ ಬೀದರಿನ ನಾರಂಗ ಸಕ್ಕರೆ ಕಾರ್ಖಾನೆಯ ಒಟ್ಟು ಆಸ್ತಿ ಮೌಲ್ಯವೇ 50 ಕೋಟಿ ಮಾತ್ರ. ಜೊತೆಗೆ ಕೋ ಜನರೇಟರ್ ಆಸ್ತಿ ಮೌಲ್ಯ 5 ಕೋಟಿ ಎಂದಿಟ್ಟುಕೊಂಡರೂ. ಈ ಕಾರ್ಖಾನೆ ಬೆಲೆ 55 ಕೋಟಿ ದಾಟುವುದಿಲ್ಲ, ಆದರೆ ನಾರಂಗ ಕಾರ್ಖಾನೆ ಈಗಾಗಲೇ 162 ಕೋಟಿ ರೂಪಾಯಿಗಳ ಸಾಲ ಮಾಡಿಕೊಂಡಿದೆ.

ಅಂದರೆ ಈ ಕಾರ್ಖಾನೆ ಹರಾಜು ಮಾಡಿದರೂ ಸಾಲ ಕೊಟ್ಟವರ ಹಣ ವಾಪಸ್ ಸಿಗುವುದಿಲ್ಲ, ಅದರಲ್ಲಿ ಡಿಸಿಸಿ ಬ್ಯಾಂಕಿನದ್ದೇ 90 ಕೋಟಿ ಬಾಕಿ ಇದೆ. ಹೆಸರಿಗೆ ಇದು ಕರ್ನಾಟಕದ ಸಹಕಾರ ಸಕ್ಕರೆ ಕಾರ್ಖಾನೆ ಅಂತಿದ್ದರೂ ಗುರುಪಾದಪ್ಪನ ಭ್ರಷ್ಟ ಅಧಿಕಾರಿಗಳು ನೆರೆಯ ಆಂಧ್ರ ಹಾಗೂ ಮಹಾರಾಷ್ಟ್ರದ ರೈತರಿಂದ ಕಬ್ಬು ಖರೀದಿಸಿ ತಂದು ಅರೆಯುತ್ತಿದ್ದಾರೆ. ಆಂಧ್ರದ ಜಹೀರಾಬಾದ್ ನಾರಂಗದಿಂದ ಕೇವಲ ಆರೆಂಟು ಕಿ.ಮೀ. ದೂರದಲ್ಲಿದೆ. ಅಲ್ಲಿನ ರೈತರಿಂದ ಐದುನೂರು ರೂ.ಗೆ ಟನ್ ಕಬ್ಬು ತಂದು ಎಂಟು ನೂರಕ್ಕೆ ಬಿಲ್ ತೋರಿಸಿ ಹಣ ಲೂಟಿ ಮಾಡಲಾಗುತ್ತಿದೆ. ಜೊತೆಗೆ ಲಾರಿ ಸಾಗಾಣಿಕಾ ಗುತ್ತಿಗೆ ಕಟಾವು ಗುತ್ತಿಗೆಗಳಲ್ಲೂ ಕಮಿಷನ್ ಕೇಳಲಾಗುತ್ತಿದೆ. ಗುರುಪಾದಪ್ಪನ ಈ ರಕ್ಕಸ ಧನದಾಹದಿಂದಾಗಿ ಬೀದರ್ ಸುತ್ತಲಿನ 2 ಲಕ್ಷದಷ್ಟು ಕಬ್ಬು ಬೆಳೆಗಾರರು ದಿವಾಳಿ ಏಳುವ ಸ್ಥಿತಿ ತಲುಪಿದ್ದಾರೆ.

ನಾರಂಗ್ ಕಾರ್ಖಾನೆಯ ಡೈರೆಕ್ಟರುಗಳಿಗೆ ತಿಂಗಳಿಗೆ ಒಂದು ಲಕ್ಷ ರೂ. ಲಂಚ ನೀಡಿ ಯಾವ ಪ್ರಶ್ನೆಯನ್ನು ಕೇಳದಂತೆ ಬಾಯಿ ಮುಚ್ಚಿಸಲಾಗಿದೆ.

ರಕ್ಷಣೆಗಾಗಿ ಬಿಜೆಪಿಯತ್ತ

1985ರಿಂದಲೂ ಔರಾದ್‌ನಿಂದ ಜನತಾದಳದ ಶಾಸಕನಾಗಿ ಆರಿಸಿ ಬರುತ್ತಿದ್ದ ಗುರುಪಾದಪ್ಪ 2004ರಲ್ಲಿ ಕಾಂಗ್ರೆಸ್‌ಗೆ ನೆಗೆದು ಮತ್ತೆ ಗೆದ್ದು ಬಂದಿದ್ದ. ಆದರೆ ಈ ಬಾರಿ ಔರಾದ ಮೀಸಲು ಕ್ಷೇತ್ರವಾದ ಕಾರಣ ಬೀದರ್ ಟೌನ್‌ನಿಂದ ಸ್ಪರ್ಧಿಸಿ ಕಾಂಗ್ರೆಸ್ ಶಾಸಕನಾಗಿ ಗೆದ್ದು ಬಂದಿದ್ದ. ಈಗ ಗುರುಪಾದಪ್ಪ ಬಿಜೆಪಿ ಸೇರಲಿದ್ದಾನೆಂಬ ಮಾತುಗಳು ಕೇಳಿಬರುತ್ತಿದೆ.

ಇದಕ್ಕಿರುವ ಮುಖ್ಯ ಕಾರಣವೇ ಈ ಡಿಸಿಸಿ ಬ್ಯಾಂಕ್ ಹಾಗೂ ನಾರಂಗ ಸಕ್ಕರೆ ಕಾರ್ಖಾನೆಗಳ ಭ್ರಷ್ಟಾಚಾರದ ಹಗರಣಗಳು. ರಾಜ್ಯ ಹೈಕೋರ್ಟ್‌ನ ಆದೇಶದಂತೆ ಈ ಬಗ್ಗೆ ತನಿಖೆ ನಡೆಸಿದ ಸಹಕಾರ ಇಲಾಖೆಯ ಅಧಿಕಾರಿಗಳು ಇಲ್ಲಿ ನಡೆಸಿರುವ ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಬಗ್ಗೆ ದಾಖಲೆ ಸಹಿತ ಒಂದು ವರದಿ

▶▶▶


ಧಾರವಾಡ: ವೆಸ್ಟ್ ಕೋಸ್ಟ್ ದರ್ಬಾರ್!

ತನ್ನದೇ ಆಸ್ತಿಯನ್ನು ಬೇರೆ ಯಾರಾದರೂ ಕಬಳಿಸಿದ್ದರೆ ಅವರ ವಿರುದ್ಧ ಹೋರಾಡುವುದು ಸಾಮಾನ್ಯ. ಆದರೆ, ಯಾರದ್ದೋ ದುಡ್ಡಿನಲ್ಲಿ ಯಲ್ಲಮ್ಮನ ಜಾತ್ರೆ ಮಾಡೋದಕ್ಕೆ ಹೊರಟಿರುವ ವೆಸ್ಟ್ ಕೋಸ್ಟ್ ಎಂಬ ಕಂಪೆನಿ ತನಗೆ ಅಡ್ಡವಾಗಿರುವ ರೈತರ ಮೇಲೆ ಎರಗಿದೆ. ರೈತರ ಪರವಾಗಿ ಹೋರಾಟಕ್ಕಿಳಿದ ಗೋವಿಂದಪ್ಪ ಡೊಳ್ಳಿ ಎಂಬ ರೈತನಾಯಕನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದೆ. ದುರಂತ ಎಂದರೆ, ಯಡ್ಡಿ ಸರ್ಕಾರದ ಚಿಡ್ಡಿಗಳು ಮತ್ತು ಖಾಕಿಗಳು ರೈತರ ಪರವಾಗಿ ನಿಲ್ಲದೆ ಈ ವೆಸ್ಟ್ ಕೋಸ್ಟ್ ಕಂಪೆನಿಯ ವಾಚ್‌ಮನ್ ತರಹ ವರ್ತಿಸುತ್ತಿದೆ.

ನಡೆದಿದ್ದೇನು?

ಇದು ಧಾರವಾಡ ತಾಲ್ಲೂಕಿನ ಅಳ್ನಾವರ ಹೋಬಳಿ ವ್ಯಾಪ್ತಿಯ ದುರ್ಗದಕೇರಿ ಮತ್ತು ತೇಗೂರಿನ ಸುತ್ತಮುತ್ತ ಇರುವ ಜಮೀನು ಮತ್ತು ಅದರಲ್ಲಿ ಕೆಲಸ ಮಾಡುತ್ತಿರುವ ರೈತರ ಕತೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕಿನ ಅಂಬರೀಷ್ ವರ್ಮ ಭೀಮಪ್ಪ ದೇಸಾಯಿಗೆ ಧಾರವಾಡ ನಗರದ ಬೇಲೂರು ಎಂಬ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ 3936 ಎಕರೆ ಜಮೀನಿತ್ತು, ದೇವರಾಜ ಅರಸು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಭೂಸುಧಾರಣೆ ಕಾಯಿದೆ ಜಾರಿಗೆ ಬಂದಮೇಲೆ ಈ ಜಮೀನುದಾರರಿಗೆ ಉಳಿದದ್ದು 44 ಎಕರೆ ಮಾತ್ರ.

ಆದರೆ, ಈ ಕಾಯಿದೆ ಜಾರಿಗೆ ಬರುವ ಮೊದಲೇ 1964ರ ಅಕ್ಟೋಬರ್ 17ರಂದು ಅಂಬರೀಷ್ ದೇಸಾಯಿಯವರು ಪ್ರತಿ ಎಕರೆಗೆ ವರ್ಷಕ್ಕೆ 9.50 ರೂ.ಗಳಂತೆ ವೆಸ್ಟ್ ಕೋಸ್ಟ್ ಎಂಬ ಪೇಪರ್ ಮಿಲ್ಲಿಗೆ ಮೂವತ್ತು ವರ್ಷಕ್ಕೆ ಗುತ್ತಿಗೆ ಆಧಾರದಲ್ಲಿ ಕೊಟ್ಟಿದ್ದರು. ಈ ಒಪ್ಪಂದ 1965ರ ಜನವರಿಯಿಂದ ಪ್ರಾರಂಭವಾಗಿ 1995ಕ್ಕೆ ಕೊನೆಗೊಂಡಿದೆ. ಆದರೆ, ಈ ಮೂವತ್ತು ವರ್ಷಗಳಲ್ಲಿ ಜಮೀನಿನ ಬೆಲೆ ಗಗನಕ್ಕೇರಿದೆ. ಅದರಲ್ಲೂ ಈ ಜಮೀನು ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ – 4ಕ್ಕೆ ಹೊಂದಿಕೊಂಡಿರುವುದರಿಂದ ಪ್ರತಿ ಎಕರೆ ಏನಿಲ್ಲವೆಂದರೂ ಇಪ್ಪತ್ತೈದರಿಂದ ಮೂವತ್ತು ಲಕ್ಷ ಬಾಳುತ್ತದೆ. ಸಾವಿರಾರು ಎಕರೆ ಜಮೀನಿದೆ ಎಂದರೆ ಅದೆಷ್ಟು ಕೋಟಿ ಆಸ್ತಿಯಾಗುತ್ತದೆ. ಹಾಗಾಗಿ ಗುತ್ತಿಗೆ ಅವಧಿ ಮುಗಿದಿದ್ದರೂ. ಆ ಜಮೀನಿನಿಂದ ವೆಸ್ಟ್ ಕೋಸ್ಟ್ ಕಂಪೆನಿ ಕಾಲ್ಕೀಳಲು ತಯಾರಿಲ್ಲ.



ಇನ್ನೊಂದೆಡೆಗೆ 1974ರಲ್ಲಿ ಭೂಸುಧಾರಣೆ ಕಾನೂನು ಜಾರಿಯಾದಾಗ ಅಂಬರೀಷ್ ವರ್ಮ ದೇಸಾಯಿಯವರು ಒಂದು ತಂತ್ರ ರೂಪಿಸಿ ಆ ಜಮೀನು ತಮ್ಮಲ್ಲಿಯೇ ಉಳಿಯುವಂತೆ ನೋಡಿಕೊಳ್ಳಲು ಪ್ರಯತ್ನಿಸಿದ್ದರು. ಒಂದೆಡೆ 1964ರಲ್ಲಿಯೇ ವೆಸ್ಟ್ ಕೋಸ್ಟ್ ಕಂಪೆನಿಗೆ ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ಕೊಟ್ಟಿದ್ದರೂ ಇನ್ನೊಂದೆಡೆ ಭೂಸುಧಾರಣಾ ಕಾಯಿದೆ ಜಾರಿಯಾದ ಮೇಲೆ ತಮ್ಮ ಮನೆಯ ಆಳು-ಕಾಳುಗಳನ್ನೂ ಒಳಗೊಂಡಂತೆ ಸುಮಾರು 500 ಜನರಿಗೆ ಇದೇ ಭೂಮಿಯನ್ನು ಹಂಚಿಕೆ ಮಾಡಿದ್ದರು. ಅಂದರೆ ಇವರೆಲ್ಲರೂ ತಮಗೆ ನಿಷ್ಠರಾಗಿದ್ದು ಮುಂದೆ ತಮ್ಮ ಸಂಬಂಧಿಗಳ ಹೆಸರಿನಲ್ಲಿ ಭೂಮಿಯನ್ನು ಮರಳಿ ಪಡೆಯಬಹುದು ಎಂಬ ಲೆಕ್ಕಾಚಾರ ಅವರದಾಗಿತ್ತು.

ದೇಸಾಯಿಯವರ ಈ ಕುತಂತ್ರ ಅರಿಯದ ಮುಗ್ಧ ರೈತರು ತಮ್ಮದೇ ಭೂಮಿ ಎಂಬಂತೆ ದುರ್ಗದ ಕೇರಿ, ತೇಗೂರು, ರಾಮಾಪೂರ್, ತಡಸನಕೊಪ್ಪ ಗ್ರಾಮಗಳಲ್ಲಿ ಕಲ್ಲುಗಳಿಂದ ಕೂಡಿರುವ, ಗುಡ್ಡಗಾಡಿನಂತಿರುವ ದೇಸಾಯಿಯವರ ಬಂಜರು ಭೂಮಿಯನ್ನು ಹಸನು ಮಾಡಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಕಾಲಾನಂತರದಲ್ಲಿ ದೇಸಾಯಿಯವರ ತಂತ್ರ ಫಲಿಸುವ ಮೊದಲೇ ಅವರು ಸತ್ತು ಹೋದರು.

ರೈತರು ತಾವು ಕಳೆದ ಮೂವತ್ತೈದು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಈ ಭೂಮಿಯನ್ನು ತಮ್ಮ ಹೆಸರಿಗೆ ಮಾಡಿಕೊಡಬೇಕೆಂದು ಫಾರ್ಮ್ ನಂ.7 ಮತ್ತು



ಫಾರ್ಮ್ ನಂ.7ಎ ತುಂಬಿ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದಾರೆ. ಈ ಕೇಸು ಇನ್ನೂ ವಿಚಾರಣಾ ಹಂತದಲ್ಲಿದೆ.

ಗುತ್ತಿಗೆ ಪಡೆದಿದ್ದ ವೆಸ್ಟ್ ಕೋಸ್ಟ್ ಕಂಪೆನಿ ಕೂಡ ಆರಂಭದಲ್ಲಿ ರೈತರಿಗೆ ತೊಂದರೆ ಕೊಟ್ಟಿರಲಿಲ್ಲ, ಆದರೆ, ಅದರ ಗುತ್ತಿಗೆ ಅವಧಿ ಕೂಡ ಮುಗಿದಿದ್ದು ಆ ಜಮೀನಿನ ಮೇಲೆ ಅದಕ್ಕೀಗ ಯಾವುದೇ ಹಕ್ಕೂ ಇಲ್ಲ, ಆದರೂ, ಈಗ ಜಮೀನಿನ ಬೆಲೆ ಹೆಚ್ಚಾಗಿರುವುದರಿಂದ ಈ ಹಡಬಿ ಜಮೀನನ್ನು ಹೇಗಾದರೂ ಮಾಡಿ ಕಿತ್ತುಕೊಳ್ಳಬೇಕೆಂದು ಅದು ಹವಣಿಸುತ್ತಿದೆ. ಈ ಕಾರಣಕ್ಕಾಗಿಯೇ ಇತ್ತೀಚೆಗೆ ಕೆಲವು ದಿನಗಳಿಂದ ರೈತರು ಉಳುಮೆ ಮಾಡುತ್ತಿರುವ ಈ ಜಮೀನಿನಲ್ಲಿ ಬುಲ್ಡೋಜರ್ ನುಗ್ಗಿಸುವುದು, ಬೆಳೆ ನಾಶಮಾಡುವುದು, ಬಾಡಿಗೆ ಗೂಂಡಾಗಳನ್ನು ಕಳಿಸಿ ರೈತರ ಮೇಲೆ ದಾಳಿ ನಡೆಸುವುದು – ಹೀಗೆ ಒಂದೊಂದೇ ಕ್ಯಾತೆ ತೆಗೆದಿದ್ದಾರೆ.

ಇದರ ವಿರುದ್ಧ ಹೋರಾಡುವುದಕ್ಕೆ ಸಜ್ಜಾಗಿರುವ ರೈತರೂ ಕೂಡ ಹೆಚ್ಚುವರಿ ಜಮೀನು ಹೋರಾಟ ಸಮಿತಿ ಕಟ್ಟಿಕೊಂಡಿದ್ದಾರೆ. ಈ ಹೋರಾಟ ತೀವ್ರಗೊಳ್ಳುತ್ತಿದ್ದಂತೆಯೇ ರೈತ ನಾಯಕ ಗೋವಿಂದಪ್ಪ ಡೊಳ್ಳಿ ಎಂಬುವವರ ಮೇಲೆ ಹಲ್ಲೆಯನ್ನೂ ನಡೆಸಿದ್ದಾರೆ.

ಆದರೆ, ದುರಂತ ನೋಡಿ. ಸರ್ಕಾರದ ಸಂಬಳ ತಿನ್ನುತ್ತಿರುವ ಪೊಲೀಸರು ರೈತರ ಪಕ್ಷ ವಹಿಸುವುದನ್ನು ಬಿಟ್ಟು ವೆಸ್ಟ್ ಕೋಸ್ಟ್ ಕಂಪೆನಿಯ ಎಂಜಲಿನಾಸೆಗೆ ಬಿದ್ದು ಕಂಪೆನಿಯ ಪರವಹಿಸುತ್ತಿದ್ದಾರೆ.

ಸಾಸನೂರ್‌ಗೆ ಕೋಟಿ ರೂಪಾಯಿ!

ಕಂಪೆನಿಯ ಹಿತ ಕಾಯುವುದಕ್ಕೆ ಕೇವಲ ಪೊಲೀಸರು ಮಾತ್ರವಲ್ಲ, ಅಧಿಕಾರಿಗಳೂ ಸಜ್ಜಾಗಿ ನಿಂತಿದ್ದಾರೆ. ಬಗರ್ ಹುಕುಂ ಸಾಗುವಳಿ ಜಮೀನಿನ ವ್ಯಾಜ್ಯಗಳು ಭೂನ್ಯಾಯ ಮಂಡಳಿಯಲ್ಲಿ ವಿಚಾರಣಾ ಹಂತದಲ್ಲಿದ್ದರೂ, ಭೂಮಿಯ ಮಾಲಿಕ ಮತ್ತು ವೆಸ್ಟ್ ಕೋಸ್ಟ್ ಕಂಪೆನಿಯ ನಡುವಿನ ಗುತ್ತಿಗೆ ಒಪ್ಪಂದ ಎಂದೋ ಕೊನೆಗೊಂಡಿದ್ದರೂ ರೈತರ ಪರವಾಗಿ ಯಾವೊಬ್ಬ ಅಧಿಕಾರಿಯೂ ಮಾತನಾಡುತ್ತಿಲ್ಲ, ಹಿಂದೆ ಸಹಾಯಕ ಆಯುಕ್ತನಾಗಿರುವ ಮೋಹನ ಸಾಸನೂರ್ ಎಂಬ ನುಂಗಣ್ಣ ವೆಸ್ಟ್ ಕೋಸ್ಟ್ ಮಿಲ್ ಮಾಲೀಕರಿಂದ ಒಂದು ಕೋಟಿ ರೂಪಾಯಿ ಲಂಚ ನುಂಗಿ ಮಿಲ್ ಪರವಾಗಿ ನಿಂತಿದ್ದ.

ಆಗ 2007ರ ಜುಲೈ 23ರಂದು ಒಂದೇ ದಿನದಲ್ಲಿ 3936 ಎಕರೆ ಜಮೀನಿನಲ್ಲಿ 3892 ಎಕರೆ ಜಮೀನು ಕೃಷಿಗೆ ಯೋಗ್ಯವಲ್ಲ ಎಂದೂ, ಇದು ಬೆಟ್ಟ ಗುಡ್ಡಗಳಿಂದ

...ಸ್ಪಷ್ಟಪಡಿಸಿದ್ದಾರೆ. ಅದರಲ್ಲಿ ಗುರುಪಾದಪ್ಪನ ಪಾತ್ರದ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ಹಾಗಾಗಿ ಈ ಸಂಕಟದಿಂದ ಕಾನೂನಿನಿಂದ ಪಾರಾಗಲು ಗುರುಪಾದಪ್ಪ ಆಳುವ ಬಿಜೆಪಿ ಸರ್ಕಾರದೊಂದಿಗೆ ಸೇರಲು ಹೊರಟಿದ್ದಾನೆ.

ಬಿಜೆಪಿಗೇನಾದರೂ ಮಾನಮರ್ಯಾದೆ ಇದ್ದರೆ ಗುರುಪಾದಪ್ಪನನ್ನು ಪಾರ್ಟಿಗೆ ಸೇರಿಸಿಕೊಳ್ಳುವ ಬದಲಾಗಿ ಈ ಭ್ರಷ್ಟನ ವಿರುದ್ಧ ಕಾನೂನುಕ್ರಮ ಜರುಗಿಸಿ ತಾನು ನಿಜವಾಗಲೂ ರೈತ ಪರ ಎಂಬುದನ್ನು ಸಾಬೀತುಮಾಡಲಿ

■ ವರದಿಗಾರ

ವಿಮಾನದ ಖರ್ಚೇ 20 ಲಕ್ಷ

ಗುರುಪಾದಪ್ಪನ ರಾಜಕೀಯ ತೆವಲು ಎಷ್ಟಿದೆಯೆಂದರೆ ಕಳೆದ ನಾಲ್ಕಾರು ವರ್ಷದಲ್ಲಿ ತನ್ನ ವಿಮಾನದ ಓಡಾಟಕ್ಕೆ 20 ಲಕ್ಷಕ್ಕೂ ಜಾಸ್ತಿ ಹಣ ಖರ್ಚು ಮಾಡಿದ್ದಾನೆ.

ದುರಂತ ಏನೆಂದರೆ ಈ ಖರ್ಚನ್ನೆಲ್ಲ ಡಿಸಿಸಿ ಬ್ಯಾಂಕಿನ ತಲೆಗೆ ಕಟ್ಟಿರುವುದು!

ಬ್ಯಾಂಕಿನ ಕೋಟಿಗಟ್ಟಲೆ ರೂ. ದುರುಪಯೋಗ ಮಾಡಿಕೊಂಡಿದ್ದೇ ಅಲ್ಲದೇ ತನ್ನ ಖಾಸಗಿ ಕೆಲಸಕ್ಕೂ ವಿಮಾನದಲ್ಲಿ ಓಡಾಡಲು ಇವನಿಗೆ ಅಧಿಕಾರ ಕೊಟ್ಟವರ್‍ಯಾರು?

ಬ್ಯಾಂಕಿನ ಹಣವೆಂದರೆ ಅದು ರೈತರ, ಠೇವಣಿದಾರರ ಹಣ. ಕರ್ನಾಟಕದ ಬೇರೆ ಯಾವ ಡಿಸಿಸಿ ಬ್ಯಾಂಕ್ ಅಧ್ಯಕ್ಷನೂ ವಿಮಾನದಲ್ಲಿ ಓಡಾಡುವ ನಿದರ್ಶನ ಇಲ್ಲ. ಹಾಗಿರುವಾಗ ಗುರುಪಾದಪ್ಪನದೇನು ಸ್ಪೆಷಲ್?

ಈಗ ಅದರ ಬಗ್ಗೆಯೂ ತನಿಖೆಯಾಗಿದೆ. ಅವನ ವಿಮಾನ ಟಿಕೆಟ್ ಮಾಡಿಸಿಕೊಡುತ್ತಿದ್ದ ಬೆಂಗಳೂರಿನ ಪ್ಯಾಲೇಸ್ ರೋಡಿನಲ್ಲಿರುವ ಅರ್ಜುನ್ ಟೂರ್ಸ್ ಅಂಡ್ ಟ್ರಾವೆಲ್ಸ್ ಸಂಸ್ಥೆ 12-92 ಲಕ್ಷ ರೂಪಾಯಿಗಳನ್ನು ಬೀದರ್ ಡಿಸಿಸಿ ಬ್ಯಾಂಕ್‌ನಿಂದ ಪಡೆದುಕೊಂಡಿತ್ತು.

ಅದನ್ನೀಗ ವಾಪಸ್ ವಸೂಲಿ ಮಾಡಲಾಗಿದೆ.

ಅದೇ ರೀತಿ ಹೈದರಾಬಾದಿನ ನಾಥ ಟ್ರಾವೆಲ್ಸ್‌ನ ಖದೀಮರೂ ಲಪಟಾಯಿಸಿದ್ದ 1.10 ಲಕ್ಷ ರೂ.ಗಳನ್ನು ವಾಪಸ್ ವಸೂಲಿ ಮಾಡಲಾಗಿದೆ.

ಈ ಗುರುಪಾದಪ್ಪ ಎಂಥ ದರಿದ್ರ ಬುದ್ಧಿಯವನೆಂದರೆ, "ನನ್ನ ಫ್ಲೈಟ್ ಟಿಕೆಟ್‌ಗೆ ಡಿಸಿಸಿ ಬ್ಯಾಂಕ್‌ನಿಂದ ಇಷ್ಟು ಹಣ ಕೊಟ್ಟಿರುವುದು ನನಗೆ ಗೊತ್ತೇ ಇರಲಿಲ್ಲ" ಎಂದು ಈಗ ಹೇಳುತ್ತಿದ್ದಾನೆ. ■

...ಉಳಿದ ಅರಣ್ಯ ಭೂಮಿಯೆಂದೂ, ಇದು ಭೂಸುಧಾರಣಾ ಕಾಯಿದೆ ಕಲಂ 2(ಎ) 18ರ ಅಡಿಯಲ್ಲಿ ಬರುವುದಿಲ್ಲವೆಂದೂ ಸರ್ವೇ ಮಾಡಿ ವರದಿಕೊಟ್ಟು ಈ ಭೂಮಿಯನ್ನೇ ನಂಬಿ ಸಾಗುವಳಿ ಮಾಡುತ್ತಿರುವ ಐನೂರು ...ನ ಬಗರ್‌ಹುಕುಂ ರೈತರಿಗೆ ನಾಮ ಇಟ್ಟಿದ್ದ.

ಇದನ್ನು ಕಂಡು ಗಾಬರಿಯಾದ ರೈತರು ಅಂದಿನ ಜಿಲ್ಲಾಧಿಕಾರಿ ಎಂ.ಎಸ್.ಶ್ರೀಕರ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದರು. ಆಗ ಜಿಲ್ಲಾಧಿಕಾರಿಗಳು ಇದಕ್ಕೆ ಸಂಬಂಧಿಸಿದ ಎಲ್ಲಾ ಫೈಲುಗಳನ್ನು ತರಿಸಿಕೊಂಡು, ಭೂನ್ಯಾಯ ಮಂಡಳಿಯಲ್ಲಿದ್ದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ ಸಾಸನೂರ್ ಮಾಡಿದ್ದ ದಗಲ್ಬಾಜಿತನ ಬೆಳಕಿಗೆ ಬಂದಿತ್ತು.

ಮೋಹನ ಸಾಸನೂರ್ ನಡೆಸಿದ ಈ ಕೇಸಿನ ವಿರುದ್ಧ ...9.2007ರಲ್ಲಿ ಹೈಕೋರ್ಟಿನಲ್ಲಿ ಮೇಲ್ಮನವಿ ಕೂಡ ಸಲ್ಲಿಸಲು ಆದೇಶಿಸಲಾಯಿತು. ರಾಜ್ಯ ಅಡ್ವೋಕೇಟ್ ಜನರಲ್ ಮತ್ತು ರಾಜ್ಯ ಸರ್ಕಾರದ ವಕೀಲ ಹನುಮಂತರಾಯಪ್ಪ ಅವರು ಧಾರವಾಡ ತಹಶೀಲ್ದಾರರಿಂದ ...ಮು ಬಾರಿ ದಾಖಲೆ ತರಿಸಿಕೊಂಡು ಮೇಲ್ಮನವಿ ಸಲ್ಲಿಸಲು ...ರಿಸಿದರು. ಆದರೆ ಅಷ್ಟು ಹೊತ್ತಿಗೆ ರಾಜ್ಯ ಸರ್ಕಾರವೇ ...ಮ್ಮ ಹೋಯಿತು. ಭೂನ್ಯಾಯ ಮಂಡಳಿಯ ಛೇರ್ಮನ್ ...ಗಿರುವ ಸಹಾಯಕ ಆಯುಕ್ತರು ಭೂಸುಧಾರಣಾ ಕಾಯಿದೆ ಕಲಂ 122/ಎ ಪ್ರಕಾರ ಪ್ರಕರಣದ ಮರುವಿಚಾರಣೆ ನಡೆಸಬಹುದಾಗಿದೆ.

ಇಲ್ಲಿಯವರೆಗೆ ಮೇಲ್ಮನವಿ ಸಲ್ಲಿಸಿಲ್ಲ, ಕಾನೂನಿನಲ್ಲಿರುವ ಅವಕಾಶ ಬಳಸಿಕೊಂಡು ಯಡ್ಡಿ ಸರ್ಕಾರ ರೈತರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ವಿಚಾರಣೆ ನಡೆಸಲು ಮುಂದಾಗುತ್ತದೆಯೋ ಎಂಬುದನ್ನು ಕಾದು ನೋಡಬೇಕಷ್ಟೆ. ಆದರೆ, ಭೂಮಿಯನ್ನೇ ನಂಬಿರುವ ರೈತರು ...ತ್ತ ಪ್ರಾಣ ಕೊಟ್ಟರೂ ಭೂಮಿ ಬಿಡುವುದಿಲ್ಲ ಎಂದು ...ಟೊಟ್ಟು ಹೋರಾಟಕ್ಕಿಳಿದಿದ್ದಾರೆ. ಅವರ ಕೂಗಿಗೆ ...ರ ಕಿವಿಗೊಡದಿದ್ದರೆ ಮುಂದಾಗುವ ಅನಾಹುತಗಳಿಗೆ ...ಡ್ಡಿಯೇ ನೇರ ಹೊಣೆಗಾರರಾಗುತ್ತಾರಷ್ಟೆ.

■ ಹುಬ್ಬಳ್ಳಿ ನಾಂವ

ಯಡ್ಡಿ ನೂರು ದಿನಕ್ಕೆ ವಕೀಲರ ವಕಾಲತ್ತು

ಥೂತ್ತೇರಿ

ಯಾಹೂ

ಕೇವಲ ಒಂದೇ ವಾರ ಮುಖ್ಯಮಂತ್ರಿಯಾಗಿದ್ದ ಎಡೂರಪ್ಪನವರು ಮತ್ತೆ ಚುನಾವಣೆಯಲ್ಲಿ ಗೆದ್ದುಬಂದು ಮುಖ್ಯಮಂತ್ರಿಯಾದರೂ, ಮತ್ತದೇ ಒಂದು ವಾರಕ್ಕೇ ಗೋತಾ ಹೊಡೆಯುವಂತೆ ಕಂಡರೂ, ನೂರುದಿನ ತುಂಬಿಸಿದ ವಿಸ್ಮಯಕರ ಘಟನೆ ಕಂಡು ಎಡೂರಪ್ಪನ ಪಟಾಲಂಗಿರಲಿ, ಬೆಂಗಳೂರಿನ ಕುಖ್ಯಾತ ವಕೀಲರುಗಳಿಗೆ ರೋಮಾಂಚನವಾಗಿದೆಯಂತಲ್ಲಾ. ಈ ಪೈಕಿ ಹಲವು ವಕೀಲರು ಮುಖ್ಯಮಂತ್ರಿಗೆ ಬರೆದ ಪತ್ರಗಳು ಜೆಡಿಸ್ ವಕೀಲರ ಮುಖಾಂತರ ನಮಗೂ ತಲುಪಿ, ಸದರಿ ಪ್ರೇಮಪತ್ರಗಳನ್ನು ನಮ್ಮ ಓದುಗರಿಗೂ ತೋರಿಸುವುದು ನಮ್ಮ ಕರ್ತವ್ಯವಲ್ಲವೆ? ಈ ಪೈಕಿ ಕೆಲವೇ ಕೆಲವು ಪತ್ರಗಳನ್ನು ನೀವು ಓದಲೇಬೇಕೆಂದು ಇಲ್ಲಿ ನೀಡಿದ್ದೇವೆ.

ಮಾನ್ಯ ಜನಪ್ರಿಯ ಮುಖ್ಯಮಂತ್ರಿಗಳೆ,

ತಾವು ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದ ದಿನದಿಂದ, ಮೊನ್ನೆ ತುಂಬಿದ ನೂರು ದಿನಗಳವರೆಗೂ ನಾನು ನನ್ನ ವಕೀಲಿಗಿರಿಯನ್ನೆ ಮರೆತು ತಮ್ಮ ಆಡಳಿತವನ್ನೆ ಅವಲೋಕಿಸಿದ್ದೇನೆ. ತಮ್ಮದು ನಾವು ಹಿಂದೆಂದೂ ಕಂಡಿರದ ಆಡಳಿತ. ನಮ್ಮ ಹಿಂದೂ ಧರ್ಮದ ಸಂಖ್ಯಾಶಾಸ್ತ್ರದಲ್ಲಿ ನೂರಕ್ಕೆ ನೂರರಷ್ಟು ಮಹತ್ವವಿದೆ. ನಮ್ಮ ಪುರೋಹಿತರು ನೂರು ವರ್ಷ ಬಾಳಿ ಎಂದು ಆಶೀರ್ವದಿಸುತ್ತಾರೆ. ಒಂದು ಸಿನಿಮಾ ನೂರು ದಿನ ಓಡಿದರೆ ಅದನ್ನು ಬಾಕ್ಸ್ ಆಫೀಸ್ ಹಿಟ್ ಎಂದು ಪರಿಗಣಿಸುತ್ತಾರೆ.


ತಮ್ಮ ನೂರುದಿನದ ಆಡಳಿತವೂ ಕೂಡ ಬಿಜೆಪಿ ಬಾಕ್ಸ್ ತುಂಬಿದ ಆಡಳಿತ ಎಂದು ನಾನು ಪರಿಗಣಿಸುತ್ತೇನೆ. ಈ ವ್ಯಾಖ್ಯಾನವನ್ನು ತಪ್ಪಾಗಿ ಗ್ರಹಿಸಬೇಡಿ. ನಿಜಕ್ಕೂ ನಿಮ್ಮದು ನೂರುದಿನದ ಬಾಕ್ಸ್ ಆಫೀಸ್ ಹಿಟ್ ಆಡಳಿತ. ತಮ್ಮ ಎದುರು ಇನ್ನು 1725 ದಿನಗಳಿವೆ. ಅಷ್ಟರಲ್ಲಿ ತಮ್ಮೆಲ್ಲರ ಬಾಕ್ಸ್‌ಗಳು ತುಂಬಿ ಕರ್ನಾಟಕದ ಖಜಾನೆ ಮಾತ್ರ ಖಾಲಿಯಾಗಿರುತ್ತದೆಂದು ನಿಮ್ಮ ವಿರೋಧಿಗಳು ಆಡಿಕೊಳ್ಳಬಹುದು. ತಾವು ಅದಕ್ಕೆ ಕಿವಿಗೊಡಬೇಡಿ. ನಿಮ್ಮ ಪರ ವಕಾಲತ್ತಿಗೆ ನಾವು ಸದಾ ರೆಡಿಯಿರುತ್ತೇವೆ.

ಇತಿ,

ಕ್ಯಾತ ವಕೀಲ

ಕೆ.ಡಿ. ಸೆಲ್ವಪಿಳ್ಳೈ

ಅಯ್ಯಂಗಾರ್



ಪತ್ರ 2

ಅಪರೂಪದ ಮುಖ್ಯಮಂತ್ರಿಗಳಾದ ಎಡೂರಪ್ಪನವರೆ,

ನಾನೊಬ್ಬ ವಕೀಲನಾಗಿ ಹಾಗೇ ನಿಮ್ಮ ಆಡಳಿತವನ್ನು ಅವಲೋಕಿಸುತ್ತ ಬಂದೆ. ಈ ಹಿಂದೆಯೂ ನಾನು ಹಲವಾರು ಮುಖ್ಯಮಂತ್ರಿಗಳ ಆಡಳಿತವನ್ನು ನೋಡಿದ್ದೇನೆ. ಆದರೆ ನಿಮ್ಮ ಆಡಳಿತ ವರ್ಣಿಸಲು ನನ್ನ ವಕೀಲಿ ನಿಘಂಟಿನಲ್ಲೂ ಪದಗಳಿಲ್ಲ. ಮಂಡ್ಯ ಜಿಲ್ಲೆ ಬೂಕನಕೆರೆಯಿಂದ ಹೊರಟ ನಿಮ್ಮ ಪ್ರತಿಹೆಜ್ಜೆಗಳೂ ಶಿಕಾರಿಪುರದ ಶಿಖರ ತಲುಪಿ, ಅಲ್ಲಿಂದ ಬೆಂಗಳೂರು ಕಡೆ ಹೊರಟ ಹೆಜ್ಜೆ ಹಿಮಾಲಯದಂತಹ ವಿಧಾನಸೌಧದ ಮೂರನೆ ಮಹಡಿ ತಲುಪಿದವಲ್ಲಾ, ಆ ಸಾಹಸ ಹಿಲೇರಿ ಮತ್ತು ತೇನಸಿಂಗ್‌ನನ್ನು ನೆನಪಿಸುತ್ತದೆ. ನಿಮ್ಮ ಸಾಹಸದ ಎದುರು ಆ ಬಂಗಾರಿ, ಪಟೇಲ, ಹೆಗಡೆ, ಅರಸುಗಳನ್ನು ನಿವಾಳಿಸಿ ಎಸೆಯಬೇಕು ಅನ್ನಿಸುತ್ತದೆ. ವಾಮನಮೂರ್ತಿಯಾಗಿ ಕಂಡ ನೀವು ಇಂದು ಯಮನಮೂರ್ತಿಯಾಗಿ ಬೆಳೆದಿದ್ದೀರಿ. ಈ ಬೆಳವಣಿಗೆಗೆ ಶಿಕಾರಿಪುರದ ಮಾವನಮನೆ ಗೊಬ್ಬರವಾದರೆ, ಅಲ್ಲಿನ ಮುನ್ಸಿಪಾಲಿಟಿಯ ನೀರೇ ಕಾರಣ. ನೋಡಿದ ಕೂಡಲೇ ಜಮದಗ್ನಿಯಂತೆ ಕಾಣುವ ನಿಮ್ಮ ಹೃದಯದಲ್ಲಿ ಮಾನವೀಯತೆ, ಕರುಣೆ, ದಯೆ, ವಾತ್ಸಲ್ಯ, ಪ್ರೀತಿ, ಅನುಕಂಪ ಇವೆಲ್ಲವೂ ಬಳ್ಳಾರಿ ಗುಡ್ಡಗಳಲ್ಲಿ ಅಡಗಿರುವ ಗಣಿಯಂತೆ ತುಂಬಿ ತುಳುಕುತ್ತಿದೆ. ಸಮಯ ಬಂದಾಗ ನಿಮ್ಮನ್ನ ಕಾಣುತ್ತೇನೆ.

ಸದಾ ನಿಮ್ಮ ಧ್ಯಾನದಲ್ಲಿರುವ,

ವಿಶ್ರಾಂತ ವಕೀಲ

ವಿಶ್ವೇಶ್ವರ ಮೂರ್ತಿ

ಪತ್ರ 3

ಕರುಣಾಮೂರ್ತಿಗಳಾದ ಮುಖ್ಯಮಂತ್ರಿಗಳೆ,

ನನ್ನ ನೆನಪಿರಬೇಕು ನಿಮಗೆ. ಇಲ್ಲದಿದ್ದರೆ ಜ್ಞಾಪಿಸುತ್ತೇನೆ. ಹಲವು ವರ್ಷಗಳ ಹಿಂದೆ ಕೈಯಲ್ಲೊಂದು ಸೂಟ್‌ಕೇಸ್ ಹಿಡಿದು ಬೆಂಗಳೂರಿನ ಬಸ್ಟಾಂಡ್ ಬಳಿ ಆಟೋ ಹತ್ತಿದಿರಿ. ನಾನೂ ಹತ್ತಿದೆ. ನೀವು ಟೂರಿಸ್ಟ್ ಲಾಡ್ಜ್ ಬಳಿ ಇಳಿದಿರಿ. ನಾನು ಕೋರ್ಟ್ ಬಳಿ ಇಳಿಯಬೇಕಿತ್ತು, ನಿಮ್ಮ ಬಳಿ ಚಿಲ್ಲರೆ ಇಲ್ಲದ ಕಾರಣ ನಿಮ್ಮ ರಿಕ್ಷಾಚಾರ್ಜನ್ನು ನಾನೇ ಕೊಟ್ಟೆ. ಆಗ ನಿಜಕ್ಕೂ ನೀವು ತೊಂದರೆಯಲ್ಲಿದ್ದಿರಿ. ಮಹಾಲಿಂಗಪ್ಪ ಎಂಬ ಅನಾಮಧೇಯ ನಿಮ್ಮನ್ನು ಸೋಲಿಸಿದ್ದ.

ಇರಲಿ, ಈಗ ಅದಲ್ಲ ವಿಷಯ. ತಾವು ಅಧಿಕಾರಕ್ಕೆ ಬಂದ ನಂತರ ಸರ್ಕಾರವನ್ನು ಮುಕ್ಕಲು ತಯಾರಾಗಿದ್ದ ಲಿಂಗಾಯತರಿಗೆ ಎಲ್ಲಿ ಮಹತ್ವ ಕೊಡುತ್ತೀರೋ, ಎಂದು ಹೆದರಿದವರಲ್ಲಿ ನಾನೂ ಒಬ್ಬ. ಆದರೆ ವಿಶ್ವಮಾನವರಾದ ತಾವು ಹಾಗೆ ಮಾಡಲಿಲ್ಲ. ಬದಲಿಗೆ ವಿಶ್ವದ ಯೋಗಕ್ಷೇಮ ಬಯಸುವ ವಿಪ್ರರಿಗೆ ಪ್ರಿಯವಾಗುವಂತೆ ಆಡಳಿತ ನಡೆಸುತ್ತಿದ್ದೀರಿ. ಗೃಹ ಖಾತೆಯನ್ನು ನಮ್ಮವರಿಗೇ ಕೊಟ್ಟು ನಮ್ಮ ಆರೆಸೆಸ್ ಹುಡುಗರ ಮೇಲೆ ಯಾವ ಕೇಸೂ ಬೀಳದಂತೆ ನೋಡಿಕೊಂಡಿದ್ದೀರಿ. ಎಷ್ಟೇ ಆಗಲಿ ತಾವೂ ಆರೆಸೆಸ್ಸಿನಿಂದ ಬಂದವರಲ್ಲವೆ. ಅದರ ಋಣ ತೀರಿಸಲೇಬೇಕಿದೆ. ತಮ್ಮ ಆಡಳಿತದ ದೆಸೆಯಿಂದ ನಮ್ಮ ಮಠಗಳು, ನಮ್ಮ ಸಂಘಗಳು ಅಭಿವೃದ್ಧಿಯಾಗುತ್ತಿವೆ. ನಮಗೆ ನಿಮ್ಮಿಂದ ಇನ್ನೇನೂ ಬೇಡಿ. ಇಷ್ಟು ಸಾಕು.

ಇತಿ ನಿಮ್ಮ ರಿಕ್ಷಾಸಹಪ್ರಯಾಣಿಕ ವಕೀಲ,

ಆನಂದರಾಮಾ ಶಾಸ್ತ್ರಿ

ಪತ್ರ 4

ಪ್ರೀತಿಯ ಎಡೂರಪ್ಪನವರೆ,

ನಿಮ್ಮ ನೂರು ದಿನ ನೂರು ವಿಧದ ಸಾಧನೆಗೈದಿವೆ. ವಿತ್ತ ಇಲಾಖೆ ಹೊಣೆಗಾರಿಕೆ ಹೊತ್ತಿರುವ ನೀವು ನಿಜಕ್ಕೂ ಕರ್ನಾಟಕದ ಕನಸುಗಾರ. ನಿಮ್ಮಂಥ ವಿತ್ತ ಸಚಿವ ಇಲ್ಲಿಯವರೆಗೂ ಬಂದಿರಲಿಲ್ಲ. ನಾನೂ ಎಕನಾಮಿಕ್ಸ್ ಎಂ.ಎ. ಮಾಡಿದ್ದರೂ ಕಡೆಗೆ ಎಲ್‌ಎಲ್‌ಬಿ ಮಾಡಿ ವಕೀಲನಾದೆ. ಆದರೂ ನಿಮ್ಮ ಅರ್ಥ ಖಾತೆ ಜ್ಞಾನದ ಬಗ್ಗೆ ಆಚ್ಚರಿಯಾಗಿದೆ. 58 ವರ್ಷಕ್ಕೆ ನಿವೃತ್ತರಾಗುವ ಸರ್ಕಾರಿ ಕರ್ಮಚಾರಿಗಳ ವಯಸ್ಸು 60 ವರ್ಷ ಮಾಡಿದಿರಿ. ನಿವೃತ್ತರಲ್ಲಿ ನಮ್ಮವರೇ ಜಾಸ್ತಿ ಜನಗಳಿದ್ದರು. ಅವರಿಗೆ ಎರಡು ವರ್ಷ ಜಾಸ್ತಿ ಮಾಡಿದ್ದಕ್ಕೆ ಎರಡು ನಮಸ್ಕಾರಗಳು. ನಿಮ್ಮ ಅಪರೂಪದ ಯೋಜನೆಗಳೆಲ್ಲಾ ಜಾರಿಯಾಗಿವೆ. ಎಲ್ಲಿ ನೋಡಿದರೂ ಅಭಿವೃದ್ಧಿಕಾರ್ಯಗಳು ನಡೆಯುತ್ತಿವೆ. ರೈತರು ಗೊಬ್ಬರ ತೆಗೆದುಕೊಂಡು ಹೋಗಲಾರದೆ ರಸ್ತೆ ಬದಿಯಲ್ಲೇ ಎಸೆದು ಹೋಗುತ್ತಿದ್ದಾರೆ. ಹಳ್ಳಿ ಮಕ್ಕಳು ಸೈಕಲ್ ಹೊಡೆಯುತ್ತಿವೆ. ಹಳ್ಳಿಯ ಯುವ ಜನಾಂಗ ಜಿಂ ಮಾಡುತ್ತಿದೆ. ಯಶಸ್ವಿನಿ, ಸಂಜೀವಿನಿ, ಭಾಗ್ಯಲಕ್ಷ್ಮಿ ಕಾರ್ಯಕ್ರಮಗಳು ಭರದಿಂದ ಸಾಗಿವೆ. ಇದೆಲ್ಲವನ್ನು ನೋಡಿದರೆ, ಸುಳ್ಳು ವಕಾಲತ್ತಿನ ಈ ವಕೀಲಿಗಿರಿಯನ್ನು ಬಿಟ್ಟು ಯಾವುದಾದರೂ ಕ್ಷೇತ್ರದ ಶಾಸಕನಾಗಿ ನಿಮ್ಮ ಜೊತೆ ಬಂದು ಸೇರಿಕೊಳ್ಳಬೇಕೆನ್ನಿಸುತ್ತಿದೆ. ಆದರೇನು ನನಗೆ ಕ್ಷೇತ್ರವಿಲ್ಲ. ತಾವು ಮನಸ್ಸು ಮಾಡಿದರೆ ಈಗ ತೆರವಾದ ಯಾವುದಾದರೂ ಕ್ಷೇತ್ರದಲ್ಲಿ ನನ್ನನ್ನು ನಾಟಿ ಹಾಕಿ ಬೆಳೆಸಬಹುದು. ಆಗ ನಾನು ನಿಮ್ಮ ಪರ ಇನ್ನೂ ಚೆನ್ನಾಗಿ ವಕಾಲತ್ತು ವಹಿಸಿ ನಿಮ್ಮ ವಿರೋಧಿಗಳ ಬಾಯಿಮುಚ್ಚಿಸಬಲ್ಲೆ.

ಇತಿ

ಪ್ರಖ್ಯಾತ ವಕೀಲ,


ಟಿ.ಕೆ. ಪ್ರಭಾಕರ ಜೋಶಿ

ಥೂತ್ತೇರಿ!!! ■



ಯಡ್ಡಿ ಮಗನ ವಸೂಲಿ ರಾಕೆಟ್

ಇಂದು ರಾಜ್ಯದಲ್ಲಿ ನಡೆಯುತ್ತಿರುವ ಅಷ್ಟೂ ಟ್ರಾನ್ಸ್‌ಫರ್ ದಂಧೆಯ ರೂವಾರಿಯಂತಿರುವುದು ಮುಖ್ಯಮಂತ್ರಿಯ ದ್ವಿತೀಯ ಪುತ್ರ ವಿಜಯೇಂದ್ರ. ಜೊತೆಗೆ ಯಡ್ಡಿಯ ಇಡೀ ಸಂತತಿಯೇ ಇಂದು ಟ್ರಾನ್ಸ್‌ಫರ್ ಖಮಾಯಿಗೆ ನಿಂತುಬಿಟ್ಟಿದೆ. ಮೂರೇ ತಿಂಗಳಲ್ಲಿ ಸಾವಿರಕ್ಕೂ ಅಧಿಕ ವರ್ಗಾವರ್ಗಿಯಲ್ಲಿ ಐನೂರು ಕೋಟಿ ದೋಚಿದ ಮುಖ್ಯಮಂತ್ರಿಯನ್ನು ಪಡೆದ ಕನ್ನಡ ತಾಯಿಯ ದೌರ್ಭಾಗ್ಯಕ್ಕೆ ಏನೆನ್ನಬೇಕು?



ವಿಜಯೇಂದ್ರ

ರಾ. ಸೋಮನಾಥ್

* ಪೊಲೀಸ್ ಇನ್ಸ್‌ಪೆಕ್ಟರ್ ಜಾಗಕ್ಕೆ ಕನಿಷ್ಠ ಐದರಿಂದ ಹತ್ತು ಲಕ್ಷ!
* ತಹಶೀಲ್ದಾರ್ ವರ್ಗಕ್ಕೆ ಹತ್ತು ಲಕ್ಷದಿಂದ ಎರಡು ಕೋಟಿ
* ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್ ಓರ್ವನ ವರ್ಗಾವಣೆಗೆ ಕನಿಷ್ಠ ಹತ್ತರಿಂದ 25 ಲಕ್ಷ!
* ಅರಣ್ಯ ಇಲಾಖೆಯ ಡಿಎಫ್‌ಓ ಹುದ್ದೆಗೆ ಲಕ್ಷದಿಂದ ಒಂದು ಕೋಟಿ!
* ಸಬ್‌ರಿಜಿಸ್ಟ್ರಾರ್ ಜಾಗಕ್ಕೆ 25 ಲಕ್ಷದಿಂದ 50 ಲಕ್ಷ!
* ಬೆಂಗಳೂರು ನಗರ ಜಿಲ್ಲೆಯ ವಿಶೇಷ ಡಿಸಿ ಗಾದಿಗೆ ಕನಿಷ್ಠ 8 ಕೋಟಿ!

ಇದು ಬಿಜೆಪಿ ಸರ್ಕಾರದ ವರ್ಗಾವಣೆ ದಂಧೆಯ ಲೇಟೆಸ್ಟ್ ದರಪಟ್ಟಿ. ಐವತ್ತೆಂಟು ಮಂದಿ ಐಎಎಸ್ ಅಧಿಕಾರಿಗಳನ್ನು, 83 ಮಂದಿ ಕೆಎಎಸ್ ಅಧಿಕಾರಿಗಳನ್ನು, 45 ಮಂದಿ ಸೀನಿಯರ್ ಕೆಎಎಸ್ ಅಧಿಕಾರಿಗಳನ್ನು, 18 ಮಂದಿ ಹಿರಿಯ ಅರಣ್ಯಾಧಿಕಾರಿಗಳನ್ನು, 416 ಮಂದಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು, 128 ಡಿವೈಎಸ್ಪಿಗಳನ್ನು, 171 ಮಂದಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳನ್ನು ಮತ್ತು ತೆರಿಗೆ ಇಲಾಖೆಯ ಒಟ್ಟು 165 ಮಂದಿ ಅಧಿಕಾರಿಗಳನ್ನು ಕೇವಲ ಮೂರೇ ತಿಂಗಳಲ್ಲಿ ಎತ್ತಂಗಡಿ ಮಾಡಿ ಕರ್ನಾಟಕದ ಇತಿಹಾಸದಲ್ಲಿ ಸಾರ್ವಕಾಲಿಕ ದಾಖಲೆ ಸ್ಥಾಪಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ವಿರಚಿತ ಸದರಿ ವರ್ಗಾವರ್ಗಿಯ ಮಾನದಂಡ ಏನು ಗೊತ್ತೇ?

ನಿಗದಿತ ಮೊತ್ತದ ದುಡ್ಡು ಬರಲೇಬೇಕು. ನಯಾಪೈಸೆ ಕೂಡ ಕಮ್ಮಿಯಿರಕೂಡದು. ಹಾಗೊಂದು ವೇಳೆ ನಿರ್ಧಾರಿತ ಮೊತ್ತಕ್ಕಿಂತ ಯಾರಾದರೂ ಹೆಚ್ಚಿಗೆ ಕೊಡಬಂದರೆ ಹೆಚ್ಚಿಗೆ ತೆತ್ತವನಿಗೆ ಆ ಹುದ್ದೆ ಮೀಸಲಾಗಿರತಕ್ಕದ್ದು ಮತ್ತು ಆತ ಲಿಂಗವಂತನಾಗಿದ್ದರೆ ಚೂರುಪಾರು ವಿನಾಯತಿ ಕೊಡಬಹುದು. ಇದು ಮುಖ್ಯಮಂತ್ರಿ ಯಡಿಯೂರಪ್ಪ ವರ್ಗಾವರ್ಗಿ ದಂಧೆಗೆ ಸಂಬಂಧಪಟ್ಟಂತೆ ಅಮೆರಿಕದ ವಿಮಾನ ಹತ್ತುವುದಕ್ಕೂ ಮುನ್ನ ಹೊರಡಿಸಿದ ಫರ್ಮಾನು!

ಒಂದು ಸರ್ಕಾರದಲ್ಲಿ ಇಂತಿಷ್ಟೇ ರೊಕ್ಕಕ್ಕೆ ಇಂಥದ್ದೆ ಪೊಲೀಸ್ ಠಾಣೆಯೊಂದನ್ನು ಇನ್ಸ್‌ಪೆಕ್ಟರ್ ಒಬ್ಬ ಖರೀದಿಸಬಹುದಾದರೆ, ಸಂಡೂರು, ಹೊಸಪೇಟೆ, ಬಳ್ಳಾರಿ ಭಾಗದ ಗಣಿ ಸಾಮ್ರಾಜ್ಯದ ಅರಣ್ಯಕ್ಕೆ ದುಡ್ಡು ತೆತ್ತು ಡಿಎಫ್‌ಓ ಓರ್ವ ವಕ್ಕರಿಸಬಹುದಾದರೆ, ತಹಶೀಲ್ದಾರ್ ಒಬ್ಬ ದುಡ್ಡಿಗೆ ಬೆಂಗಳೂರು ನಗರದಂಥ ಅತೀ ಸೂಕ್ಷ್ಮ ಸ್ಥಾನವನ್ನು ಪರ್ಚಾಜಿನಲ್ಲಿ ದಕ್ಕಿಸಿಕೊಳ್ಳಬಹುದಾದರೆ , ಬಿಡಿಎ-ಕೆಐಎಡಿಬಿಯಂಥ ನಿರಂಕುಶ ರಿಯಲ್ ಎಸ್ಟೇಟ್ ಹುದ್ದೆಗಳಿಗೆ ಬೆಲೆ ತೆತ್ತ ಯಾರು ಬೇಕಾದರೂ ಬರಬಹುದಾದರೆ; ಯಾರಾದರೂ ಅದನ್ನು ಸರ್ಕಾರ ಅನ್ನುತ್ತಾರಾ? ಯಾವ ನ್ಯಾಯ ಸಿಗುತ್ತದೆಯೆಂದು ಪೊಲೀಸ್‌ಠಾಣೆಗೆ ಹೋಗಿ ದೂರುಕೊಡಬೇಕು? ಲಂಚ ಕೊಟ್ಟು ಪೊಲೀಸ್ ಠಾಣೆಗೆ ಬಂದ ಇನ್ಸ್‌ಪೆಕ್ಟರ್ ಒಬ್ಬ ಯಾವ ರೇಟಿಗೆ ನ್ಯಾಯ ಕೊಡಬೇಕು? ಅರಣ್ಯಾಧಿಕಾರಿಯೊಬ್ಬ ಕೊಟ್ಟ ಲಂಚದ ಬರಕತ್ತಿಗೆ ಎಷ್ಟೆಲ್ಲಾ ಅಕ್ರಮ ಗಣಿಗಳನ್ನು ಪೊರೆಯಬೇಕು? ರೊಕ್ಕ ತೆತ್ತು ಬಂದ ಸಬ್‌ರಿಜಿಸ್ಟ್ರಾರ್, ತಹಶೀಲ್ದಾರ್, ಬಿಡಿಎ ಅಧಿಕಾರಿಗಳು, ಕೆಐಎಡಿಬಿಯ ಖದೀಮರಿಂದ ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಭೂಮಿ, ಸ್ಮಶಾನದ ಭೂಮಿ, ಪಾಲಿಕೆ ಆಸ್ತಿ, ಪಾರ್ಕು, ಆಟದ ಮೈದಾನಗಳನ್ನು ಯಾರು ಕಾಪಾಡಬೇಕು?

500 ಕೋಟಿಯ ಟ್ರಾನ್ಸ್‌ಫರ್ ಕಮಾಯಿ

ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ ಖರ್ಗೆಯ ಅಳಿಯ ಪೊಲೀಸ್ ಠಾಣೆಗಳನ್ನು ಮಾರಿಕೊಂಡಿದ್ದ. ನಂತರ ಧರ್ಮಸಿಂಗ್ ಛೇಲಾ ಸ್ವಾಮಿಯೇ ನೋಟಿನ ಕಂತೆ ಎಣಿಸಿ ಠಾಣೆಗಳನ್ನು ಹರಾಜು ಕೂಗಿದ್ದ. ಇದ್ದುದರಲ್ಲಿ ಕುಮಾರಸ್ವಾಮಿ ಕಾಲದಲ್ಲಿ ಶಾಸಕರ ರೆಕಮಂಡು, ಸ್ವಾಮಿಗಳ ಶಿಫಾರಸ್ಸು ಮತ್ತು ಜಾತಿಪ್ರೇಮದ ಮುಲಾಜಿಗೆ ಬಿದ್ದು ಲಂಚವಿಲ್ಲದೇ ಪೊಲೀಸ್ ಟ್ರಾನ್ಸ್‌ಫರ್ ನಡೆದದ್ದು ಬಿಟ್ಟರೆ ಬಿಜೆಪಿಯ ರಾಮರಾಜ್ಯ ಕಲ್ಯಾಣ ಕರ್ನಾಟಕ ಕೂಡ ಇಂಥ ಹಗಲುದರೋಡೆಯಿಂದ ಹೊರತಾಗಲೇ ಇಲ್ಲ. ಸೋಕಾಲ್ಡ್ ಆರೆಸ್ಸೆಸ್‌ನ ಆದರ್ಶ ಕೂಡ ಎಂಥಾ ಲೊಳಲೊಟ್ಟೆ ಎಂಬಂತೆ ಬಿಜೆಪಿಯ ಪಕ್ಷನಿಷ್ಠ ಶಾಸಕರು ಕೊಟ್ಟ ಶಿಫಾರಸ್ಸು ಪತ್ರಗಳನ್ನೂ ಯಡ್ಡಿ ಪಟಾಲಂ ಲೆಕ್ಕಕ್ಕಿಡಲಿಲ್ಲ. ಮುಖ್ಯಮಂತ್ರಿಯ ದ್ವಿತೀಯ ಪುತ್ರ ವಿಜಯೇಂದ್ರನೇ ಇಡೀ ಟ್ರಾನ್ಸ್‌ಫರ್ ದಂಧೆಯ ರೂವಾರಿ. ಹಾಗಂತ ಅವನೊಬ್ಬನೇ ಅಷ್ಟೂ ಟ್ರಾನ್ಸ್‌ಫರ್ ಆಮದನಿಯನ್ನು ಸಂಬಾಳಿಸುವಷ್ಟು ಶಕ್ತನಲ್ಲವಲ್ಲ; ಅದಕ್ಕೆ ಯಡ್ಡಿ ಅಳಿಯ ರಾಜೇಶ, ಮಹೇಂದ್ರ, ಕೊನೇ ಮಗಳು ಉಮಾದೇವಿ, ಛೇಲಾ ಸಿದ್ಧಲಿಂಗಸ್ವಾಮಿ, ಕುಲಪುತ್ರ ರಾಘವೇಂದ್ರ, ಶೋಭಾ ಕರಂದ್ಲಾಜೆ, ಡೆಪ್ಯೂಟಿ ಸೆಕ್ರೆಟರಿ ನಂದಕುಮಾರ್- ಹೀಗೆ ಯಡ್ಡಿಯ ಇಡೀ ಸಂತತಿಯೇ ಟ್ರಾನ್ಸ್‌ಫರ್ ಖಮಾಯಿಗೆ ನಿಂತುಬಿಟ್ಟಿದೆ.

ಸದ್ಯ ರೇಸ್‌ಕೋರ್ಸ್ ಎದುರಿನ ಯಡ್ಡಿ ಗೃಹ ಕಚೇರಿಯಲ್ಲಿ ಅದೆಂಥಾ ಜಾತ್ರೆಯೆಂದರೆ ದಿನದ ಯಾವ ಗಳಿಗೆಯಲ್ಲೂ ಅಲ್ಲಿ ಟ್ರಾನ್ಸ್‌ಫರ್ ಬ್ರೋಕರ್‌ಗಳ ದೊಡ್ಡ ಹಿಂಡೇ ಜಮೆಯಾಗಿರುತ್ತದೆ. ವಿಧಾನಸೌಧದ ಮಗ್ಗುಲಿಗೇ ಇರುವ ಪೊಲೀಸ್ ಠಾಣೆಯೊಂದರ ಇನ್ಸ್‌ಪೆಕ್ಟರ್ ವಿಜಯೇಂದ್ರನ ಟ್ರಾನ್ಸ್‌ಫರ್ ದಂಧೆಯ ಪ್ರಮುಖ ಏಜೆಂಟ್. ತೀರ ಇತ್ತೀಚೆಗೆ ಹಿರಿಯ ಐಪಿಎಸ್ ಅಧಿಕಾರಿಯೊಬ್ಬರು ತನ್ನ ಎತ್ತಂಗಡಿಯ ವಿರುದ್ಧ ಈತನ ಮುಂದೆ ಕೈಕಟ್ಟಿ ನಿಂತು ನಿಲ್ಲುತ್ತಾರೆಂದರೆ ವಿಜಯೇಂದ್ರನ ಟ್ರಾನ್ಸ್‌ಫರ್ ಹಾವಳಿ ಇನ್ನೆಂಥದ್ದಿರಬೇಡ?

ರೇಸ್‌ಕೋರ್ಸ್ ರಸ್ತೆಯ ಯಡ್ಡಿ ಮನೆಯಿಂದ ಹಾಗೇ ಮುಂದಕ್ಕೆ ಬಂದರೆ ಕುಮಾರ ಕೃಪಾ ಗೆಸ್ಟ್‌ಹೌಸ್. ಸದ್ಯ ಅದೇ ಯಡ್ಡಿ ಅಳಿಯ ರಾಜೇಶನ ಟ್ರಾನ್ಸ್‌ಫರ್ ಅಡ್ಡೆ. ಅಲ್ಲಿನ ರೂ. ನಂಬರ್ 108 ಮತ್ತು 208 ಎರಡನ್ನೂ ಕಳೆದ ಮೂರು ತಿಂಗಳಿಂದ ಆಕ್ರಮಿಸಿ ಕೂತ ರಾಜೇಶನಿಗೆ ಅಲ್ಲಿ ಟ್ರಾನ್ಸ್‌ಫರ್ ಬ್ರೋಕರಿಕೆ ಬಿಟ್ಟರೆ ಬೇರೆ ಕೆಲಸವಿಲ್ಲ. ಗಿರಾಕಿಗಳನ್ನು ಹಿಡಿದು ತರುವುದಕ್ಕೆಂದೇ ಶಿಕಾರಿಪುರ ಮೂಲದ ಎಂಟು ಮಂದಿ ಗುಮಾಸ್ತರನ್ನು ಸಾಕಿಕೊಂಡಿರುವ ರಾಜೇಶ್ ಟ್ರಾನ್ಸ್‌ಫರ್ ದಂಧೆಯಲ್ಲಿ ವಿಜಯೇಂದ್ರನ ಬಲಗೈ ಬಂಟ.

ಈತನ ಮೂಲಕ ವಿಜಯೇಂದ್ರನಿಗೆ ಪರಿಚಯಗೊಂಡು ಬೆಂಗಳೂರಿನ ಕಮರ್ಷಿಯಲ್ ಟ್ಯಾಕ್ಸ್ ಜಂಟಿ ಆಯುಕ್ತನ ಹುದ್ದೆಗೆ ವಕ್ಕರಿಸಿರುವ ಎಸ್.ಎ. ಮಾನ್ವಿ, ಅದಕ್ಕೆಂದು ವಿಜಯೇಂದ್ರನಿಗೆ ಕೊಟ್ಟ ಕಾಣಿಕೆಯ ಮೊತ್ತ ಕೇವಲ 40 ಲಕ್ಷ!

ಮಾನ್ವಿ ಈ ಹಿಂದೆ ಬೆಳಗಾವಿಯಲ್ಲಿದ್ದ. ಜಾತಿಯಲ್ಲಿ ಲಿಂಗಾಯತ. ಆದರೆ ಖಮಾಯಿ ಇರುವುದು ಬೆಂಗಳೂರು ಸುತ್ತಮುತ್ತ ಚೆಕ್‌ಪೋಸ್ಟುಗಳಲ್ಲಿ ಮಾತ್ರ. ಜೊತೆಗೆ ಇಡೀ ಬೆಂಗಳೂರು ನಗರದ ಕಮರ್ಷಿಯಲ್ ಟ್ಯಾಕ್ಸ್ ಇಂಟಲಿಜೆನ್ಸ್ ಹೊಣೆಯೂ ಸಿಕ್ಕಿಬಿಟ್ಟರೆ ಅದು ತಿಂಗಳೊಂದಕ್ಕೆ ಕಮ್ಮಿಯೆಂದರೂ ಐವತ್ತು ಲಕ್ಷದ ಬಾಬತ್ತು. ಲಿಂಗಾಯತನೆಂಬ ರಿಯಾಯಿತಿಯನ್ನೂ ಕಳೆದು ಲಂಚ ಅಂತ ಕೊಡಬಹುದಾದರೆ ನಲವತ್ತು ಲಕ್ಷಕ್ಕೆ ಏನೇನೂ ಮೋಸವಿಲ್ಲ. ಇದೇ ವಾಣಿಜ್ಯ ತೆರಿಗೆ ಖಾತೆಯ ಜಂಟಿ ಆಯುಕ್ತರಾಗಿ ಕೆ.ಪಿ. ಬಸವರಾಜು ಮತ್ತು ಬಿಜೆಪಿ ನಾಯಕ ಚಂದ್ರಕಾಂತ್ ಬೆಲ್ಲದರ ಅಳಿಯ ಡೆಪ್ಯೂಟಿ ಕಮಿಷನರ್ ಬಸವರಾಜು ಕೂಡ ಬೆಂಗಳೂರಿನ ಆಯಕಟ್ಟಿನ ಹುದ್ದೆಗೆ ಬಂದಿದ್ದಾರೆ. ಈ ಪೈಕಿ ಬೆಲ್ಲದ್ ಅಳಿಯ ಬಸವರಾಜುಗೆ ಇಡೀ ಬೆಂಗಳೂರಿನ ಅಷ್ಟೂ ಸಂಚಾರಿ ಚೆಕ್‌ಪೋಸ್ಟುಗಳ ಅಧಿಪತ್ಯವಿದೆ ನಿಜ. ಜಾತಿಯಲ್ಲಿ ಲಿಂಗಾಯತರಾದರೂ ಬಿಜೆಪಿ ನಾಯಕರ ಸಂಬಂಧಿಗಳೇ ಆಗಿದ್ದರೂ ತಲಾ 25 ಲಕ್ಷದಂತೆ ವಿಜಯೇಂದ್ರನ ಕೈಗಿತ್ತೇ ಬೆಂಗಳೂರಿಗೆ ಬರಬೇಕಾಯಿತು!

ಪೊಲೀಸ್ ಇಲಾಖೆಯೊಂದೇ ಯಡ್ಡಿಯ ಟ್ರಾನ್ಸ್‌ಫರ್ ಕಮಾಯಿಗೆಂದು ಕನಿಷ್ಠ ಐದು ಕೋಟಿಯಷ್ಟು ಸಂಗ್ರಹಿಸಿಕೊಟ್ಟಿದೆ. ಯಾರೆಲ್ಲ ಯಡ್ಡಿ ಮಗನ ಹೊಟ್ಟೆಗೆ ಹಣ ಹಾಕಿ ಬೆಂಗಳೂರಿನ ಆಯಕಟ್ಟಿನ ಪೊಲೀಸ್ ಠಾಣೆಗೆ ವಕ್ಕರಿಸಿದ್ದಾರೋ ಅವರ್ಯಾರಿಗೂ ಬೆಂಗಳೂರಿನ ರಸ್ತೆಗಳೇ ಗೊತ್ತಿಲ್ಲ. ಆ ಕಾಲದಿಂದಲೂ ಬೆಂಗಳೂರಿನ ಘಾತಕಿಗಳ ಪಾಲಿಗೆ ಸಿಂಹಸ್ವಪ್ನದಂತಿದ್ದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್, ರೇವಣ್ಣ, ನಂಜುಂಡೇಗೌಡ, ಶಾಮಣ್ಣ, ಪರಮೇಶ್, ಮಂಜುನಾಥ್, ಕೃಷ್ಣಕುಮಾರ್, ತೇಜಸ್ವಿ ಮುಂತಾದ ಇನ್ಸ್‌ಪೆಕ್ಟರ್‌ಗಳನ್ನು ಟ್ರಾಫಿಕ್ಕಿಗೋ, ಸಿಓಡಿಗೋ ಎತ್ತಂಗಡಿ ಮಾಡಿ ಆ ಜಾಗಕ್ಕೆ ತಂದಿದ್ದಾದರೂ ಎಂಥವರನ್ನು?

ಸದ್ಯ ಯಾರೆಲ್ಲ ಬೆಂಗಳೂರಿನ ಅತೀ ಸೂಕ್ಷ್ಮ ಪೊಲೀಸ್ ಠಾಣೆಗಳಿಗೆ ಬಂದಿದ್ದಾರೋ ಅವರ್ಯಾರಿಗೂ ಬೆಂಗಳೂರೇ ಗೊತ್ತಿಲ್ಲ. ಐದೋ ಹತ್ತೋ ಲಕ್ಷ ಕೊಟ್ಟು ಬಂದ ಇಂಥ ಪೊಲೀಸ್ ಇನ್ಸ್‌ಪೆಕ್ಟರುಗಳ ಮುಂದೆ ಬೆಂಗಳೂರಿನ ಯಾವ ನಾಗರಿಕ [illegible] ನ್ಯಾಯ ನಿರೀಕ್ಷಿಸಲು ಸಾಧ್ಯ.

ಇನ್ನು ಕಂದಾಯ ಇಲಾಖೆಗೆ ಬಂದರೆ ಅಲ್ಲಿ ಯಡ್ಡಿ ಮಗನದೇ ಕಾಟ. ಕೋಟಿಗಟ್ಟಲೇ ರಿಯಲ್ ಎಸ್ಟೇಟ್ ಖದಾಯಿಯುಳ್ಳ ಬೆಂಗಳೂರು ನಗರದ ವಿವಿಧ ತಾಲ್ಲೂಕುಗಳ ತಹಶೀಲ್ದಾರ್, ಡೆಪ್ಯೂಟಿ ತಹಶೀಲ್ದಾರ್, ಸಬ್‌ರಿಜಿಸ್ಟ್ರಾರ್ ಹುದ್ದೆಗಳನ್ನು ತಲಾ 25 ಲಕ್ಷಕ್ಕೆ ಕಮ್ಮಿಯಿಲ್ಲದಂತೆ ವಿಜಯೇಂದ್ರನ ಗ್ಯಾಂಗ್ ಮಾರಿಕೊಂಡಿದೆ. ಸದ್ಯ ಬೆಂಗಳೂರು ಉತ್ತರಕ್ಕೆ ತಹಶೀಲ್ದಾರ್ ಆಗಿರುವ ವೀರಲಿಂಗೇಗೌಡ ತಾನು ಅಲ್ಲಿಂದ ಎತ್ತಂಗಡಿಯಾಗದೇ ಇರುವುದಕ್ಕೆಂದೇ ಯಡ್ಡಿ ಮಗನಿಗೆ 30 ಲಕ್ಷ ಕೊಟ್ಟಿದ್ದಾನೆ. ಇದೇ ಹಾದಿ ಹಿಡಿದವನು ದಕ್ಷಿಣದ ತಹಶೀಲ್ದಾರ್ ಸತೀಶ್‌ಬಾಬು. ಈತ ಶೋಭಾ ಕರಂದ್ಲಾಜೆಗೆ 25 ಲಕ್ಷ ದಕ್ಷಿಣೆ ಸಲ್ಲಿಸಿದ್ದೆ ಎಂದು ಬಹಿರಂಗವಾಗಿ ಹೇಳಿಕೊಳ್ಳುತ್ತಾನೆ. ರಶ್ಮಿ ಎಂಬ ಮತ್ತೊಬ್ಬಳು ತಹಶೀಲ್ದಾರ್ ಕೂಡ ಯಲಹಂಕಕ್ಕೆ ಬರಲು ಕರಂದ್ಲಾಜೆಗೆ 25 ಲಕ್ಷ ಕೊಟ್ಟಿದ್ದಾಳಂತೆ.



ಎಸ್.ಕೆ. ಉಮೇಶ್

ಬೆಂಗಳೂರು ಸುತ್ತಮುತ್ತಲ ಸರ್ಕಾರಿ ಭೂಮಿ, ಕೆರೆ ಭೂಮಿ, ಅರಣ್ಯ ಭೂಮಿ, ಗ್ರೀನ್ ಬೆಲ್ಟ್ ಜಮೀನು ಇತ್ಯಾದಿಗಳ ಹಿಡಿತ ಸಾಧಿಸಬೇಕೆಂದರೆ ಒಂದೋ ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಬೇಕು ಅಥವಾ ಸ್ಪೆಷಲ್ ಡಿಸಿ ಹುದ್ದೆಗೆ ಬರಬೇಕು. ಹಿಂದೆ ರಾಜ್ಯಪಾಲರ ಆಳ್ವಿಕೆಯಲ್ಲಿ ಸ್ಪೆಷಲ್ ಡೀಸಿಯಾಗಿದ್ದ ಶಿವಯೋಗಿ ಕಳಸದ್ ಲಿಂಗಾಯತ ಆದರೂ ಪ್ರಾಮಾಣಿಕ ಅಧಿಕಾರಿ. ಈ ಹುದ್ದೆಯನ್ನು ಕನಿಷ್ಠ ಐದು ಕೋಟಿ ಕೊಟ್ಟಾದರೂ ಖರೀದಿಸುವುದು ಜೆ.ಸಿ. ರಾಜಶೇಖರ್ ಎಂಬ ಕೆಎಎಸ್ ಅಧಿಕಾರಿಯ ಹುನ್ನಾರವಾಗಿತ್ತು. ಈತ ಈ ಹಿಂದೆ ಬಿಡಿಎಯಲ್ಲಿದ್ದ ತನ್ನ ಅಸದಳ ಪರಾಕ್ರಮಕ್ಕೆ ಹೆಸರುವಾಸಿಯಾಗಿದ್ದ. ಯಡ್ಡಿ ಅಳಿಯ ರಾಜೇಶನ ಮೂಲಕ ವಿಜಯೇಂದ್ರನ ಸಖ್ಯ ಸಾಧಿಸಿದ ರಾಜಶೇಖರ್ ಇನ್ನೇನು ಬೆಂಗಳೂರು ನಗರದ ಸ್ಪೆಷಲ್ ಡಿಸಿಯಾಗೇ ಬಿಟ್ಟ ಎನ್ನುವಾಗಲೇ ಎಂಟ್ರಿ ಕೊಟ್ಟವನು ಬಿಜೆಪಿ ರಾಷ್ಟ್ರನಾಯಕ ಆಂಧ್ರದ ದೊಂಗ ವೆಂಕಯ್ಯ ನಾಯ್ಡು. ಈತನಿಗೆ ಆ ಹುದ್ದೆಗೆ ರಾಮಾಂಜನೇಯ ಎಂಬ ಆಂಧ್ರಾ ಮೂಲದ ಕೆಎಎಸ್ ಅಧಿಕಾರಿಯನ್ನು ತರುವ ದುರಾಸೆ. ಏಕೆಂದರೆ ತನ್ನ ಮತ್ತು ಮಂತ್ರಿ ಕಟ್ಟಾ ಪಾಲುದಾರಿಕೆಯ ಬಹುಪಾಲು ಭೂ ಡಕಾಯಿತಿಗಳಿಗೆ ಅನುವಾಗಬೇಕೆಂದು ಬೆಂಗಳೂರು ನಗರದ ಸ್ಪೆಷಲ್ ಡೀಸಿ ಗಾದಿಯಲ್ಲಿ ತಮ್ಮ ಭಟ್ಟಂಗಿಯೇ ಇರಬೇಕು.



ಸದಾನಂದಪ್ಪ

‘ಬೇರೆ ಏನೂ ಕೇಳಲ್ಲ ಇದೊಂದೇ ಕೆಲಸ ಮಾಡಿಕೊಡಿ’ ಎಂದು ಯಡ್ಡಿಗೆ ದುಂಬಾಲು ಬಿದ್ದ ವೆಂಕಯ್ಯನಾಯ್ಡುವನ್ನು ತಣಿಸಬೇಕು. ಜೊತೆಗೆ ದುಡ್ಡೂ ಹುಟ್ಟಬೇಕು. ಅದಕ್ಕೆ ಯಡ್ಡಿ ಮಾಡಿದ ಮಸಲತ್ತೇನು ಗೊತ್ತೆ? ಚೇಲಾ ಸಿದ್ದಲಿಂಗಸ್ವಾಮಿಯನ್ನು ಛೂಬಿಟ್ಟು, ನೇರಾನೇರ ರಾಮಾಂಜನೇಯನನ್ನು ಕರೆಸಿ [illegible] "ನೋಡಯ್ಯಾ, ಈ [illegible] ಅಂತೆ, ನಿಗ್ಗೆ [illegible] ಗೊತ್ತಿಲ್ಲ, ಎಂಟು ಕೋಟಿ ಕೊಟ್ಟರೇನೇ [illegible] ಅಂತೆ ನಿನ್ನ [illegible]!" ಎಂದಾಬಿಟ್ಟರು.

[illegible] ಎಂಟು ಕೋಟಿ [illegible]. ಆದರೆ [illegible] ರಾಮಾಂಜನೇಯನಂಥ [illegible] ಏನು ಕಷ್ಟ. ಈ ಹಿಂದೆ ಬಿಡಿಎನಲ್ಲಿ ಭೂಸ್ವಾಧೀನಾಧಿಕಾರಿಯಾಗಿದ್ದು ನೂರು ಕೋಟಿಗೂ ಹೆಚ್ಚು ದೋಚಿದ ರಾಮಾಂಜನೇಯನಿಗೆ ಎಂಟು ಕೋಟಿ ಯಾವ ಲೆಕ್ಕ? ಸ್ಪೆಷಲ್ ಡೀಸಿ ಹುದ್ದೆಗೆ ಬಂದು ಆರೇ ತಿಂಗಳಲ್ಲಿ ದುಡಿಯಬಹುದಾದ ಮೊತ್ತವದು. ಎರಡೋ ಮೂರೋ ರಿಯಲ್ ಎಸ್ಟೇಟ್ ಪ್ರಾಜೆಕ್ಟುಗಳಲ್ಲಿ ಆ ಮೊತ್ತವನ್ನು ಸಲೀಸಾಗಿ ದುಡಿಯಬಹುದು. ಮುಖ್ಯಮಂತ್ರಿಯೇ ಬಾಯಿಬಿಟ್ಟು ಕೇಳುತ್ತಾರೆಂದರೆ ಬೇರೆ ಯಾರು ತಾನೇ ತನ್ನನ್ನು ಏನು ಮಾಡಲು ಸಾಧ್ಯ?

ಎರಡು ಮಾತಿಲ್ಲದೇ ಒಂದೇ ಕಂತಿನಲ್ಲಿ ವಿಜಯೇಂದ್ರನ ಕೈಗೆ ಎಂಟು ಕೋಟಿ ತಂದೊಪ್ಪಿಸಿದ ರಾಮಾಂಜನೇಯ ಸದ್ಯ ಬೆಂಗಳೂರು ನಗರದ ಸ್ಪೆಷಲ್ ಡಿಸಿ. ಐದು ಕೋಟಿಗೆ ಡೀಲು ಕುದುರಿಸಿದ್ದ ರಾಜಶೇಖರ್ ಲಿಂಗಾಯತನಾದರೂ ಕತ್ತೆಬಾಲ. ಸ್ವತಃ ವೆಂಕಯ್ಯ ನಾಯ್ಡುವೇ ಹೇಳಿದರೂ ದುಡ್ಡಿನ ಮುಂದೆ ಅದು ತೃಣ ಸಮಾನ. ಇದು ಯಡ್ಡಿ ದುರಾಚಾರದ ವೈಖರಿಯಷ್ಟೆ.

ಹಾಗೇ ಬೆಂಗಳೂರು ನಗರ ಜಿಲ್ಲಾಧಿಕಾರಿ ಹುದ್ದೆಯಲ್ಲೇ ಮುಂದುವರಿಯಲು ಈಗಿದ್ದ ಡೀಸಿ ಸಾದಿಕ್ ಅಹ್ಮದ್ ನೇರವಾಗಿ ಯಡ್ಡಿ ಮಗನಿಗೇ ಹತ್ತು ಕೋಟಿಯ ಆಫರ್ ಕೊಟ್ಟಿದ್ದ. ಆಸೆಗೆ ಬಿದ್ದ ವಿಜಯೇಂದ್ರ ತಾನೇ ಖುದ್ದಾಗಿ ಐಎಎಸ್ ಅಧಿಕಾರಿ ಸಾದಿಕ್ ಅಹ್ಮದ್‌ರನ್ನು ಅಪ್ಪನ ಮುಂದೊಯ್ದು ನಿಲ್ಲಿಸಿದ. ಆದರೆ ಆ ಹೊತ್ತಿಗಾಗಲೇ ಜೆ.ಎನ್. ನಾಯಕ್ ಎಂಬ ಖತರ್‌ನಾಕ್ ಐಎಎಸ್ ಅದಕ್ಕೆ 15 ಕೋಟಿಯಷ್ಟು ಕೊಟ್ಟುಬಿಟ್ಟಿದ್ದ. ಭಿಕ್ಷುಕನನ್ನ ಗದರಿಸಿ ಓಡಿಸಿದಂತೆ ಸಾದಿಕ್ ಅಹ್ಮದ್‌ರನ್ನು ಆಚೆಗಟ್ಟಿದ ಯಡ್ಡಿ ಸದ್ಯ ಆ ಜಾಗಕ್ಕೆ ಖದೀಮ ಜೆ.ಎನ್. ನಾಯಕ್‌ನನ್ನೇ ತಂದಿದ್ದಾರೆ. 8 ಕೋಟಿ ಕೊಟ್ಟ ಸ್ಪೆಷಲ್ ಡಿಸಿಯಾದ ರಾಮಾಂಜನೇಯ ಮತ್ತು ಹದಿನೈದು ಕೋಟಿ ತೆತ್ತು ಡಿಸಿಯಾದ ಜೆ.ಎನ್. ನಾಯಕ್‌ರಂಥವರು ಬೆಂಗಳೂರು ನಗರ ಜಿಲ್ಲೆಗೆ ವಕ್ಕರಿಸಿದರೆಂದರೆ ಸುತ್ತಮುತ್ತಲ ಸರ್ಕಾರಿ ಭೂಮಿ, ಕೆರೆಕಟ್ಟೆ, ರಾಜಾಕಾಲುವೆ, ಸ್ಮಶಾನ, ಪಾರ್ಕು, ಗೋಮಾಳ ಯಾವೊಂದೂ ಉಳಿಯುವ ಸಾಧ್ಯತೆಯಿಲ್ಲ.



ವೆಂಕಟೇಶ್


ಯಡ್ಡಿ ಬೆಂಗಳೂರಿನ ಚಿತ್ರವನ್ನೇ ಬದಲಿಸುತ್ತಾರಂತೆ. ಕಲ್ಯಾಣ ಕರ್ನಾಟಕ, ಸಮೃದ್ಧ ಕರ್ನಾಟಕ ಎರಡನ್ನೂ ಒಟ್ಟೊಟ್ಟಿಗೇ ಕಟ್ಟುತ್ತಾರಂತೆ. ನಿಜ; ಲಕ್ಷಗಟ್ಟಲೇ ತೆತ್ತು ತಹಶೀಲ್ದಾರ್‌ಗಳಾದವರು, ಕೋಟಿಗಟ್ಟಲೇ ಕೊಟ್ಟು ಡಿಸಿಗಳಾದವರು, ಆಯಾ ಪೊಲೀಸ್ ಠಾಣೆಗಳನ್ನು ಹರಾಜು ಕೂಗಿಯೇ ಹಿಡಿದವರು. ಖಂಡಿತಾ ಕಲ್ಯಾಣವಾಗುತ್ತಾರೆ. ಇಂಥ ಭ್ರಷ್ಟರಿಂದಲೇ ಕರ್ನಾಟಕ ಸಮೃದ್ಧಗೊಂಡರೆ ರೈತರಷ್ಟೇ ಏಕೆ ನಗರವಾಸಿಗಳೂ ಖಂಡಿತಾ ಆತ್ಮಹತ್ಯೆಯ ಹಾದಿ ಹಿಡಿಯಲಿದ್ದಾರೆ. ಹಾಗೇ ಉಳಿದುಳಿದ ಅಷ್ಟಿಷ್ಟು ಸರ್ಕಾರಿ ಭೂಮಿಯೂ ಕಳ್ಳಕಾಕರ ಪಾಲಾಯಿತೆಂದರೆ ಬೆಂಗಳೂರಿನ ಚಿತ್ರಣ ಇನ್ನಷ್ಟು ಭೀಕರವಾಗುತ್ತದೆ.

ರಾಮರಾಜ್ಯವೆಂದರೆ ಇದೇನಾ?

ಮೂರೇ ತಿಂಗಳಲ್ಲಿ ಸಾವಿರಕ್ಕೂ ಅಧಿಕ ವರ್ಗಾವರ್ಗಿಯಲ್ಲಿ ಐನೂರು ಕೋಟಿ ದೋಚಿದ ಮುಖ್ಯಮಂತ್ರಿಯನ್ನು ಪಡೆದ ಕನ್ನಡ ತಾಯಿಯ ದೌರ್ಭಾಗ್ಯಕ್ಕೆ ಏನೆನ್ನಬೇಕು? ■

ದಂಗೆ ಎದ್ದ ಶಾಸಕರು

ಯಡ್ಡಿ ಮಗ ವಿಜಯೇಂದ್ರನನ್ನು ಬಿಟ್ಟರೆ ಟ್ರಾನ್ಸ್‌ಫರ್ ಖದಾಯಿಯಲ್ಲಿ ಅತೀಹೆಚ್ಚು ಹಾವಳಿ ಮಾಡಿದ್ದು ಶೋಭಾ ಕರಂದ್ಲಾಜೆ. ಅದೂ ಯಾವ ಮಟ್ಟದ ಕಾಟವೆಂದರೆ ಪಂಚಾಯತ್ ರಾಜ್ ಸೇರಿದಂತೆ ಲೋಕೋಪಯೋಗಿ ಇಲಾಖೆಯ ಒಟ್ಟು 93 ಮಂದಿ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳನ್ನು ಎತ್ತಂಗಡಿ ಮಾಡಿ ತಿಂಗಳಾಗುತ್ತಾ ಬಂದರೂ ಈತನಕ ಅವರ‍್ಯಾರಿಗೂ ಹುದ್ದೆ ತೋರಿಸಿಲ್ಲ.



ಶೋಭಾ ಕರಂದ್ಲಾಜೆ


ಹಾಗಂತ ರಾಜ್ಯದಲ್ಲಿ ಇಂಜಿನಿಯರ್‌ಗಳ ಹುದ್ದೆ ಖಾಲಿ ಇಲ್ಲವೆಂದಲ್ಲ. ಬೇಕಾಬಿಟ್ಟಿ ಖಾಲಿ ಬಿದ್ದಿದೆಯಾದರೂ ಅಂತರಪಿಶಾಚಿಗಳಂತಾಗಿರುವ ಇಂಜಿನಿಯರ್‌ಗಳಿಗೆ ಏಕೆ ಹುದ್ದೆ ಕೊಡುತ್ತಿಲ್ಲ?

ಅದು ಕರಂದ್ಲಾಜೆಯ ಟೆಕ್ನಿಕ್. ಇದ್ದ ಹುದ್ದೆಯಿಂದ ಎತ್ತಂಗಡಿಗೊಂಡು ಅತಂತ್ರಗೊಂಡ ಇಂಜಿನಿಯರ್‌ಗಳೆಲ್ಲ ಗತಿಯಿಲ್ಲದೇ ಬಂದು ತನ್ನ ಕಾಲಿಗೆ ಬೀಳಬೇಕು. ಅದಕ್ಕೆಂದೇ ಕರಂದ್ಲಾಜೆಯ ವಿಶೇಷ ಕರ್ತವ್ಯಾಧಿಕಾರಿ ರವೀಂದ್ರ ಮತ್ತು ಪಿಎ ಪ್ರಭುರಾಜ್ ಥೈಲಿ ಹಿಡಿದು ನಿಂತಿದ್ದಾರೆ. ರೊಕ್ಕ ಕೊಟ್ಟವರಿಗಷ್ಟೇ ಕಾಸಿಗೆ ತಕ್ಕಂತೆ ಹುದ್ದೆ, ಕೊಡದಿದ್ದರೆ ನಾಯಿಪಾಡು. ಸ್ವತಃ ಸ್ಪೀಕರ್ ಜಗದೀಶ್ ಶೆಟ್ಟರ್‌ರೇ ಮುಖ್ಯಮಂತ್ರಿಯನ್ನು ಕಂಡು ತನಗೆ ಬೇಕಾದ ಇಂಜಿನಿಯರ್ ಒಬ್ಬರಿಗೇ ಹುದ್ದೆ ಕಲ್ಪಿಸುವಂತೆ ಗೋಗರೆದರೂ ಅದಕ್ಕೆ ಕರಂದ್ಲಾಜೆ ಸೊಪ್ಪು ಹಾಕಿಲ್ಲ. ಬಹುತೇಕ ಬಿಜೆಪಿಯ ಎಮ್ಮೆಲ್ಲೆಗಳು ಕೊಟ್ಟ ಮಿನೀಟುಗಳಿಗೆ ಶೋಭಕ್ಕ ದುಗ್ಗಾಣಿಯ ಬೆಲೆ ಕೊಟ್ಟಿಲ್ಲ.



ಬೆಳ್ಳುಬ್ಬಿ

ಸದ್ಯ ಕರಂದ್ಲಾಜೆಯ ಟ್ರಾನ್ಸಫರ್ ದರೋಡೆಯ ವಿರುದ್ಧ ಬಿಜೆಪಿಯಲ್ಲೇ ಎಂಥಾ ಆಕ್ರೋಶ ಹೊಗೆಯಾಡುತ್ತಿದೆಯೆಂದರೆ; ಇದೇ ಸೆಪ್ಟೆಂಬರ್ 15 ರಿಂದ ಬೆಂಗಳೂರಿನ ಚಾನ್ಸರಿ ಹೋಟೆಲಿನಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕರಂದ್ಲಾಜೆಯ ವಿರುದ್ಧ ಹನ್ನೊಂದು ಮಂದಿ ಬಿಜೆಪಿ ಶಾಸಕರು ರಾಷ್ಟ್ರಾಧ್ಯಕ್ಷ ರಾಜನಾಥ್‌ಸಿಂಗ್‌ಗೆ ದೂರು ಕೊಟ್ಟಿದ್ದಾರೆ. ಬೆಳ್ಳುಬ್ಬಿಯ ಮಂತ್ರಿಗಿರಿಯನ್ನು ಕಿತ್ತುಕೊಂಡಿದ್ದಕ್ಕೆ ರೊಚ್ಚಿಗೆದ್ದ ಈ ಬಿಜೆಪಿ ಶಾಸಕರ ನಿಯೋಗದಲ್ಲಿ ಸಾರ್ವಭೌಮತ ಬಗಲಿ, ಶ್ರೀಕಾಂತ್ ಕುಲಕರ್ಣಿ, ಜಗದೀಶ್ ಮೇಟಗುಡ್, ಅಭಯ್ ಪಾಟೀಲ್‌ರಂಥ ಬಂಡುಕೋರ ಎಮ್ಮೆಲ್ಲೆಗಳಿದ್ದಾರೆ. ಎದುರಿಗೇ ನಿಂತಿದ್ದ ಮುಖ್ಯಮಂತ್ರಿಯನ್ನೂ ಲೆಕ್ಕಿಸದೆ ರಾಜನಾಥ್‌ಸಿಂಗ್ ಎದುರು ಕರಂದ್ಲಾಜೆಯ ಗುಣಗಾನ ಮಾಡಿದ ಈ ಹನ್ನೊಂದು ಮಂದಿ ಶಾಸಕರೆಲ್ಲರೂ ಬೆಳ್ಳುಬ್ಬಿಯ ಬೆಂಬಲಿಗರೇ.



ಜಗದೀಶ್ ಮೇಟಗುಡ್ಡ

ಇದು ಯಡ್ಡಿ ಗ್ಯಾಂಗ್‌ನ ಟ್ರಾನ್ಸ್‌ಫರ್ ದಂಧೆಯ ವಿರುದ್ಧ ಬಿಜೆಪಿಯಲ್ಲೇ ಸ್ಫೋಟಿಸಿದ ಮೊದಲ ಸಿಡಿಮದ್ದು. ಸದ್ಯಕ್ಕದು ನಿಲ್ಲುವ ಯಾವುದೇ ಲಕ್ಷಣಗಳಿಲ್ಲ. ಏಕೆಂದರೆ ನಡೆದ ಅಷ್ಟೂ ಟ್ರಾನ್ಸ್‌ಫರ್‌ಗಳೆಲ್ಲವೂ ಶಾಸಕರ ಇಚ್ಛೆಗೆ ವಿರುದ್ಧವಾಗೇ ನಡೆದಿವೆ. ಪಕ್ಷನಿಷ್ಠೆ, ತತ್ವನಿಷ್ಠೆಯ ಬದಲಿಗೆ ದುಡ್ಡೇ ಮಾನದಂಡವಾದಾಗ ಬೆಂಕಿ ಬೀಳದೇ ಇನ್ನೇನು? ■

ಚೇಲಾ ಸಿದ್ದಲಿಂಗಸ್ವಾಮಿಗೆ ವಿಜಿ ಒದೆ ಕೊಟ್ಟಿದ್ದು

ವಿಜಯೇಂದ್ರನ ವರ್ಗಾವರ್ಗಿ ಬ್ರೋಕರ್‌ಗಳ ಪೈಕಿ ದೊಡ್ಡ ಹೆಸರೆಂದರೆ ಅದು ಶಿಕಾರಿಪುರದ ರಾಜಣ್ಣ. ಈತನ ಖದರು ಹೇಗಿದೆಯೆಂದರೆ ಟ್ರಾನ್ಸ್‌ಫರ್ ಸಂಬಂಧಿ ಡೀಲು ಕುದುರಿಸುವುದಕ್ಕೆಂದೇ ವಿಧಾನಸೌಧದ ಎದುರಿನ ಐಟ್ರಿಯಾ ಹೋಟೆಲಿನಲ್ಲೊಂದು ರೂಮು ಹಿಡಿದಿದ್ದಾನೆ. ಸರಿಸುಮಾರು ಇಪ್ಪತ್ತು ಮಂದಿ ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರ್‌ಗಳಿಂದ ತಲಾ ಐದು ಲಕ್ಷದಂತೆ ರಾಜಣ್ಣ ಕಿತ್ತಿದ್ದಾನೆ.

ಮತ್ತೊಂದೆಡೆ ಯಡ್ಡಿಯ ಕೊನೇ ಮಗಳು ಉಮಾದೇವಿ ತನ್ನ ವಿಜಯನಗರದ ಮನೆಯಲ್ಲೇ ಫೋನ್ ಹಿಡಿದು ಕುಂತಳೆಂದರೆ ದಿನಕ್ಕೆ ಕನಿಷ್ಠ ಹತ್ತು ಟ್ರಾನ್ಸ್‌ಫರ್ ಮಾಡಿಸಲೇಬೇಕು. ಈಕೆಯ ಗಂಡ ಸೋಹನ್ ಕೂಡ ತನ್ನ ಗಾರ್ಮೆಂಟು, ರಿಯಲ್ ಎಸ್ಟೇಟ್ ದಂಧೆ ಬಿಟ್ಟು ವರ್ಗಾವರ್ಗಿಗೆ ನಿಂತಿದ್ದಾನೆ. ಈತನ ಪಾರ್ಟ್‌ನರ್ ಆದರ್ಶ ಬಿಲ್ಡರ್ಸ್ ಧಣಿ ಜೈಶಂಕರ್ ಮುಖ್ಯವಾಗಿ ಕೆಐಎಡಿಬಿಯ ವರ್ಗಾವರ್ಗಿ ಮತ್ತು ನಕಲಿ ಪ್ರಾಜೆಕ್ಟುಗಳಿಗೆ ಭೂಮಂಜೂರಾತಿ ಇತ್ಯಾದಿ ಭೂಡಕಾಯಿತಿಯಲ್ಲಿ ಬಿಜಿಯಾಗಿದ್ದಾನೆ. ಶಿವಮೊಗ್ಗದ ಅಷ್ಟೂ ವರ್ಗಾವಣೆಯಲ್ಲಿ ಯಡ್ಡಿಯ ಹಿರಿಮಗ ರಾಘವೇಂದ್ರನ ನೆರಳಿದ್ದರೆ, ದೊಡ್ಡಮಗಳು ಪದ್ಮಾ ಹುಬ್ಬಳ್ಳಿಯಲ್ಲಿ ಕೂತೇ ಹತ್ತು ಡಜನ್ ಟ್ರಾನ್ಸ್‌ಫರ್ ಮಾಡಿಸಿದ್ದಾಳೆ.

ಟ್ರಾನ್ಸ್‌ಫರ್ ವಸೂಲಿಗೆ ನಿಂತ ಯಡ್ಡಿ ಸಂತತಿಯಲ್ಲೇ ಇತ್ತೀಚೆಗೆ ಹೊಡೆದಾಟಗಳಾಗಿವೆ. ಕಾಸು ದುಡ್ಡು ಕಿತ್ತಿದ್ದ ಮೂವರು ಇನ್ಸ್‌ಪೆಕ್ಟರ್‌ಗಳ ಜಾಗಕ್ಕೆ ಇನ್ನಾರಿಂದಲೋ ಕಾಸು ತಿಂದು ಓವರ್‌ಟೇಕ್ ಮಾಡಿದ ಸಿದ್ದಲಿಂಗಸ್ವಾಮಿಯನ್ನೇ ಇತ್ತೀಚೆಗೆ ತನ್ನ ಮನೆಯಲ್ಲೇ ಹಿಡಿದು ವಿಜಯೇಂದ್ರ ಬಡಿದಿದ್ದಾನೆ.

ಸಾಲದ್ದಕ್ಕೆ ಮಹೇಂದ್ರ ಎಂಬ ಮತ್ತೊಬ್ಬ ಯಡ್ಡಿಯ ಸಂಬಂಧಿ ಶಿವಮೊಗ್ಗದಲ್ಲೇ ಕೂತು ಟ್ರಾನ್ಸ್‌ಫರ್ [illegible] ಆರಂಭಿಸಿದ್ದಾನೆ. ಅಕ್ಕಪಕ್ಕದ ಕ್ಷೇತ್ರಗಳ ಬಿಜೆಪಿ ಶಾಸಕರಿಗೆ ಈತನ ಕಾಟ ಹೇಗಿದೆಯೆಂದರೆ, ಹರಿಹರದ ಬಿಜೆಪಿ ಶಾಸಕ ಬಿ.ಪಿ. ಹರೀಶ್ ತನಗೆ ಇಂಥದ್ದೇ ಅಧಿಕಾರಿಗಳು ಬೇಕೆಂದು ಕೊಟ್ಟ ಪಟ್ಟಿಯನ್ನು ಕಸದಬುಟ್ಟಿಗೆ ಹಾಕಿ, ತಾನು ದುಡ್ಡು ಕಿತ್ತಿದ್ದ ಒಂದು ಡಜನ್ ಅಧಿಕಾರಿಗಳನ್ನು ಹರಿಹರಕ್ಕೆ ತಂದಿದ್ದಾನೆ. ತನ್ನದೇ ಪಕ್ಷದ ಮುಖ್ಯಮಂತ್ರಿ ತನ್ನ ಪಟ್ಟಿಯನ್ನು ಬದಿಗೊತ್ತಿ ಸಂಬಂಧಿ ಮಹೇಂದ್ರನಿಗೆ ಮಣೆ ಹಾಕಿದ್ದಕ್ಕೆ ಬೇಸತ್ತ ಹರೀಶ್ ಅವತ್ತೇ ರಾಜೀನಾಮೆ ಬರೆದುಕೊಟ್ಟಿದ್ದರು.

ಆದರೆ ಯಡ್ಡಿ "ಅಲ್ಲಯ್ಯಾ ನೀನು ಎಮ್ಮೆಲ್ಲೆ ಆಗಿದ್ದೇ ನಿನ್ನ ಪುಣ್ಯ. ಇಂಥಾದ್ದರಲ್ಲಿ ಟ್ರಾನ್ಸ್‌ಫರ್ ಬೇರೆ ಬೇಕಾ" ಎಂದು ಶಾಸಕ ಹರೀಶ್‌ರನ್ನು [illegible]. ಇದನ್ನು ಬಿಜೆಪಿಯ [illegible] ಏನೆನ್ನಬೇಕು? ■



ಗದಗ: ನಾಗರತ್ನಮ್ಮಳನ್ನು ಗಂಡ ಬಸವರಾಜನೇ ಕೊಂದನೆ?

ಇವತ್ತು ಗದುಗಿನ ಯಾವ ಮೂಲೆಗೆ ಹೋದರೂ ಇಂದು ಕೇಳಿಬರುತ್ತಿರುವ ಪ್ರಶ್ನೆ.


ಶಾಂತಿಗೆ ಹೆಸರಾದ ಗದುಗಿನಲ್ಲಿ ನಾಗರತ್ನಮ್ಮ ಎಂಬ ಸುಸಂಸ್ಕೃತ ಕುಟುಂಬದ ಮಹಿಳೆಯೊಬ್ಬಳು ಬರ್ಬರವಾಗಿ ಹತ್ಯೆಯಾಗಿಹೋಗಿದ್ದಾಳೆ. ಈ ಕೊಲೆಯ ಹಿಂದಿರುವ ಕಾಣದ ಕೈಗಳ ಬಗ್ಗೆ ಈಗ ಗದುಗಿನಾದ್ಯಂತ ಜನ ನಿದ್ದೆ ಬಿಟ್ಟು ಮಾತನಾಡುತ್ತಿದ್ದಾರೆ. ಊರ ನಟ್ಟನಡುವೆಯೇ ಅಮಾನುಷವಾಗಿ ಈ ಕೊಲೆ ನಡೆದಿದೆ. ಜೀವ ತೆಗೆಸಿಕೊಳ್ಳುವಷ್ಟು ಅಪರಾಧವನ್ನು ತಾನೇನು ಮಾಡಿದ್ದೆ ಎಂಬುದು ಪ್ರಾಯಶಃ ಖುದ್ದು ನಾಗರತ್ನಮ್ಮಳಿಗೂ ಗೊತ್ತಿರಲಿಕ್ಕಿಲ್ಲ.

ಕೊಲೆಯಾಗಿರುವ ನಾಗರತ್ನಮ್ಮ ಊರಿನ ಪ್ರತಿಷ್ಠಿತ ಪ್ರವೀಣ್ ಆಯಿಲ್ ಮಿಲ್ ಮಾಲೀಕ ಬಸವರಾಜ್ ನಾಗಲಾಪೂರ್ ಎಂಬ ಕಲಬೆರಕೆ ಎಣ್ಣೆ ವ್ಯಾಪಾರಸ್ಥನ ಧರ್ಮಪತ್ನಿ. ಊರ ನಟ್ಟ ನಡುವೆ ಇರುವ ಮಸಾರಿ ಭಾಗದ ಚೇತನಾ ಕ್ಯಾಂಟೀನ್‌ನ ಕೂಗಳತೆಯ ದೂರದಲ್ಲಿ ಇವರದೊಂದು ಅಚ್ಚುಕಟ್ಟಾದ ಮನೆಯಿದೆ. ಬಸವರಾಜ್ ಮತ್ತು ನಾಗರತ್ನಮ್ಮರದು ಇಬ್ಬರು ಹೆಣ್ಣು ಮಕ್ಕಳು ಮತ್ತು ಒಂದು ಗಂಡು ಮಗುವಿರುವ ತುಂಬು ಸಂಸಾರ. ನಾಗರತ್ನಮ್ಮ ತಮ್ಮದೇ ಮನೆಯಲ್ಲಿ ಅಮಾನುಷವಾಗಿ ಕೊಲೆಯಾಗಿದ್ದನ್ನು ನೋಡಿ ಜನ ಬೆಚ್ಚಿಬಿದ್ದಿದ್ದಾರೆ. ಏಕೆಂದರೆ, ಆಕೆ ಒಬ್ಬ ಹೌಸ್‌ವೈಫ್. ಆಕೆ ಕೊಲೆ ಮಾಡಿಸಿಕೊಳ್ಳುವಷ್ಟು ಅಪರಾಧವನ್ನು ಮಾಡಿರಲೇ ಇಲ್ಲ. ಅಥವಾ ಊರಿನ ಕೊಲೆಗಡುಕರನ್ನಾಗಲೀ, ಮಾಫಿಯಾದವರನ್ನಾಗಲೀ ಎದುರು ಹಾಕಿಕೊಂಡಿರುವ ಉದಾಹರಣೆಗಳೇ ಇಲ್ಲ. ಆಕೆಯ ಪರಿಚಯವಿರುವ ಯಾರನ್ನೇ ಕೇಳಿದರೂ ಆಕೆಯೊಬ್ಬ ಸಭ್ಯ ಗೃಹಿಣಿ ಎಂದೇ ಹೇಳುತ್ತಾರೆ. ಹಾಗಿದ್ದ ಮೇಲೂ ಆಕೆ ಕೊಲೆಯಾಗುತ್ತಾಳೆಂದರೆ ಏನರ್ಥ?




ಈ ಪ್ರಶ್ನೆಯನ್ನು ಕೆದಕುತ್ತಾ ಹೋದರೆ ಕೊಲೆಗಡುಕರ ಸುಳಿವು ಸಿಗದಿದ್ದರೂ ಕೆಲವು ಅಚ್ಚರಿಗಳಂತೂ ಕಣ್ಣಿಗೆ ರಾಚುತ್ತವೆ; ಕೊಲೆ ನಡೆದದ್ದು ಹುಟ್ಟಿಂಪೂರಾ ಸ್ಕೆಚ್‌ನಂತೆ ಗೋಚರಿಸುತ್ತದೆ.

ಕೊಲೆಯ ಬಗ್ಗೆ ಈಗ ಹೇಳಲಾಗಿರುವ ಕಥೆಯೇನೆಂದರೆ, ನಾಗರತ್ನಮ್ಮಳ ಗಂಡ ಬಸವರಾಜ್ ನಾಗಲಾಪೂರ್ ಅಂದು ಮಧ್ಯಾಹ್ನ ಊಟ ಮುಗಿಸಿಕೊಂಡು ಮಧ್ಯಾಹ್ನ 3.30ರ ಸುಮಾರಿಗೆ ಮನೆಯಿಂದ ಹೊರ ಹೋಗಿರುತ್ತಾನೆ. ಗಂಡ ಹೊರ ಹೋದ ತಕ್ಷಣ ನಾಗರತ್ನಮ್ಮ ಮನೆಯ ಮುಂಬಾಗಿಲನ್ನು ಭದ್ರಪಡಿಸಿಕೊಂಡು ಮನೆಯೊಳಗಿರುತ್ತಾಳೆ. ಕೆಲಸಮಯದ ನಂತರ ಕೆಲವು ಹಂತಕರು ಬಂದು ಬಾಗಿಲು ಬಡಿಯುತ್ತಾರೆ. ನಾಗರತ್ನಮ್ಮ ಯಾವುದೇ ಅನುಮಾನ ವ್ಯಕ್ತಪಡಿಸದೇ ಸೀದಾ ಬಂದು ಮುಂಬಾಗಿಲು ತೆರೆದು ಹಂತಕರನ್ನು ಒಳಗೆ ಬಿಟ್ಟುಕೊಳ್ಳುತ್ತಾಳೆ. ನಂತರ 4.50ರ ಹೊತ್ತಿಗೆ ಅದೇ ಮನೆಯಲ್ಲಿ ರಕ್ತದ ಮಡುವಿನಲ್ಲಿ ಹೆಣವಾಗಿ ಬೀಳುತ್ತಾಳೆ.



ಬಸವರಾಜ್





ಇದಿಷ್ಟನ್ನೇ ಇಟ್ಟುಕೊಂಡು ನೋಡಿದರೂ ಕೊಲೆ ಮಾಡಿದ ಹಂತಕರು ಹೊರಗಿನವರು ಎಂದೆನಿಸುವುದಿಲ್ಲ. ಮೊದಲನೆಯದಾಗಿ ಈಗಾಗಲೇ ಆಕೆಗೆ ಯಾವ ರೌಡಿಯೊಂದಿಗಾಗಲೀ, ಮಾಫಿಯಾ ಗ್ಯಾಂಗಿನೊಂದಿಗಾಗಲೀ, ದೋ ನಂಬರ್ ದಂಧೆಯವರೊಂದಿಗಾಗಲೀ ಯಾವುದೇ ವೈಷಮ್ಯವಿರಲಿಲ್ಲ. ಆಕೆ ತಾನಾಯಿತು, ತನ್ನ ಮಕ್ಕಳು ಮರಿಯಾಯಿತು, ತನ್ನ ಮನೆಯಾಯಿತು ಎಂದುಕೊಂಡಿದ್ದ ಒಬ್ಬ ಗೃಹಿಣಿ.

ಎರಡನೆಯದಾಗಿ, ಕೊಲೆ ನಡೆದ ರೀತಿಯನ್ನೇ ನೋಡಿ. ಕೊಲೆ-ಸುಲಿಗೆಗಳು ಹೆಚ್ಚಾಗುತ್ತಿರುವ ಇಂದಿನ ದಿನಗಳಲ್ಲಿ ಒಂಟಿ ಹೆಣ್ಣುಮಕ್ಕಳು ಮನೆಯೊಳಗಿದ್ದಾಗ ಹೊರಗಿನಿಂದ ಯಾರಾದರೂ ಬಾಗಿಲು ತಟ್ಟಿದರೆ ಅವರು ಯಾರು ಎಂದು ಖಚಿತಪಡಿಸಿಕೊಳ್ಳದೇ ಬಾಗಿಲು ತೆರೆಯುವುದಿಲ್ಲ. ಇತ್ತೀಚೆಗಂತೂ ಅದೊಂದು ವಾಡಿಕೆಯಾಗಿಬಿಟ್ಟಿದೆ. ಇಲ್ಲಿ ನಾಗರತ್ನಮ್ಮ ಬಾಗಿಲು ತೆರೆದಿದ್ದಾಳೆ ಎಂದರೆ ಬಾಗಿಲು ಬಡಿದವರು ಯಾರೋ ಪರಿಚಯಸ್ಥರೇ ಇರಬೇಕು. ಅಂದರೆ, ಕೊಲೆ ನಡೆಸಿದವರು ಹೊರಗಿನವರಾಗಿರದೇ ಒಳಗಿನ ಜನರೇ ಇರಬೇಕು ಎಂಬುದಂತೂ ಸ್ಪಷ್ಟ.

ಇದೇ ಕೊಲೆಯನ್ನು ಇನ್ನೊಂದು ಆಯಾಮದಲ್ಲಿ ನೋಡಿದರೆ ನಾಗರತ್ನರ ಗಂಡ ಬಸವರಾಜರೇ ಖಳನಾಯಕರಾಗಿ ನಿಲ್ಲುತ್ತಾರೆ. ನಾಗರಾಜರು ಮೂಲತಃ ಆರೆಸ್ಸೆಸ್‌ನ ಕಟ್ಟಾ ಹುರಿಯಾಳು. ಈ ಭಾಗದಲ್ಲಿ ಕೋಮು ವೈಷಮ್ಯ ಹುಟ್ಟುಹಾಕುವುದಕ್ಕೆ, ಕೋಮು ದಳ್ಳುರಿ ಹಚ್ಚುವುದಕ್ಕೆ ಆರೆಸ್ಸೆಸ್‌ಗೆ, ಭಜರಂಗದಳಕ್ಕೆ, ಎಬಿವಿಪಿಗೆ ಹಣಕಾಸು ಒದಗಿಸುವ ಕೆಲವೇ ಧಣಿಗಳಲ್ಲಿ ಬಸವರಾಜ್ ಕೂಡ ಒಬ್ಬ. ಮೊನ್ನೆ ನಡೆದ ವಿಧಾನಸಭಾ ಎಲೆಕ್ಷನ್‌ನಲ್ಲಿಯೂ ಬಿಜೆಪಿಗೆ ಲೆಕ್ಕವಿಲ್ಲದಷ್ಟು ದುಡ್ಡು ಹರಿಸಿದ ಫೈನಾನ್ಷಿಯರ್ ಈತ. ತನ್ನ ಹೆಂಡತಿ ನಾಗರತ್ನಮ್ಮಳ ಕೊಲೆ ನಡೆದ ಮೇಲೆ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಈತ ತಾನು ಕೊಲೆ ನಡೆದ ದಿನ ಮಧ್ಯಾಹ್ನ 3.30ಕ್ಕೆ ಮನೆಯಿಂದ ಆಚೆ ಹೋಗಿರುವುದಾಗಿ ಹೇಳಿದ್ದಾನೆ. ಆದರೆ, ಅಕ್ಕಪಕ್ಕದ ಜನ ಈತ ಮಧ್ಯಾಹ್ನ 4 ರಿಂದ 4.30ರ ಸುಮಾರಿಗೆ ಮನೆಯಿಂದ ಆಚೆ ಹೋಗಿದ್ದಾಗಿ ಹೇಳುತ್ತಾರೆ. ಹೀಗಾಗಿ ನಾಗರತ್ನಮ್ಮಳನ್ನು ಮುಗಿಸಿಯೇ ಆತ ಮನೆಯಿಂದ ಹೊರನಡೆದಿದ್ದಾನೆ ಎಂಬ ವಾದಕ್ಕೆ ರೆಕ್ಕೆಪುಕ್ಕಗಳು ಹುಟ್ಟತೊಡಗಿವೆ.


ಅವರ ಮನೆಯ ಮುಂದಿರುವ ಮೆಹರವಾಡ ಕಣ್ಣಿನ ಆಸ್ಪತ್ರೆಗೆ ಬಂದಿದ್ದ ಪರಿಚಯಸ್ಥರ ಚಿಕ್ಕ ಮಗುವೊಂದು ನಾಗರತ್ನಮ್ಮಳಿಗೆ "ನಾನು ಮನಿಗೆ ಹೋಗ್ತೀನಿ ಅಂಟಿ" ಅಂತ ಹೇಳುವುದಕ್ಕೆ ಅರ್ಧಂಬರ್ಧ ಮುಚ್ಚಿದ್ದ ನಾಗರತ್ನಮ್ಮಳ ಮನೆಯ ಬಾಗಿಲನ್ನು ತೆರೆದಾಗ ರಕ್ತದ ಮಡುವಿನಲ್ಲಿ ಬಿದ್ದಿದ್ದ ಆಕೆಯ ಹೆಣವನ್ನು ನೋಡಿ ಆ ಮಗು ಚೀರಿಕೊಂಡಿದೆ. ಆಗಲೇ ಕೊಲೆ ಹೊರಪ್ರಪಂಚಕ್ಕೆ ಗೊತ್ತಾಗಿದ್ದು.

ಈ ಕೊಲೆಯನ್ನು ಇನ್ನೊಂದು ರೆಫರೆನ್ಸ್‌ನಲ್ಲಿ ಇಟ್ಟು ನೋಡಿ. ನಾಗರತ್ನಮ್ಮಳ ಮನೆಯಲ್ಲಿ ಸಾಕಿದ್ದ ಆಳೆತ್ತರದ ಬಲಿಷ್ಠ ಮುಧೋಳ ನಾಯಿ ಈಗ್ಗೆ ಒಂದೂವರೆ ತಿಂಗಳ

ಕೊಳ್ಳೇಗಾಲ: ರಾಮಲಿಂಗಪ್ಪ ಎಂಬ ಮೇಯುವ ಗಿರಾಕಿ

ಕೊಳ್ಳೇಗಾಲದ ಜನ, ಅದರಲ್ಲೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅದೇನು ಪಾಪ ಮಾಡಿದ್ದರೋ ಗೊತ್ತಿಲ್ಲ, ಅವರಿಗೆ ರಾಮಲಿಂಗಪ್ಪ ಎಂಬ ಕಮೀಷನ್ ಗಿರಾಕಿ ಬೀಇಒ ಆಗಿ ವಕ್ಕರಿಸಿಕೊಂಡಿದ್ದಾನೆ. ಆತ ಇಲ್ಲಿಗೆ ಬಂದು ಹೆಚ್ಚೂಕಡಿಮೆ ಮೂರು-ಮೂರುವರೆ ವರ್ಷ ಆಯಿತು. ಈ ಅವಧಿಯಲ್ಲಿ ಆತ ಇಲ್ಲಿ ಏನೇನು ಮಾಡಿದ್ದಾನೆ ಎಂದು ಕೆದಕುತ್ತಾ ಹೋದರೆ ಬೃಹತ್ ಗ್ರಂಥವಾಗುವಷ್ಟು ನುಂಗಾಯಣಗಳು ಕಣ್ಣಿಗೆ ರಾಚುತ್ತವೆ. ಈತನ ರಕ್ತ ಹೀರುವಿಕೆಯಿಂದ ರೋಸಿಹೋದ ಶಿಕ್ಷಕರು ಈಗ ಇವನ ವಿರುದ್ಧ ತಿರುಗಿಬಿದ್ದಿದ್ದಾರೆ. ಖುದ್ದು ಶಾಸಕ ಧ್ರುವನಾರಾಯಣ್ ಅವರೆ ರಾಮಲಿಂಗಪ್ಪನಿಗೆ ಎಲೆ ಅಡಿಕೆ ಹಾಕಿಕೊಂಡು ಕ್ಯಾಕರಿಸಿ ಉಗಿದಿದ್ದಾರಲ್ಲದೇ ಅವನನ್ನು ಅಲ್ಲಿಂದ ಎತ್ತಂಗಡಿ ಮಾಡುವುದಕ್ಕೆ ತಯಾರಾಗಿ ನಿಂತಿದ್ದಾರೆ.

ಈ ಹಿಂದೆ 2007ರಲ್ಲಿ ಈತ ಕಮಲ, ಲಕ್ಷ್ಮಿ ದೇವಮ್ಮ, ಜಯಮ್ಮ, ನಾಗರತ್ನ, ಗ್ಲಾಡಿಸ್ ಸೇರಿದಂತೆ ಒಟ್ಟು ಆರು ಮಂದಿ ಶಿಕ್ಷಕಿಯರನ್ನು ಕೊಳ್ಳೇಗಾಲದಿಂದ ಹನೂರಿಗೆ ವರ್ಗಾಯಿಸಿದ್ದ. ಆ ಶಿಕ್ಷಕಿಯರೇನೋ ಕೊಳ್ಳೇಗಾಲದಿಂದ ರಿಲೀವ್ ಆಗಿದ್ದರು. ಆದರೆ ಅವರು ಹನೂರಿಗೆ ಹೋಗಿ ಕೆಲಸ ಮಾಡಲಿಲ್ಲ, ಅಂದರೆ ಅವರು ಕೊಳ್ಳೇಗಾಲದಲ್ಲೂ ಕೆಲಸ ಮಾಡುತ್ತಿರಲಿಲ್ಲ, ಅತ್ತ ಹನೂರಿಗೂ ಹೋಗಿರಲಿಲ್ಲ, ಮಾತ್ರವಲ್ಲ ಇಲಾಖೆಯಿಂದ ರಜೆಯನ್ನೂ ಪಡೆದಿರಲಿಲ್ಲ, ಅವರೆಲ್ಲಾ ಎಲ್ಲಿ ಹೋಗಿದ್ದರು, ಏನು ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಇವತ್ತಿಗೂ ಉತ್ತರವಿಲ್ಲ, ಆದರೆ ವಿಚಿತ್ರವೆಂದರೆ ಪ್ರತಿ ತಿಂಗಳೂ ಅವರೆಲ್ಲ ತಪ್ಪದೇ ಸಂಬಳ ಪಡೆಯುತ್ತಿದ್ದರು!



ಹಣವೆಲ್ಲಾ ಖಾಲಿ ಖಾಲಿ ಕಟ್ಟಡ ಮಾತ್ರ ಅಪೂರ್ಣ ಇದು
ಕೊಳ್ಳೇಗಾಲ ತಾಲ್ಲೂಕಿನ ಟಿ.ಜಿ.ದೊಡ್ಡಿ ಗ್ರಾಮದಲ್ಲಿ ಅಪೂರ್ಣಗೊಂಡಿರುವ ಶಾಲಾ ಕಟ್ಟಡದ ಕಾಮಗಾರಿ..

ಆ ಸಂಬಳದ ಮೊತ್ತದಲ್ಲಿ ಅರ್ಧದಷ್ಟನ್ನು ಈ ರಾಮಲಿಂಗಪ್ಪನ ಜೇಬಿಗಿಳಿಸುತ್ತಿದ್ದರು!!

ತನಗೆ ಬೇಕಾದ ಮಹಿಳೆಯೊಬ್ಬಳನ್ನು ಅರೆಕಾಲಿಕ ಶಿಕ್ಷಕಿಯಾಗಿ ನೇಮಿಸಿಕೊಂಡು ಅಲ್ಲಿನ ಇನ್ನಿತರ ಶಿಕ್ಷಕರ ಸಂಬಳದಿಂದ ತಲಾ ಐನೂರು ರೂಪಾಯಿಗಳನ್ನು ಕಿತ್ತು ಇವಳಿಗೆ ಸಂಬಳವಾಗಿ ಕೊಡುತ್ತಿದ್ದ. ಇದರಿಂದೆಲ್ಲ ಬೇಸರಗೊಂಡ ಶಿಕ್ಷಕರು ಇವನಿಗೆ ಛೀಮಾರಿ ಹಾಕಿದ್ದರು.

ಪ್ರಕರಣವನ್ನೇ ಮುಚ್ಚೆಬಿಟ್ಟ

ಕಮೀಷನ್ ಹೊಡೆಯುವ ಮಾರ್ಗಗಳನ್ನು ಹುಡುಕುವುದರಲ್ಲಿ ಈತ ಎಷ್ಟು ನಿಸ್ಸೀಮನೋ ಹಾಗೆಯೇ ಅವುಗಳನ್ನು ಮುಚ್ಚಿ ಹಾಕುವುದರಲ್ಲಿಯೂ ಅಷ್ಟೇ ನಿಸ್ಸೀಮ. 2006ರಲ್ಲಿ ಕೊಳ್ಳೇಗಾಲ ತಾಲ್ಲೂಕಿನ ತಿಲ್ಲೇಗೌಡನ ದೊಡ್ಡಿ ಎಂಬ ಗ್ರಾಮದಲ್ಲಿ ಮುಖ್ಯ ಶಿಕ್ಷಕನಾಗಿದ್ದ ಶಾಂತರಾಜು ಎರಡು ಶಾಲಾ ಕಟ್ಟಡ ನಿರ್ಮಿಸುವುದಾಗಿ ಹಣ ಮಂಜೂರು ಮಾಡಿಸಿಕೊಂಡಿದ್ದ. ಆದರೆ ಅಲ್ಲಿ ಎದ್ದು ನಿಂತದ್ದು ಶೇ.60 ರಷ್ಟು ಮಾತ್ರವೇ ಮುಗಿದಿದ್ದ ಕಳಪೆ ಕಾಮಗಾರಿಯ ಅರೆ ಕಟ್ಟಡ. ಈ ಮಧ್ಯೆ ಎರಡನೆ ಕಟ್ಟಡವನ್ನೂ ಶುರು ಮಾಡಿ ಅದನ್ನು ಶೇ.30ರಷ್ಟು ಮುಗಿಸಿದ. ಈತ 2006ರ ನವೆಂಬರ್ ತಿಂಗಳಿನಲ್ಲಿ ಪಕ್ಕದ ಶಿವನಸಮುದ್ರಕ್ಕೆ ವರ್ಗವಾದಾಗ ಒಂದೇ ವಾರದಲ್ಲಿ ಎರಡು ಲಕ್ಷಕ್ಕಿಂತಲೂ ಅಧಿಕ ಮೊತ್ತದ ಹಣವನ್ನು ಡ್ರಾ ಮಾಡಿ ನುಂಗಿಹಾಕಿದ. ಕಟ್ಟಡ ಕಾಮಗಾರಿ ಮಾತ್ರ ಅರ್ಧಂಬರ್ಧಕ್ಕೆ ನಿಂತಿತ್ತು. ಕಟ್ಟಡ ಮುಗಿಸುವುದಕ್ಕೆ ಮೊದಲೇ ಎಲ್ಲಾ ಹಣವನ್ನು ಡ್ರಾ ಮಾಡಿಕೊಳ್ಳಲು ಶಾಂತರಾಜನಿಗೆ ಅವಕಾಶ ಮಾಡಿಕೊಟ್ಟಿದ್ದ ರಾಮಲಿಂಗಪ್ಪನಿಗೆ ಆತನಿಂದ ಸಖತ್ತಾಗಿ ಕಮಿಷನ್ ತಿಂದಿದ್ದ.



ಈ ಗೋಲ್‌ಮಾಲ್ ಬಗ್ಗೆ ಇಲಾಖೆಯಲ್ಲಿ ಗದ್ದಲವೆದ್ದಿತು. ಆದರೆ ಶಾಂತರಾಜುವಿನಿಂದ ಹೊಟ್ಟೆ ತುಂಬಾ ತಿಂದಿದ್ದ ರಾಮಲಿಂಗಪ್ಪ ಕಣ್ಣೊರೆಸುವ ನಾಟಕವಾಡಿ ಶಾಂತರಾಜುವನ್ನು ಎರಡು ತಿಂಗಳಿಗೆ ಅಮಾನತ್ತು ಮಾಡಿ ಕೈತೊಳೆದುಕೊಂಡ. ಎರಡು ತಿಂಗಳಾದ ಮೇಲೆ ಶಾಂತರಾಜುವಿನ ಅಮಾನತ್ತನ್ನು ರದ್ದುಗೊಳಿಸಿ ಅವನನ್ನು ಕೊಳ್ಳೇಗಾಲ ತಾಲ್ಲೂಕಿನ ಜೀಕನಹಳ್ಳಿಗೆ ನಿಯೋಜಿಸಿದ.



ರಾಮಲಿಂಗಪ್ಪ

ರಾಮಲಿಂಗಪ್ಪನ ಮೇಯುವಿಕೆ ಅದೆಷ್ಟರಮಟ್ಟಿಗೆ ಇದೆ ಎಂದರೆ ಮಂಜೂರಾದ ಹಣದಲ್ಲಿ ಅರ್ಧ ಇವನ ಜೇಬಿಗೇ ಸೇರುತ್ತದೆ. ಒಂಭತ್ತು ಪ್ರೌಢಶಾಲೆಗಳಿಗೆ ಪೀಠೋಪಕರಣ ಮತ್ತು ಪಾಠೋಪಕರಣಗಳನ್ನು ಖರೀದಿಸುವುದಕ್ಕಾಗಿ 20 ಲಕ್ಷ ಮಂಜೂರಾಗಿತ್ತು, ಅದರಲ್ಲಿ ಹತ್ತು ಲಕ್ಷ ರೂ.ಗಳ ಸಾಮಾನು ಕೂಡ ಶಾಲೆಗಳಿಗೆ ಬರಲಿಲ್ಲ, ಬಂದ ಕೆಲವು ಪೀಠೋಪಕರಣಗಳೂ ಮೂರೇ ದಿನದಲ್ಲಿ ಮುರಿದು ಹೋದವು.

ಇಲಾಖೆಯಲ್ಲೂ ಗೋಲ್‌ಮಾಲ್

ಒಂಭತ್ತು ಸಿಎಇಒಗಳಿಗೆ ಟಿಎ, ಡಿಎ ಹಾಗೂ ಸಿಜಿ ಸೇರಿದಂತೆ ಇನ್ನಿತರ ಅನುದಾನಗಳನ್ನು ನೀಡುವುದಕ್ಕಾಗಿ ಮಂಜೂರಾಗಿದ್ದ 54 ಸಾವಿರ ರೂ.ಗಳನ್ನು ರಾಮಲಿಂಗಪ್ಪನೇ ನುಂಗಿ ನೀರು ಕುಡಿದಿದ್ದಾನೆ. 'ಚೈತ್ರದ ಚಿಗುರು' ಎಂಬ ಮಕ್ಕಳಿಗಾಗಿ ಮಾಡಬೇಕಿದ್ದ ಬೇಸಿಗೆ ಶಿಬಿರವನ್ನು

...ಏವೆ ವಿಚಾರಾರ ಸೇವನೆ ಮಾಡಿ ಸತ್ತು ಹೋಗಿದೆ. ...ವನ್ನು ಈಗ ನಾಗರತ್ನಮ್ಮಳ ಕೊಲೆಗೆ ತಳುಕು ಹಾಕಿ ...ನೋಡಿದರೆ ಅಲ್ಲಿಯೂ ಬಸವರಾಜನೇ ಖಳನಾಯಕನಾಗಿ ...ಣಾಬುತ್ತಾನೆ.

ಯಾವುದೇ ಸಾಕುನಾಯಿಯ ಎದುರು ಅದನ್ನು ಸಾಕಿದ ಮಾಲೀಕನ ಮೇಲೆ ಹಲ್ಲೆ ಮಾಡುವುದು, ಕೊಲ್ಲುವುದು ಸುಲಭವಲ್ಲ. ತನ್ನ ಮಾಲೀಕನ ಮೇಲೆ ಹಲ್ಲೆಗೆರಗಿದರೆ ನಾಯಿಯು ವ್ಯಾಘ್ರನಂತೆ ಕ್ರೋಧಗೊಂಡು ಹಂತಕರ ಮೇಲೆರಗುತ್ತದೆ. ಹಾಗೆಯೇ, ನಾಗರತ್ನಮ್ಮ ಬಹಳ ಪ್ರೀತಿಯಿಂದ ಸಾಕಿದ್ದ ಆ ನಾಯಿಯ ಎದುರುಗಡೆ ನಾಗರತ್ನಮ್ಮಳನ್ನು ಕೊಲ್ಲುವುದು ತುಸು ಕಷ್ಟ ಎಂಬುದನ್ನು ಹಂತಕರು ಚೆನ್ನಾಗಿ ತಿಳಿದಿದ್ದರು. ಅದನ್ನು ಕಟ್ಟಿಹಾಕಿ ಕೊಲ್ಲಬಹುದಾದರೂ ಕೊಲೆಯ ನಂತರ ಅದು ಹಂತಕರನ್ನು ನೋಡಿ ರೋಷದಿಂದ ಬೊಗಳಿ ರಾದ್ಧಾಂತ ಮಾಡಬಹುದು. ಅದರಿಂದ ಹಂತಕರು ಯಾರೆಂಬುದು ಪೊಲೀಸರಿಗೆ ಗೊತ್ತಾಗಬಹುದು. ಹೀಗಾಗಿ, ಮೊದಲು ನಾಯಿಯನ್ನು ಮರ್ಡರ್ ಮಾಡಿ ಆನಂತರವೇ ನಾಗರತ್ನಮ್ಮಳ ಮರ್ಡರ್‌ಗೆ ಕೈಹಾಕಲಾಗಿದೆಯೇ ಎಂಬುದನ್ನು ತಳ್ಳಿಹಾಕುವಂತಿಲ್ಲ.

ಎಷ್ಟು ಜನ ಸೇರಿ ನಾಗರತ್ನಮ್ಮಳನ್ನು ಕೊಂದು ಹಾಕಿದರು? ಏನಿಲ್ಲವೆಂದರೂ ಕನಿಷ್ಠ ಮೂರು ಜನರ ತಂಡ ಈ ಕೃತ್ಯವೆಸಗಿದೆ. ಖುದ್ದು ನಾಗರತ್ನಮ್ಮ ಕಟ್ಟುಮಸ್ತಾದ ಆಳು. ಆಕೆಯನ್ನು ಒಬ್ಬನೇ ಕೊಲ್ಲುವುದು ಎನ್ನುತ್ತಿದ್ದಾನೆ. ಈತ ಬಿಜೆಪಿಯ ಫೈನಾನ್ಷಿಯರ್ ಆಗಿರುವುದರಿಂದ, ಬಿಜೆಪಿಯೇ ಈಗ ರಾಜ್ಯದಲ್ಲಿ ಅಧಿಕಾರದಲ್ಲಿರುವುದರಿಂದ ಅದನ್ನು ಬಳಸಿಕೊಂಡು ಕೇಸನ್ನು ಮುಚ್ಚಿಹಾಕುವುದಕ್ಕೆ ಪೊಲೀಸರ ಮೇಲೆ ಪೊಲಿಟಿಕಲ್ ಪ್ರೆಷರ್ ತರುತ್ತಿದ್ದಾನೆ.

ಈ ರಾಜಕೀಯ ಒತ್ತಡಕ್ಕೆ ಮಣಿದು ಪೊಲೀಸರು ನಿಜವಾದ ಕೊಲೆಗಾರರನ್ನು ರಕ್ಷಿಸಿಬಿಟ್ಟರೆ ಅದು ಕೇವಲ ನಾಗರತ್ನಮ್ಮರಿಗೆ ಮಾಡಿದ ಅನ್ಯಾಯವಲ್ಲ, ಇಡೀ ಗದುಗಿನ ಜನಕ್ಕೆ ಮಾಡಿದ ಅನ್ಯಾಯವಾಗುತ್ತದೆ.

ಎಷ್ಟು ಸತ್ಯವೋ ಎಷ್ಟು ಸುಳ್ಳೋ ಗೊತ್ತಿಲ್ಲ, ಹೆಂಡತಿ ನಾಗರತ್ನಮ್ಮ ಕೊಲೆಯಾದ ಮೇಲೆ ಅವರ ಗಂಡ ಬಸವರಾಜ್ ಶೀಘ್ರವೇ ಇನ್ನೊಂದು ಮದುವೆಯಾಗಲು ಹೊರಟಿದ್ದಾರಂತೆ. ಇಂತಹದ್ದೊಂದು ಗಾಸಿಪ್ ಇಡೀ ಗದುಗಿನಾದ್ಯಂತ ಗುನುಗುಡುತ್ತಿದೆ. ಒಂದು ವೇಳೆ ಇದು ಸತ್ಯವೇ ಆಗಿದ್ದಲ್ಲಿ ನಾಗರತ್ನಮ್ಮಳ ಕೊಲೆಯ ಹಿಂದಿನ ರಹಸ್ಯವೂ ಬಯಲಾಗಲಿದೆ. ■

...ಯೋಜಿಸದೆಯೇ ಅದರ ಹೆಸರಿನಲ್ಲಿ ಮೂವತ್ತು ಸಾವಿರ ನುಂಗಿದ್ದಾನೆ. ಈ ಕುರಿತಂತೆ ಗ್ರಾಮಸ್ಥರೇ ಡಿಡಿಪಿಐ ...ನರಸಿಂಹಮೂರ್ತಿಗೆ ದೂರು ನೀಡಿದರೂ ಆತ ಅದನ್ನು ದಿಂಡೆ ಕೆಳಗೆ ಹಾಕಿಕೊಂಡು ಕುಳಿತಿದ್ದಾನೆ.

2006ರಲ್ಲಿ ಶಿಕ್ಷಕರಿಗೆ ಅರಿಯರ್ಸ್ ನೀಡಲು ಶೇ. ... ರಿಂದ ಶೇ. 8ರ ತನಕ ಪರ್ಸೆಂಟೇಜ್ ಕೇಳಿದ್ದ. ಶಿಕ್ಷಕರಿಗೆ ದೊರೆತ ವೇತನವನ್ನೇ ಇಲಾಖೆಯಲ್ಲಿ ಅಲಾಟ್‌ಮೆಂಟ್ ಇಲ್ಲದಿದ್ದರೂ ಅರಿಯರ್ಸ್ ಆಗಿ ನೀಡಿ ಈಗ ಪೇಚಿಗೆ ಸಿಲುಕಿಕೊಂಡಿದ್ದಾನೆ. ತನ್ನೊಂದಿಗೆ ಸಹಕರಿಸಲಿಲ್ಲ ಎಂಬ ...ಂಟು ನೆಪವೊಡ್ಡಿ ಮರಯ್ಯ ಎಂಬ ಶಿಕ್ಷಕರನ್ನು ಅಮಾನತ್ತು ಮಾಡಿದ್ದಾನೆ. ಆ ಶಿಕ್ಷಕ ಹತ್ತು ಸಾವಿರ ಕಪ್ಪ ಕೊಟ್ಟ ಮೇಲೆಯೇ ಅವನ ಅಮಾನತ್ತನ್ನು ರದ್ದುಗೊಳಿಸಿದ್ದಾನೆ.


ಧ್ರುವನಾರಾಯಣ್ ಏನು ಮಾಡ್ತಾರೆ?

ಬೀಇಓ ರಾಮಲಿಂಗಪ್ಪನ ನುಂಗಾಯಣ ಪುರಾಣಗಳು ಇಡೀ ಜಿಲ್ಲೆಯ ಶಿಕ್ಷಕರ, ವಿದ್ಯಾರ್ಥಿಗಳ ಬಾಯಲ್ಲಿ ಎಲೆ ಅಡಿಕೆಯಾಗಿಬಿಟ್ಟಿವೆ. ಎಲ್ಲೇ ಹೋದರೂ ಅವನದ್ದೇ ರಾಮಾಯಣ. ಅದೀಗ ಶಾಸಕ ಧ್ರುವನಾರಾಯಣ್ ಕಿವಿಗೂ ಬಿದ್ದಿದ್ದು ಮೊನ್ನೆ ನಡೆದ ಕೆಡಿಪಿ ಸಭೆಯಲ್ಲಿ ರಾಮಲಿಂಗಪ್ಪನ ಚಳಿಜ್ವರ ಬಿಡಿಸಿದ್ದಾರೆ.

ತಾನೊಬ್ಬ ದಕ್ಷ ಅಧಿಕಾರಿಯೆಂದೂ, ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದೇನೆಂದೂ, ಇದನ್ನು ಸಹಿಸದೇ ಕೆಲವರು ತನ್ನ ವಿರುದ್ಧ ದೂರು ನೀಡಿರಬೇಕೆಂದೂ ಧ್ರುವನಾರಾಯಣ್ ಎದುರು ಪುಂಗಿ ಊದುವುದಕ್ಕೆ ರಾಮಲಿಂಗಪ್ಪ ಪ್ರಯತ್ನಿಸಿದ. ಆದರೆ ಇವನ ನುಂಗಾಯಣ ಪುರಾಣಗಳನ್ನು ಚೆನ್ನಾಗಿಯೇ ಅರಿತಿರುವ ಶಾಸಕರು ...ರುಗಿಸಿ ಮತ್ತೆ ಕೊಟ್ಟಿದ್ದಾರೆ. ಈ ಜಟಾಪಟಿ ಸಭೆಯ ...ಂತರವೂ ಮುಂದುವರೆದಿದ್ದು ರಾಮಲಿಂಗಪ್ಪನ ಎತ್ತಂಗಡಿ ...ನಿಶ್ಚಿತವಾಗಿದೆ.

ಅವರ ಜಾಗಕ್ಕೆ ಚಾಮರಾಜನಗರದ ಮಂಜುನಾಥ್ ...ಬರುವುದು ಬಹುತೇಕ ಖಚಿತವಾಗಿದೆ. ತಾನು ಎತ್ತಂಗಡಿ ...ಆಗುವುದು ಗ್ಯಾರಂಟಿಯಾದ ತಕ್ಷಣ ರಾಮಲಿಂಗಪ್ಪ ಈಗ ಜಿಲ್ಲಾ ಪಂಚಾಯತ್ ಸದಸ್ಯ ಶಿವಕುಮಾರ್‌ಗೆ ...ಬಿದ್ದಿದ್ದಾನಂತೆ. ಈ ಪ್ರೆಷರ್‌ಗೆ ಧ್ರುವ...ನಾರಾಯಣ್ ಬಗ್ಗುತ್ತಾರೆಯೇ ಎಂಬುದೇ ಉಳಿದಿರುವ ...ಶ್ನೆ.

■ ವರದಿಗಾರ



ದುರಂತ ನಾಯಕನ ನಿರೀಕ್ಷಿತ ಅಂತ್ಯ

ಸಿದ್ಧರಾಜು ರಾಜಕೀಯ ಪಕ್ಷದಲ್ಲಿದ್ದುಕೊಂಡೇ ಕಬ್ಬಿನ ಚಳವಳಿ, ನೀರಾ ಚಳವಳಿ, ಕಾವೇರಿ ಚಳವಳಿ ಇತ್ಯಾದಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇದೆಲ್ಲದರ ಮೂಲಕ ಮದ್ದೂರಿನ ದೊಡ್ಡ ಸಂಖ್ಯೆಯ ಯುವಕರನ್ನು ಆಕರ್ಷಿಸಿದ್ದರು. ಈ ಯುವಕರ ಒಡನಾಟ ಮತ್ತು ಒಕ್ಕಲಿಗ ಪ್ರಾಬಲ್ಯದ ಮಂಡ್ಯ ಜಿಲ್ಲೆಯಲ್ಲಿ ವಿವಿಧ ಹಿಂದುಳಿದ ಜಾತಿಗಳ ಮತ್ತು ಅಲ್ಪಸಂಖ್ಯಾತರ ಜೊತೆ ಬೆರೆತಿದ್ದೇ ಕೊನೆಯವರೆಗೆ ಅವರಿಗೆ ಉಳಿದುಕೊಂಡಿದ್ದು. ಇಷ್ಟೆಲ್ಲಾ ಹಿನ್ನೆಲೆಯ ಸಿದ್ಧರಾಜು ಅವರ ಸಾವು ದುರಂತ ನಾಯಕನ ನಿರೀಕ್ಷಿತ ಅಂತ್ಯದಂತೆ ಭಾಸವಾಗುತ್ತಿದೆ.


ಮದ್ದೂರಿನ ಶಾಸಕ ಸಿದ್ದರಾಜು ಅಕಾಲಿಕ ಸಾವನ್ನಪ್ಪಿದ್ದಾರೆ. ಅವರನ್ನು ಹತ್ತಿರದಿಂದ ಬಲ್ಲವರಿಗೆ ಈ ಸಾವು ಅನಿರೀಕ್ಷಿತವೇನಲ್ಲ. ಮಂಡ್ಯ ಜಿಲ್ಲೆಯ ಇತರ ಸಾಂಪ್ರದಾಯಿಕ ರಾಜಕಾರಣಿಗಳಿಗಿಂತ ಭಿನ್ನವಾಗಿ ನಿಲ್ಲುವ ಕೆ.ವಿ.ಶಂಕರೇಗೌಡ, ಎಸ್.ಡಿ.ಜಯರಾಂ ಇತ್ಯಾದಿಗಳ ಸಾಲಿನಲ್ಲಿ ಸೇರಬಹುದಾಗಿದ್ದ ಸಿದ್ದರಾಜು ತಮ್ಮದೇ ತಪ್ಪುಗಳ ಕಾರಣದಿಂದ 49ರ ವಯಸ್ಸಿನಲ್ಲೇ ಕಣ್ಮರೆಯಾಗಿದ್ದಾರೆ. ಇದರೊಂದಿಗೆ ಕರ್ನಾಟಕದ ರಾಜಕಾರಣದಲ್ಲಿ ದೇವೇಗೌಡರ ದ್ರೋಹದ ಫಲವಾಗಿ ನೋವುಂಡು ಸತ್ತವರ ಪಟ್ಟಿಯಲ್ಲಿ ಸಿದ್ದರಾಜುವೂ ಸೇರಿಕೊಂಡಿದ್ದಾರೆ.

ಮಂಡ್ಯ ನಗರದಲ್ಲಿ ಕಾವೇರಿ ವಿವಾದ ಹತ್ತಿಕೊಂಡಾಗಲೆಲ್ಲಾ ವಿವಿಧ ಯುವಕ ಸಂಘಗಳು, ರೈತರು ಸ್ವಯಂಸ್ಫೂರ್ತಿಯಿಂದ ಬೀದಿಗೆ ಬಂದು ಹೋರಾಟ ಶುರು ಮಾಡುತ್ತಾರೆ. ಬಿಸಿ ಹೊತ್ತಿರುವುದನ್ನು ಖಾತರಿ ಮಾಡಿಕೊಂಡು ಅದರಲ್ಲಿ ಚಳಿ ಕಾಯಿಸಿಕೊಳ್ಳಲು ಮಾದೇಗೌಡರಾದಿಯಾಗಿ ಎಲ್ಲರೂ ಸಂಜಯ ಸರ್ಕಲ್‌ಗೆ ಬಂದು ಫೋಟೋಗೆ ಪೋಸು ಕೊಡುತ್ತಾರೆ. ಇದೇ ಲಾಗಾಯ್ತಿನಿಂದ ನಡೆಯುತ್ತಾ ಬಂದಿರುವುದು.

ಆದರೆ ಮದ್ದೂರಿನಲ್ಲಿ ಆ ಕಿಡಿಯನ್ನು ಹೊತ್ತಿಸುತ್ತಿದ್ದುದೇ ಸಿದ್ದರಾಜು. ರೈತ ವಿದ್ಯಾರ್ಥಿ ಒಕ್ಕೂಟದ ಹಿನ್ನೆಲೆಯಿದ್ದ ಸಿದ್ದರಾಜು ಮೈಸೂರಿನಲ್ಲಿ ಓದುತ್ತಿರುವಾಗ ಅಲ್ಲಿನ ಪ್ರಗತಿಪರ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದರು. ಅಲ್ಲಿಂದ ತನ್ನ ಸಾರ್ವಜನಿಕ ಬದುಕು ಪ್ರಾರಂಭಿಸಿದರು. ಅದೇ ರೀತಿಯಲ್ಲಿ ಮುಂದುವರೆದಿದ್ದರೆ, ಮಂಡ್ಯ ಜಿಲ್ಲೆಯಲ್ಲಿ ಹೊಸದೊಂದು ಅಲೆಗೆ ಕಾರಣರಾಗುತ್ತಿದ್ದರೋ ಏನೋ. ಅದರ ಬದಲಿಗೆ ಜನತಾ ಪಕ್ಷದ ಮೂಲಕ ಅಧಿಕಾರ ರಾಜಕಾರಣಕ್ಕೆ ಎಂಟ್ರಿ ಪಡೆದುಕೊಂಡಿದ್ದರಿಂದಲೇ ಇವತ್ತು ಅಕಾಲಿಕವಾಗಿ ಸಾಯಬೇಕಾದ ಪರಿಸ್ಥಿತಿಯನ್ನು ತಂದುಕೊಂಡರು.

ಮದ್ದೂರಿಗೆ ಬಂದವರೇ ಎಸ್.ಎಂ.ಕೃಷ್ಣ ಫ್ಯಾಮಿಲಿ ನಡೆಸುತ್ತಿದ್ದ ಸಾಮಾನ್ಯ ಜನ ವಿರೋಧಿ ರಾಜಕಾರಣದ ವಿರುದ್ಧ ಕೆಲಸ ಮಾಡುತ್ತಾ, ಜನರ ವಿಶ್ವಾಸವನ್ನು ಸಂಪಾದಿಸಿಕೊಂಡರು. ಆದರೆ ಅಗಾಧವಾದ ಸಂಘಟನಾ ಸಾಮರ್ಥ್ಯ ಹೊಂದಿದ್ದ, ಸದಾ ಯುವಕರ ಮಧ್ಯೆಯಿರುತ್ತಿದ್ದ ಈತ ಹೋರಾಟಗಾರನಾಗಿ ಏನೆಲ್ಲಾ ಮಾಡಬಹುದಿತ್ತೋ ಅದನ್ನೆಲ್ಲಾ ರಾಜಕಾರಣಿಯಾಗಿ ಸಾಧಿಸಲಾಗಲಿಲ್ಲ.

ರೈತ ಸಂಘದಲ್ಲಿ ನಾಯಕತ್ವ ಸ್ಥಾನದಲ್ಲಿದ್ದ ಎಸ್.ಡಿ. ಜಯರಾಂ, ಹಾಲಿ ಮಂಡ್ಯ ಶಾಸಕ ಎಂ.ಶ್ರೀನಿವಾಸ್, ಬೂದನೂರು ಶಿವಾನಂದ, ಎಚ್.ಶ್ರೀನಿವಾಸ್ ಇವರೆಲ್ಲ ಹೋರಾಟವನ್ನು ಕೈಬಿಟ್ಟು ಸಾಲುಸಾಲಾಗಿ ರಾಜಕೀಯ ಪಕ್ಷಗಳನ್ನು ಸೇರಿದರು. ಆದರೆ ರಾಜಕೀಯ ಪಕ್ಷದಲ್ಲಿದ್ದ ಸಿದ್ಧರಾಜು ರಾಜಕೀಯ ಪಕ್ಷದಲ್ಲಿದ್ದುಕೊಂಡೇ ಕಬ್ಬಿನ ಚಳವಳಿ, ನೀರಾ ಚಳವಳಿ, ಕಾವೇರಿ ಚಳವಳಿ ಇತ್ಯಾದಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಇದೆಲ್ಲದರ ಮೂಲಕ ಮದ್ದೂರಿನ ದೊಡ್ಡ ಸಂಖ್ಯೆಯ ಯುವಕರನ್ನು ಆಕರ್ಷಿಸಿದ್ದರು. ಈ ಯುವಕರ ಒಡನಾಟ ಮತ್ತು ಒಕ್ಕಲಿಗ ಪ್ರಾಬಲ್ಯದ ಮಂಡ್ಯ ಜಿಲ್ಲೆಯಲ್ಲಿ ವಿವಿಧ ಹಿಂದುಳಿದ ಜಾತಿಗಳ ಮತ್ತು ಅಲ್ಪಸಂಖ್ಯಾತರ ಜೊತೆ ಬೆರೆತಿದ್ದೇ ಕೊನೆಯವರೆಗೆ ಅವರಿಗೆ ಉಳಿದುಕೊಂಡಿದ್ದು.



35 ವರ್ಷಕ್ಕೇ ಜಿಲ್ಲಾ ಜನತಾದಳದ ಅಧ್ಯಕ್ಷರಾದ ಸಿದ್ಧರಾಜುವನ್ನು ದೇವೇಗೌಡರ ಮಾನಸಪುತ್ರರೆಂದೇ ಕರೆಯಲಾಗುತ್ತಿತ್ತು. ಇಂತಹ ಹಲವಾರು ಮಾನಸಪುತ್ರರನ್ನು ಹೊಂದಿರುವ ದೇವೇಗೌಡರು ಅಂತಿಮವಾಗಿ ಅಧಿಕಾರದ ಪಟ್ಟವನ್ನು ಕೊಟ್ಟದ್ದು ಮಾತ್ರ ತಮ್ಮ ಸ್ವಂತ ಪುತ್ರರಿಗೆ. ದೇವೇಗೌಡರು 80ರ ದಶಕದ ಕೊನೆಯಲ್ಲಿ ಎಸ್‌ಜೆಪಿಯನ್ನು ಕಟ್ಟಿದಾಗಿನಿಂದಲೂ ಅವರ ಜೊತೆ ಸಿದ್ಧರಾಜು ದುಡಿದವರು. ಸಿದ್ಧರಾಜು ಅವರನ್ನು ಎಂಎಲ್‌ಸಿ ಮಾಡಿದ್ದ ದೇವೇಗೌಡರು ಮುಖ್ಯಮಂತ್ರಿಯಾದ ಮೇಲೆ ಬೇರೆ ರೀತಿಯಲ್ಲಿ ವರ್ತಿಸತೊಡಗಿದರು. ತಮ್ಮ ಮಕ್ಕಳಿಗೆ ಮುಂದಿನ ಪಟ್ಟ ಕಟ್ಟಲು ಯೋಚಿಸಿದ್ದ ಗೌಡರು ಬೇರ್‍ಯಾವ ಒಕ್ಕಲಿಗ ನಾಯಕನೂ ಬೆಳೆಯಬಾರದೆಂದು ಸಿದ್ಧರಾಜು ಥರದವರನ್ನು ಹಣಿಯತೊಡಗಿದರು.

ಬೇಸತ್ತ ಸಿದ್ದರಾಜುವನ್ನು ಮುಖ್ಯಮಂತ್ರಿ ಪದವಿ ಏರುವ ಸಿದ್ಧತೆಯಲ್ಲಿದ್ದ ಎಸ್.ಎಂ.ಕೃಷ್ಣ ತಮ್ಮ ಬಲೆಗೆ ಹಾಕಿಕೊಂಡರು. ದೇವೇಗೌಡರು ಕೊಡಿಸಿದ್ದ ಎಂಎಲ್‌ಸಿ ಸ್ಥಾನಕ್ಕೆ ರಾಜೀನಾಮೆ ಕೊಡಿಸಿ, ಕಾಂಗ್ರೆಸ್‌ನಿಂದ ಎಂಎಲ್‌ಸಿ ಮಾಡಿದರು. ಆದರೆ ಎಸ್.ಎಂ.ಕೃಷ್ಣ ಸಿಎಂ ಆದ ಸ್ವಲ್ಪ ಕಾಲದಲ್ಲೇ ಅವರ ವಿರುದ್ಧ ವಿಧಾನ ಪರಿಷತ್‌ನಲ್ಲೇ ಸಿದ್ದರಾಜು ಮಾತನಾಡತೊಡಗಿದರು. ಎಸ್.ಎಂ.ಶಂಕರ್ ಮಂಡ್ಯ ಜಿಲ್ಲೆಯ ಸೂಪರ್ ಸಿಎಂ ಆಗತೊಡಗಿದ್ದು, ಕೃಷ್ಣರ ಹೈಟೆಕ್ ಶೈಲಿ ಇವೆಲ್ಲವೂ ಸಿದ್ಧರಾಜುಗೆ ಸರಿಬರದ ಕಾರಣ ಕಾಂಗ್ರೆಸ್‌ನಿಂದ ಹೊರಬಂದ ಅವರು ಮತ್ತೆ ರೈತಪರ ನಾಯಕನ ವರಸೆ ಶುರು ಮಾಡಿದರು. ಮದ್ದೂರಿನಲ್ಲಿ ಹೇಗೂ ಯುವಪಡೆಯು ಬೆನ್ನಿಗಿತ್ತಲ್ಲ, ಅದನ್ನು ಜೊತೆಗಿಟ್ಟುಕೊಂಡು 'ಸ್ವಾಭಿಮಾನಿ ಪಡೆ'ಯ ಹೆಸರಿನಲ್ಲಿ ಪುರಸಭೆಗೆ ಅಭ್ಯರ್ಥಿಗಳನ್ನು ಇಳಿಸಿ ಎಸ್.ಎಂ.ಕೃಷ್ಣರ ಅಲೆಯ ವಿರುದ್ಧ ಈಜಿದರು.



ದೇವೇಗೌಡರು "ನಿನ್ನನ್ನು ಎಂಎಲ್‌ಎ ಮಾಡುತ್ತೀನಿ, ಎಸ್.ಎಂ.ಕೃಷ್ಣ ಎದುರಿಗೆ ನೀನೇ ಕ್ಯಾಂಡಿಡೇಟ್" ಎಂದು ಹೇಳಿ ಮತ್ತೆ ಜೆಡಿಎಸ್‌ಗೆ ಸೇರಿಸಿಕೊಂಡರು. ಆದರೆ 2004ರಲ್ಲಿ ಕೃಷ್ಣ ಕ್ಷೇತ್ರ ಬದಲಿಸಿ ಚಾಮರಾಜಪೇಟೆಗೆ ಹೋದರು. ಅದೇ ಸಿದ್ಧರಾಜುವಿಗೂ ಮುಳುವಾಯಿತು. ದೇವೇಗೌಡರ ಬೀಗ ತಮ್ಮಣ್ಣ ಮದ್ದೂರಿನಿಂದ ಕಾಂಗ್ರೆಸ್ ಅಭ್ಯರ್ಥಿಯಾದರು. ಸಿದ್ಧರಾಜು ... ಧೈರ್ಯದಿಂದ ಜೆಡಿಎಸ್ ಬಿಫಾರಂ ಓಂ.... ಪತ್ರ ಸಲ್ಲಿಸಲು ಹೋದರೆ, ಅಷ್ಟರಲ್ಲಾಗಲೇ ಜಿಲ್ಲಾ ಪಂಚಾಯತ್ ಅಧ್ಯಕ್ಷ ವಿವೇಕಾನಂದ ಜೆಡಿಎಸ್ ಬಿಫಾರಂ ಸಲ್ಲಿಸಿಯಾಗಿತ್ತು. ಚಿಹ್ನೆಯಿಲ್ಲದಿದ್ದರೂ ಸಿದ್ಧರಾಜುವೇ ನಮ್ಮ ಕ್ಯಾಂಡಿಡೇಟ್ ಎಂದು ಗೌಡರು ಹೇಳಿದರು. ಆದರೂ ಸಿದ್ಧರಾಜು ಸೋತರು, ಬೀಗರು ಗೆದ್ದರು. ಇದು ದೇವೇಗೌಡರ ವರಸೆ.

ಅಷ್ಟರಲ್ಲಾಗಲೇ ಕುಡಿತವನ್ನು ಶುರು ಹಚ್ಚಿಕೊಂಡಿದ್ದ ಸಿದ್ಧರಾಜು ಆನಂತರ ವಿಪರೀತ ಕುಡಿಯತೊಡಗಿದರು. ಹೆಂಗಸರ ವಿಚಾರದಲ್ಲಿ ಸ್ವಲ್ಪ ಸಡಿಲ ಎಂಬ ಆರೋಪವನ್ನು ಅವರು ಹೊತ್ತಿದ್ದರೂ ಸಿದ್ಧಾಂತಕ್ಕೆ ಅವೆಲ್ಲದರಿಂದ ಕಳಚಿಕೊಂಡರಾದರೂ, ಕುಡಿತ ಮಾತ್ರ ಬಿಡಲಿಲ್ಲ. ಜನತಾದಳದಲ್ಲಿ ಅವರಿಗಿಂತ ಜೂನಿಯರ್‌ಗಳಾದ ಚೆಲುವರಾಯಸ್ವಾಮಿ, ಪುಟ್ಟರಾಜು ಇತ್ಯಾದಿಗಳು ಶಾಸಕರಾಗಿ ದೇವೇಗೌಡರ ಮನೆಬಾಗಿಲು ಕಾಯುತ್ತಾ ನೂರಾರು ಕೋಟಿ ಮಾಡಿಕೊಂಡರೆ, ಸಿದ್ದರಾಜು ಜನತಾದಳವನ್ನೇ ಬಿಟ್ಟು ಬಂಗಾರಪ್ಪನವರ ಜೊತೆ ಸೇರಿದರು. ಸಮಾಜವಾದಿ ಪಕ್ಷದ ಜಿಲ್ಲಾಧ್ಯಕ್ಷರಾದರು. ಆದರೆ ಇದರಿಂದ ಏನೇನೂ ಗಿಟ್ಟುವುದಿಲ್ಲ, ತಾನು ಮತ್ತೆ ಎಂಎಲ್‌ಎ ಆಗಲಾರೆ ಎಂಬುದು ಅವರಿಗೆ ಸ್ಪಷ್ಟವಿತ್ತು. ಹಾಗಾಗಿ "ದೇವೇಗೌಡರು ಮನೆಬಾಗಿಲಿಗೆ ಬಂದು ಕರೆದರು" ಎಂಬ ಕಾರಣ ಹೇಳಿ ಮತ್ತೆ ಜೆಡಿಎಸ್ ಸೇರಿದರು.

ಮೊನ್ನೆ ನಡೆದ ಚುನಾವಣೆಯಲ್ಲಿ ಮತ್ತೆ ತಮ್ಮಣ್ಣನೇ ಎದುರಾಳಿ. ಜೊತೆಗೆ ಬಿಜೆಪಿಯಿಂದ ಮಾದೇಗೌಡರ ಮಗ. ಡಿ.ಸಿ.ತಮ್ಮಣ್ಣ ಕೋಟಿಗಳನ್ನು ಸರಾಗವಾಗಿ ಹರಿಸಿದರೆ, ಮಧು ಮಾದೇಗೌಡನಿಗೆ ಎಸ್.ಎಂ.ಕೃಷ್ಣ ಫ್ಯಾಮಿಲಿಯ ಬಹಿರಂಗ ಸಪೋರ್ಟಿತ್ತು. ಇವರಿಬ್ಬರ ಅಬ್ಬರದಲ್ಲಿ ಸಿದ್ಧರಾಜು ಮತ್ತೆ ಸೋಲುವಂತೆ ಕಾಣುತ್ತಿತ್ತು. ಆದರೆ ಇಬ್ಬರೂ ಕಿತ್ತಾಡಿಕೊಂಡಿದ್ದು ಮತ್ತು ಸಿದ್ದರಾಜು ಬಗ್ಗೆ ಜನರಿಗೆ ಇದ್ದ ಅನುಕಂಪ ಅವರನ್ನು ಗೆಲ್ಲಿಸಿತು. ಗೆದ್ದ ಮೇಲೆ 'ಆಪರೇಷನ್ ಕಮಲ'ದ ಭಾಗವಾಗಿ ಬಿಜೆಪಿ ಸೇರಿದರೆ ಅವರು ಮಾಡಿಕೊಂಡಿದ್ದ ಸಾಲವನ್ನು ತೀರಿಸುವಷ್ಟು ಹಣ ಮತ್ತು ಎಂಎಲ್‌ಎ ಆಗಿಸುವ ಆಶ್ವಾಸನೆ ಸಿಕ್ಕರೂ ಅವರು ಬಿಜೆಪಿಗೆ ಹೋಗದೆ ಉಳಿದುಕೊಂಡರು.

ಚುನಾವಣೆಯ ಹೊತ್ತಿಗೆ ಕುಡಿತದಿಂದ ಸಾಕಷ್ಟು ಹೈರಾಣಾಗಿ ಹೋಗಿದ್ದ ವ್ಯಕ್ತಿ ಗೆದ್ದರೆ ಮಾತ್ರ ಬದುಕುಳಿಯಬಹುದು ಎಂದು ಜೊತೆಗಿದ್ದವರು ತಿಳಿದಿದ್ದರು. ಚುನಾವಣಾ ಪ್ರಚಾರದ ಸಮಯದಲ್ಲಿ ಸಿದ್ಧರಾಜು ಸರಿಯಾಗಿ ನಡೆಯಲಾಗದೆ ತಟ್ಟಾಡುತ್ತಿದ್ದರೂ, ದುಡ್ಡು ಚೆಲ್ಲದಿದ್ದರೂ ತನ್ನ ದೇಹದಲ್ಲಿ ಉಳಿದಿದ್ದ ಎನರ್ಜಿಯನ್ನೇ ಬಳಸಿ ಹಳ್ಳಿ ಹಳ್ಳಿ ಸುತ್ತಿ ಗೆದ್ದು ಬಂದರು. ಗೆದ್ದ ತಿಂಗಳಲ್ಲೇ ಎಸ್‌ಸಿಎಂ ಶುಗರ್ಸ್‌ನ ಕಾರ್ಮಿಕನೊಬ್ಬ ಬಾಯ್ಲರ್ ಸಿಡಿದು ಸತ್ತಾಗ ಶಾಸಕ ಸಿದ್ದರಾಜು ಧರಣಿ ಕೂತು ಪರಿಹಾರ ಕೊಡಿಸಿದರು. ಸರಿ ಹೋಗುತ್ತೇನೆಂಬ ಭರವಸೆಯನ್ನು ಬೆಂಬಲಿಗರಲ್ಲಿ ಮೂಡಿಸಿದ್ದರು. ಆಸ್ಪತ್ರೆ ಸೇರುವ ಮುನ್ನ ಸಕ್ಕರೆ ಕಾರ್ಖಾನೆಯ ಉಪಉತ್ಪನ್ನಗಳ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದು, ಅದರ ಬಗ್ಗೆ ವಿಧಾನ ಸಭೆಯಲ್ಲಿ ಮಾತಾಡಲು ತಯಾರಿ ನಡೆಸಿದ್ದರು. ಆದರೆ ಲಿವರ್ ಜೊತೆಗೆ ಮೂತ್ರಪಿಂಡಗಳೂ ಕೈಕೊಟ್ಟು, ಆಸ್ಪತ್ರೆಯಿಂದ ಮರಳಿ ಬರಲಿಲ್ಲ.

ಸದ್ಯದ ರೆಡ್ಡಿ ಬ್ರಾಂಡ್, ಚೆಲುವರಾಯಸ್ವಾಮಿ ಬ್ರಾಂಡ್ ರಾಜಕಾರಣದಲ್ಲಿ ಯಶಸ್ಸು ಎಂಬುದು ಸಿಕ್ಕುವುದು ಪರಮಭ್ರಷ್ಟರಿಗೆ ಮತ್ತು ಏನು ಬೇಕಾದರೂ ಮಾಡಲು ಸಿದ್ಧರಿರುವವರಿಗೆ ಮಾತ್ರ. ಆದರೆ ಅದನ್ನೆಲ್ಲ ಅರ್ಥ ಮಾಡಿಕೊಳ್ಳದೆ ಚಳವಳಿ ಮಾಡುವ ಮನಸ್ಥಿತಿ ಹೊಂದಿದ್ದ ವ್ಯಕ್ತಿಯೊಬ್ಬ ಅಧಿಕಾರ ಹಿಡಿಯಲು ಹೊರಟು ಎರಡನ್ನೂ ಮಾಡಲಾಗದೇ, ಅಕಾಲಿಕವಾಗಿ ಸತ್ತು ಹೋಗಿದ್ದು ಮಾತ್ರ ದುರಂತ. ಸಿದ್ಧರಾಜು ರವರಂತೆ ಇವತ್ತು ಎರಡನ್ನೂ ಮಾಡಲಾಗದೆ ಒದ್ದಾಡುತ್ತಿರುವ ಮಂಡ್ಯದ ಹೊಸ ಪೀಳಿಗೆಯ ಸಿ.ಎಂ.ದ್ಯಾವಪ್ಪ ಥರದವರಿಗೆ ಅವರು ಸಾವು ಒಂದು ಪಾಠವಾಗಬೇಕಿದೆ.

■ ಕೃತಿಕ

ಅತ್ತ ಹಗಲೂ ಅಲ್ಲ... ಇತ್ತ ರಾತ್ರಿಯೂ ಅಲ್ಲ

ಟೂಟಿಂಗ್ ಬ್ರಾಡ್ವೇ ಬಂದಾಗ ಟ್ಯೂಬ್ ರೈಲಿನಿಂದ ಇಳಿಯುತ್ತೇನೆ. ಕರುಗೆ ಗಬ್ಬೆನ್ನುವ ನಿಲ್ದಾಣದಿಂದ ಹೊರಗೆ ಬಂದ ತಕ್ಷಣ ಮಾಗಿಯ ಬಿಸಿಲು ಚುರನೆ ಕಣ್ಣು ಚುಚ್ಚುತ್ತದೆ. ಸರಬರನೆ ಹರಿದಾಡುತ್ತಿದ್ದ ಬಣ್ಣಬಣ್ಣದ ಶಲ್ವಾರುಗಳ ಮಧ್ಯೆ ಹಾರಾಡುತ್ತಿದ್ದ ಶಿಫಾನ್ ದುಪ್ಪಟ್ಟಾಗಳನ್ನು ಕಣ್ಣೊಳಗೆ ಹೀರಿಕೊಳ್ಳುತ್ತಿರುವಾಗಲೇ, ಅರೆ! ಇಲ್ಲಿಗೆ ಬಂದು ಅದೆಷ್ಟೋ ಕಾಲವಾಯಿತಲ್ಲ ಎಂದು ಮನಸ್ಸು ಆರೆಗಳಿಗೆ ಆಶ್ಚರ್ಯಿಸುತ್ತದೆ. ಘಮ್ಮೆನ್ನುವ ಮಸಾಲೆಯಲ್ಲಿ ಹದವಾಗಿ ಬೆಂದ ಹತ್ತು ಹಲವಾರು ತರದ ಮಾಂಸಗಳು, ಕಬಾಬ್‌ಗಳು ವಿಚಿತ್ರವಾದ ಕನವರಿಕೆ, ಹೇವರಿಕೆಗಳಲ್ಲಿ ಮನಸ್ಸನ್ನು ತೊಯ್ಯಿಸುತ್ತವೆ. ಹೊಟ್ಟೆಯಿಂದ ಉಬ್ಬರಿಸಿಕೊಂಡು ಬರುತ್ತಿದ್ದ ಗುಡುಗುಡುವನ್ನು ಆಲಿಸುತ್ತ 'ಕರಾಚಿ ಹೌಸ್' ಕಡೆ ಕಣ್ಣು ಹಾಯಿಸಿದರೆ, ಅದರ ಪುಟ್ಟ ಸೂರಿನಡಿಯೇ ಗಿಜಿಗುಡುತ್ತಿದ್ದ ಬಿಳಿಯರು, ಕರಿಯರು, ಭಾರತೀಯರು, ಪಾಕಿಸ್ತಾನಿಯರು ಕಣ್ಣಿಗೆ ಬೀಳುತ್ತಾರೆ.

ಹತ್ತಿರ ಸಾಗಿದ ಹಾಗೆ, ಗಾಜಿನ ಕಿಟಕಿಗಳ ಮೂಲಕ, ಕಂದು ಬಣ್ಣದವನೊಬ್ಬ ತನ್ನ ತಟ್ಟೆಯ ಮೇಲೆ ಬೆಕ್ಕಿನಂತೆ ಬಾಗಿ ಅಳಿದುಳಿದ ಮಸಾಲೆಪಲ್ಯವನ್ನು ಚಪಚಪನೆ ತಿನ್ನುತ್ತಿರುವುದು ಕಾಣಿಸುತ್ತದೆ. ಸುತ್ತಮುತ್ತಲ ತರಾವರಿ ಖಾದ್ಯಗಳಿಂದ ಹೊರಡುತ್ತಿದ್ದ ಬಿಸಿ ಹಬೆ ಗಾಜಿನ ಕಿಟಕಿಗಳನ್ನೆಲ್ಲ ಆವರಿಸಿ ಮಬ್ಬಾಗಿಸಿದ್ದರೂ ಅದರ ನಡುವೆಯೇ ಬಿಳಿಯ ಲೇಸಿನಲ್ಲಿ ಅಲಂಕಾರವಾಗಿದ್ದ ಬಿಳಿಯಳೊಬ್ಬಳು ಕಣ್ಣಿಗೆ ಬೀಳುತ್ತಾಳೆ. ಕೌಂಟರಿನಲ್ಲಿ ಕಾಯುತ್ತ ನಿಂತಿದ್ದ ತನ್ನ ಜೊತೆಗಾರನ ಕಡೆಗೆ ಆಗಾಗ್ಗೆ ಕಣ್ಣು ಹಾಯಿಸುತ್ತಿದ್ದಾಳೆ... ಕಳ್ಳರ ಮಧ್ಯೆ ಸಿಕ್ಕಿಬಿದ್ದಂತೆ, ಅಬ್ಬಾ! ಯಾವಾಗ ತಪ್ಪಿಸಿಕೊಂಡು ಹೋದೇನೋ ಎಂದು ತುದಿಗಾಲಲ್ಲಿ ನಿಂತಂತೆ. ನಡುವೆಯೇ ಫೋರ್ಕು ಚಮಚಾಗಳ ಸಹಾಯದಿಂದ ನಾನ್ ಕತ್ತರಿಸುತ್ತಾ ಪ್ರತಿಯೊಂದು ತುತ್ತಿಗೂ ಗ್ಲಾಸನ್ನೆತ್ತಿ ಗಟಗಟನೆ ನೀರು ಕುಡಿಯುತ್ತಿದ್ದಾಳೆ. ಮಕ್ಕಳು ಟೇಬಲ್ಲುಗಳ ನಡುವೆ ಗಿಲಿಗುಡುತ್ತಾ ಓಡಾಡುತ್ತಿದ್ದರೆ, ಅಮ್ಮಂದಿರ ಬುರ್ಖಾ ತಲೆಗಳು ಫ್ಯಾಮಿಲಿ ರೂಮಿನ ಪರದೆಗಳನ್ನು ಸರಿಸಿ ಆಗಾಗ್ಗೆ ಹಣಿಕಿ 'ಸಾಕಪ್ಪಾ ಸಾಕು!' ಎಂಬ ಸುಸ್ತಿನಲ್ಲಿ ಮಕ್ಕಳಿಗೆ ಹಿಂತಿರುಗಿ ಬರುವಂತೆ ಸನ್ನೆ ಮಾಡುತ್ತಿವೆ. ನಡುವೆಯೇ ವೇಟರುಗಳು ಬ್ರಿಟಿಷರ ನಾಲಗೆಗಳಡಿ 'ಭಾಜಿ-ಪಕೋಡಾ'ಗಳಾಗುವ ಖಾದ್ಯಗಳ ತಟ್ಟೆಗಳನ್ನು ಹೊತ್ತು ಚಾಕಚಕ್ಯತೆಯಿಂದ ಈ ಕಡೆ ಮಕ್ಕಳನ್ನು ಸರಿಸುತ್ತಾ ಆ ಕಡೆ ಎಲ್ಲಿಂದಲೋ ನುಸುಳಿದ್ದ ಹಡಬೆ ಬೆಕ್ಕೊಂದನ್ನು ಸಾವರಿಸುತ್ತಾ, ಓಡಾಡುತ್ತಿದ್ದಾರೆ.

ಬಾಗಿಲನ್ನು ತಳ್ಳುತ್ತಿರುವಾಗ ಅದರ ಮೇಲಿನ 'ನಾಯಿಗಳಿಗೆ ಪ್ರವೇಶವಿಲ್ಲ,' 'ಹಲಾಲ್ ಮಾತ್ರ' ಗಳ ಜೊತೆಯಲ್ಲೇ **'Bestest Takeway in Britain'** ಸಹ ಢಾಳಾಗಿ ಕಣ್ಣಿಗೆ ಹೊಡೆಯುತ್ತದೆ. ಬಾಗಿಲು ತೆರೆದು ಒಳಗೆ ಹೋಗುವಾಗ ಅದಕ್ಕೆ ಕೀಲಿಸಿದ್ದ ಘಂಟೆ ಕರ್ಕಶವಾಗಿ ಹೊಡೆದು ಗಿರಾಕಿ ಬಂದದ್ದನ್ನು ಸಾರುತ್ತದೆ.

ಘಂಟೆಯ ಸದ್ದಿಗೆ ಕತ್ತೆತ್ತಿದ ಕೌಂಟರಿನಲ್ಲಿದ್ದ ಮಾಲೀಕ, ನನ್ನ ಕಂದು ಬಣ್ಣದ ಚರ್ಮವನ್ನು, ಪಾಶ್ಚಾತ್ಯ ದಿರಿಸನ್ನೂ ಗುರುತಿಸಿ, ಹೌದೋ ಅಲ್ಲವೋ ಎಂಬ ಸಿಡುಕಿನಲ್ಲೇ ಎತ್ತಲೋ ನೋಡುವಂತೆ ನಟಿಸುತ್ತಾನೆ. ದಾರಿಯಲ್ಲಿ ಹಾದು ಹೋದ ವೇಟರೊಬ್ಬ ಯಾವುದೋ ಭಾರತೀಯ ಚಲನಚಿತ್ರದ ಪೋಲಿ ಹಾಡೊಂದನ್ನು ಸಣ್ಣದಾಗಿ ಗುನುಗಿದರೆ, ಇನ್ನೊಬ್ಬ ತಗ್ಗಿದ ದನಿಯಲ್ಲಿ ಸಿಳ್ಳು ಹೊಡೆಯುವಾಗ ಭಾರವಾದ ಜೀನ್ಸ್, ಜಾಕೆಟ್ಟುಗಳ ನಡುವೆಯೂ ಥಟ್ಟನೆ ಬೆತ್ತಲಾದ ಅನುಭವದಲ್ಲಿ ಬೆವರುತ್ತೇನೆ. ಛೆ?! ಇದು ಲಂಡನ್! ನೆನಪಿರಲಿ. ಇಲ್ಲಿ ಹೆಣ್ಣೊಬ್ಬಳು ಯಾವ ಉಡುಪನ್ನು ಬೇಕಾದರೂ ತೊಡಬಹುದು, ತನಗೆ ಬೇಕಾದ್ದು ಕೊಂಡುಕೊಳ್ಳಬಹುದು. ಇಷ್ಟಕ್ಕೂ ನನ್ನಂತೆಯೇ ಒಂಟಿಯಾಗಿ ಬಂದವರೂ ಇಲ್ಲಿ ಇರಬಹುದಲ್ಲ? ಎಂದುಕೊಳ್ಳುತ್ತಾ ಸುತ್ತಮುತ್ತ ಕಣ್ಣು ಹಾಯಿಸುತ್ತೇನೆ.

ಅಪ್ಪಟ ಶಲ್ವಾರ್ ಕುರ್ತಾ ತೊಟ್ಟ ಧಡೂತಿ ಹೆಂಗಸೊಬ್ಬಳು ಕಣ್ಣಿಗೆ ಬೀಳುತ್ತಾಳೆ. ತಲೆಗೂದಲನ್ನು ಮುಚ್ಚಿದ್ದ ಶಿಫಾನ್ ದುಪಟ್ಟಾ, ಭುಜದ ಸುತ್ತ ಭಾರವಾದ ಇನ್ನೊಂದು ಮೇಲುವಸ್ತ್ರ. ಆ ಕಡೆ, ಈ ಕಡೆ ಎರಡು ಮಕ್ಕಳು, ಮೂರನೆಯದು ಭುಜವನ್ನು ಆತುಕೊಂಡಿತ್ತು, ಅವಳೊಂದಿಗೆ ಯಾವ ಗಂಡಸೂ ಇರಲಿಲ್ಲ. ನನ್ನ ಹಿಂದೆ ಯುವತಿಯೊಬ್ಬಳು ನಿಂತಿದ್ದಳು. ಸ್ಟೂಡೆಂಟ್ ಇದ್ದಿರಬಹುದು. ಅವಳೂ ಜೀನ್ಸ್ ಹಾಕಿಕೊಂಡಿದ್ದಳು. ತಲೆಯ ಸುತ್ತ ಹಿಜಾಬ್ ಇತ್ತು.

"ನಿಮ್ಮ ಸರದಿ ಈಗ..." ಆಕೆ ಚುರುಕಾದ ಬ್ರಿಟಿಷ್ ಧಾಟಿಯಲ್ಲಿ ಹೇಳುತ್ತಾಳೆ. ಜಾಕೆಟ್ಟನ್ನು ಬಿಗಿಯಾಗಿ ಎಳೆದುಕೊಳ್ಳುತ್ತಾ ನನ್ನ ಹೈಹೀಲ್ಡ್ ಶೂಸಿನ ಕಾಲನ್ನು ಮುಂದೆ ಇಟ್ಟು "ಒಂದು ಬಿರಿಯಾನಿ, ಕೊಂಡೊಯ್ಯಲು" ಎಂದು ಹೇಳಿ ಕಾಯುತ್ತೇನೆ. ನನ್ನ ಉಚ್ಚಾರಣೆಯ ಶೈಲಿಯನ್ನೂ ಬಿಂದಿಯಿಲ್ಲದ ಹಣೆಯನ್ನೂ ಗಮನಿಸಿದ ಆತ ಬೇಕೆಂತಲೇ "ಇಂಡಿಯನ್?" ಎಂದು ಕೇಳುತ್ತಾನೆ. ಅಲ್ಲವೆಂದು ತಲೆಯಾಡಿಸುತ್ತೇನೆ. "ಬಾಂಗ್ಲಾ?" ತುಟಿಯ ಮೇಲೆ ಅದೇನೋ ಕೊಂಕು ನಗೆ ಬೀರಿ. ಮತ್ತೆ ತಲೆಯಾಡಿಸುತ್ತೇನೆ. ಬಿರಿಯಾನಿಯನ್ನು ಪ್ಯಾಕ್ ಮಾಡುತ್ತಾ "ನಿಮ್ಮ ಮಾತಿನ ಧಾಟಿ ಬ್ರಿಟಿಷ್ ತರ ಇಲ್ಲವಲ್ಲಾ...?" ಮಳ್ಳನಂತೆ ಕೇಳುತ್ತಾನೆ. ಕೊನೆಗೆ ನಾನೇ ಸೋತು "ನಾನು ಹುಟ್ಟಿದ್ದು ಪಾಕಿಸ್ತಾನದಲ್ಲಿ" ಎಂದು ಹೇಳಬೇಕಾಗುತ್ತದೆ.

"ಓ...?", ದೀರ್ಘವಾಗಿ ಉಸಿರು ಬಿಡುತ್ತಾ ನನ್ನ ಕೈಗೆ ಬಿರಿಯಾನಿಯ ಜೊತೆಗೆ ಕರಪತ್ರವೊಂದನ್ನೂ ತುರುಕುತ್ತಾನೆ.



ಹೊರಗೆ ಬಂದು ಜುಮುಗುಡುವ ಬಿಸಿಲಿಗೆ ಮೈಯೊಡ್ಡಿ ಹುಸಿದವಳಂತೆ ಉಸಿರೆಳೆದುಕೊಳ್ಳುತ್ತೇನೆ. ಹೆಜ್ಜೆ ಹಾಕಿದಂತೆ ಘಮ್ಮೆನ್ನುವ ಮಸಾಲೆ ನನ್ನ ಮೈಯನ್ನೂ ಆವರಿಸಿಕೊಳ್ಳುತ್ತದೆ. ಬೂದು ಬಣ್ಣದ ಮೋಡಗಳು ಸೂರ್ಯನನ್ನು ಮರೆಮಾಚಿವೆ. ಕತ್ತಲೆ ಇಡೀ ಬೀದಿಯನ್ನೇ ತಬ್ಬಿ ನಿಂತಂತೆ ಅರೆಗಳಿಗೆ ಅನ್ನಿಸುತ್ತದೆ. ಈಗಿನ್ನೂ ಮಧ್ಯಾಹ್ನದ ಎರಡು ಗಂಟೆ. ಆದರೆ ಲಂಡನ್ನಿನಲ್ಲಿ ಮಾತ್ರ ಅತ್ತ ರಾತ್ರಿಯೂ ಅಲ್ಲ, ಇತ್ತ ಹಗಲೂ ಅಲ್ಲ.

"ಇಲ್ಲಿಯ ಸೂರ್ಯನಿಗೆ ದಮ್ಮೇ ಇಲ್ಲ" ತನ್ನ ಬಿಳಿಯ ಗಡ್ಡವನ್ನು ನೀವಿಕೊಳ್ಳುತ್ತಾ ಆ ಅಂಗಡಿಯವ ಹೇಳುತ್ತಾನೆ. ಆಕಾಶ ನೋಡಿ ಮಾತಾಡುತ್ತಿದ್ದ ಅವನ ವರಸೆ ತನ್ನ ಮಾತು ಯಾರನ್ನೂ ಉದ್ದೇಶಿಸಿ ಹೇಳಿದ್ದಲ್ಲ ಎಂಬಂತಿರುತ್ತದೆ. ಅವನಂತೆ ಇಲ್ಲಿ ಹಲವರಿದ್ದಾರೆ. ತಮ್ಮ ಅಂಗಡಿಗಳ ಹೊರಗೆ ಒಂದೇ ಒಂದು ಸ್ಟೂಲ್ ಹಾಕಿಕೊಂಡು ಕೂತು, ಗಡ್ಡ ನೀವಿಕೊಳ್ಳುತ್ತಾ, ತಾವು ಮಾರುವ ಸರಕನ್ನು ಜಾಹೀರಾತುಗೊಳಿಸುತ್ತಾ, ಹಾದಿಹೋಕರೊಂದಿಗೆ ಲೋಕಾಭಿರಾಮ ಮಾತಿಗೆಳೆಸುವವರ ಗುಂಪು ಇದು. ಜನರಿಂದ ಗಿಜಿಗುಡುವ, ಲಾಹೋರಿನ, ಕರಾಚಿಯ ಜನನಿಬಿಡ ಬೀದಿಗಳಲ್ಲಿ ಮಾರಾಟಗಾರರು ತಾವು ಮಾರುವ ಬೆಲೆಯನ್ನೂ ಕಿರಿಚುತ್ತಿರುತ್ತಾರೆ. ಇಲ್ಲಿ ಹಾಗಲ್ಲ, ಗಿರಾಕಿಯ ಮುಖ ನೋಡಿಯೇ ಮಣೆ. ಕೊಳಕುಗಾರ ಬಡವ ನಿರಾಶ್ರಿತರಿಗಾದರೆ ಒಂದು ಪೌಂಡು. ತಮ್ಮ ಬರವಿನಿಂದಲೇ ಅಂಗಡಿಗಳನ್ನು ಗಬ್ಬೆಬ್ಬಿಸುವ ಕರಿಯರಿಗಾದರೆ ಐವತ್ತು ಪೌಂಡು. ದೇವರನ್ನು ನಂಬದ ನಾಸ್ತಿಕ ಭಾರತೀಯರಿಗೆ "ಚೌಕಾಸಿ ಇಲ್ಲ, ಒಂದೇ ಬೆಲೆ." ಇಷ್ಟಕ್ಕೂ ಈ ಚೌಕಾಸಿಗಾರರು ಬೇಕಿದ್ದರೆ ಸೌತಾಲ್‌ಗೆ ಹೋಗಿ ಅವರ ಮಹಾ ದಗಾಕೋರ ಸಿಖ್ ಸಹೋದರರಿಂದಲೇ ಕೊಂಡುಕೊಳ್ಳಲಿ! ಬೇಡಾ ಎಂದವರು ಯಾರು? ಮತ್ತೆ ತಮ್ಮ ಬಿಳಿಯ ಸಾಹೇಬರಿಗಾದರೆ, "ಎಷ್ಟು ಕೊಡಬೇಕೆನ್ನಿಸಿತ್ತೋ ಅಷ್ಟೇ ಕೊಡಿ ಸರ್ ಜೀ!" ಒಟ್ಟಲ್ಲಿ ಇಲ್ಲಿ ಯಾವುದೂ ಬಿಟ್ಟಿಯಲ್ಲ, ಹಾಗಂತ ಎಲ್ಲ ಬಿಳಿಯರೂ ಒಂದೇ ಅಲ್ಲ, ಅವರಲ್ಲೂ ಬೇರೆ ಬೇರೆ ತರದವರಿದ್ದಾರೆ. 'ಬಿಳಿ ಶರಟಿನವರು' ಕಷ್ಟಪಟ್ಟು ದುಡಿಯುವ, ಆಗಾಗ್ಗೆ ಘಮ್ಮೆನ್ನುವ ಮಸಾಲೆ ಮಾಂಸವನ್ನು ಚಪ್ಪರಿಸುವ ಒಳ್ಳೆ ಜನ. ಬೀದಿ ಅಲೆಯುತ್ತಾ, ಎದುರು ಬಂದವರ ಕಣ್ಣಲ್ಲಿ ಕಣ್ಣಿಟ್ಟು ನೋಡುವ, ಕೆಣಕಲು ಯಾವನಾದರೊಬ್ಬ 'ಪಾಕಿ' ಸಿಗುತ್ತಾನಾ ಎಂದು ಅರಸುವವರು 'ಬಿಳಿ ಕೊಳಕರು.' ಗಲಾಟೆಯೆಲ್ಲ ಮುಗಿದ ಮೇಲೆ 'ವರ್ಣಭೇದವರ್ತನೆ' ಎಂದು ಬೊಬ್ಬೆ ಹೊಡೆಯಬಹುದೇನೋ ಸರಿ! ಆದರೆ ಸತ್ತ ನಿಮ್ಮ ಮಗ ಎದ್ದು ಬರಲು ಸಾಧ್ಯವಿಲ್ಲವಲ್ಲ? ಅದಕ್ಕೇ ಆ 'ಬಿಳಿ ಕೊಳಕ'ರನ್ನು ಕಂಡರೆ ಈ ಅಂಗಡಿಯವರಿಗೆ ಮಹಾ ಭಯ. ಬೇರೆ ಯಾರು ಬಂದರೂ ಪರವಾಗಿಲ್ಲ, ಇವರು ಮಾತ್ರ ಬೇಡ.

ಈ ಅಂಗಡಿದಾರರಿಗೆ ಇಷ್ಟವಾಗದ ಇನ್ನೊಂದು ಗುಂಪಿದೆ. ಅವರೇ 'ನಮ್ಮೊಳಗಿನ ಶತ್ರು'ಗಳು, ಇತ್ತೀಚೆಗೆ ಪಾಕಿಸ್ತಾನದಿಂದ ಬರುತ್ತಿರುವ ಚಮಕ್ ಜನ. ದುಡ್ಡಿದೆ, ಓದಿದ್ದಾರೆ. ಜೀನ್ಸು, ಜಾಕೆಟ್ಟುಗಳನ್ನು ಹಾಕಿಕೊಂಡು ಇಂಗ್ಲಿಷಲ್ಲಿ ವಾಲಾಡುತ್ತಾ ಹೋಗುತ್ತಾರೆ. ಅದೇ, ಇಲ್ಲಿಯವರೊಂದಿಗೆ ಬೆರೆತು ಬಾಳಬೇಕು ಎಂಬ ನಿಲುವಿನ ಮಂದಿ.

ಕಸದತೊಟ್ಟಿಯ ಹತ್ತಿರ ಬಂದಾಗ ಪೇಪರ್ ಬ್ಯಾಗಿನೊಳಗಿಂದ ಆ ಕರಪತ್ರವನ್ನು ಹೊರಗೆಳೆಯುತ್ತೇನೆ. ಅದರಲ್ಲಿರುವುದು ನನಗೆ ಗೊತ್ತಿಲ್ಲ ಅಂತಲ್ಲ. ಇಸ್ಲಾಂ ಧರ್ಮದ ಕರೆಗೆ ಓಗೊಡಿ ಸಹೋದರಿಯರೆ! ಸತ್ಯವನ್ನು ಕಂಡುಕೊಳ್ಳಿ! ಹಿಜಾಬ್ ಧರಿಸಿ! ಯಾರೋ ಸದಾ ಅಭದ್ರ ಭಾವನೆಯಿಂದ ನರಳುವ ಗಂಡುಪ್ರಾಣಿಯಿರಬೇಕು. ಆ ಪ್ರಾಣಿಗೆ 'ಸಕಲವನ್ನೂ ಬಲ್ಲ, ತಾನೇ ಸದಾ ಸರಿಯೆಂದು ಭಾವಿಸುವ ಮುಲ್ಲಾ' ಎಂಬ ನಾಮಾಂಕಿತವೂ ಇದೆ. ಕರಪತ್ರವನ್ನು ಹೊರಗೆಳೆದು ಕಸದತೊಟ್ಟಿಗೆ ಎಸೆಯುವ ಮುನ್ನ ಕೈಯೊಮ್ಮೆ ನಡುಗುತ್ತದೆ. ಕರಾಚಿಯ ದಿನಗಳಲ್ಲಿ ಮನೆಯ ಮೇಲೆ ಆಟವಾಡುತ್ತಿದ್ದಾಗ ಅಮ್ಮ ಹೇಳುತ್ತಿದ್ದ 'ಅಲ್ಲಾನ ಹೆಸರಿದ್ದ ಏನನ್ನೂ ಕಸದ ತೊಟ್ಟಿಗೆಸೆಯುವುದು ಮಹಾಪಾಪ!' ಎಂಬ ಮಾತುಗಳು ಮನಸಿನಲ್ಲಿ ಮರುಕಳಿಸುತ್ತವೆ. ಕೈ ತಡೆದಂತಾಗುತ್ತದೆ. ನಿಟ್ಟುಸಿರೊಂದು ಹೊರಹೊಮ್ಮುತ್ತದೆ. ಛೆ! ನಾನೀಗ ಇರುವುದು ಮನೆಯಿಂದ ದೂರ. ಲಂಡನ್ನಿನಲ್ಲಿ, ಊರಲ್ಲಿ ಯಾರು ಏನಂದುಕೊಳ್ಳುತ್ತಾರೆ ಎಂಬುದರ ಬಗ್ಗೆ ನಾನೇಕೆ ತಲೆಕೆಡಿಸಿಕೊಳ್ಳಬೇಕು ಎಂಬ ನಿಲುವನ್ನು ತಲುಪಿದವಳು. ಆದರೂ ಯಕಶ್ಚಿತ್ ಒಂದು ಕಾಗದದ ತುಣುಕನ್ನು ಬಿಸಾಡುವುದು ನನ್ನ ಕೈಯಿಂದ ಆಗುತ್ತಿಲ್ಲವಲ್ಲ! ಇನ್ನು ಕೆಲವು ದಿನಗಳು ನನ್ನನ್ನು ಕಾಡುವ ವಿಷಯವೇನೆಂದು ನನಗೆ ಚೆನ್ನಾಗಿ ಗೊತ್ತು. ಜೋಪಾನವಾಗಿ ಮಡಿಸಿ ಜೇಬಲ್ಲಿಟ್ಟುಕೊಂಡಿರುವ ಕಾಗದದ ತುಣುಕನ್ನು ತೇಲಿಬಿಡಲು ಹರಿಯುತ್ತಿರುವ ನೀರನ್ನೇ ಅರಸುತ್ತಿರುತ್ತೇನೆ. ದೇವರ ಹೆಸರಿರುವ ಏನನ್ನೂ ವಿಸರ್ಜಿಸಬೇಕೆಂದರೆ ಅದೇ ಸೂಕ್ತ ಹಾದಿಯಂತೆ. ಬಟ್ಟೆನೆಂದರೂ ಬಿಡದ ಎಷ್ಟೋ ಕರೆಗಳಂತೆ ಈ ನಂಬಿಕೆಯೂ ನನ್ನ ಮನಸ್ಸಿನ ಮೂಲೆಯಲ್ಲೆಲ್ಲೋ ಗಪ್ಪಂತ ಕುಳಿತುಬಿಟ್ಟಿದೆ. ದೇವರು, ದೇವರ ಭಯ, ದೈವಿಕ ಕೋಪ ಇತ್ಯಾದಿ ಎಷ್ಟೋ ನಂಬಿಕೆಗಳನ್ನು ಮನಸ್ಸಿನಿಂದ ತೊಡೆದು ಹಾಕಿಕೊಂಡಿದ್ದೇನೆ ಎಂದು ಬೀಗಿದ್ದೆನಲ್ಲ! ವೈನ್ ಚಪ್ಪರಿಸಿದಾಗ 'ಹರಾಮ್' ಪರಿಕಲ್ಪನೆಯೆಲ್ಲ ಸುಪ್ತಪ್ರಜ್ಞೆಯ ಕಂದರದಲ್ಲೆಲ್ಲೋ ಜಾರಿಹೋಗಿತ್ತು. ಕ್ಲಬ್ಬಿನಲ್ಲಿ ಕರ್ಮ ನೃತ್ಯದ ತಾಳಕ್ಕೆ ಹೆಜ್ಜೆ ಹಾಕಿ ಕುಣಿದು ನನ್ನನ್ನೇ ಮರೆತಾಗ ಸಂಗೀತವೆನ್ನುವುದು ಪಾಪದ ನಿಕಟ ಜೊತೆಗಾರನೆಂಬ ಪಾಠ ಹಿಂದು ಹಿಂದಕ್ಕೆ ಸರಿದು ಮಾಯವಾಗಿತ್ತು. ಮೆಕ್ ಡೊನಾಲ್ಡ್ಸ ಮತ್ತು ಬರ್ಗರ್ ಕಿಂಗನ ಫಾಸ್ಟ್ ಫುಡ್ಡುಗಳು 'ಹಲಾಲ್ ಮಾತ್ರ' ದಿಂದ ಬರುತ್ತಿದ್ದ ಟರ್ಕಿಶ್ ಬರ್ಗರುಗಳನ್ನು ಹೊರದಬ್ಬಿದಂತೆಯೇ ಜೀನ್ಸ್ ಮತ್ತು ಕುರ್ತಾಗಳು ನಿಧಾನವಾಗಿ ಶಾರ್ಟ್ಸ್ ಮತ್ತು ಗಿಡ್ಡ ಟಾಪುಗಳಿಗೆ ದಾರಿ ಬಿಟ್ಟಿದ್ದವು.

ಸ್ಟೈಲಾದ ಕುರ್ತಾಗಳನ್ನು ತೊಟ್ಟು ಕಪ್ಪು ಸ್ಕಾರ್ಫುಗಳಿಂದ ಅಲಂಕೃತರಾದ ಹುಡುಗಿಯರ ಗುಂಪೊಂದು ಹಾದು ಹೋಗುತ್ತದೆ. ನನ್ನನ್ನು ನೋಡುತ್ತಾ ನಾಚಿಕೆಯಿಂದ ಕಿಲಕಿಲಿ ನಕ್ಕೊಂಡು ಹೋದರಲ್ಲ! ನನ್ನ ಮೇಲಿನ ಮರುಕದಿಂದಲೆ? ಅಥವಾ ಅಸೂಯೆಯಿಂದಲೆ?

ಅಲ್ಲೇ ಸ್ವಲ್ಪ ಹೊತ್ತು ನಿಂತಿದ್ದೆನೋ ಏನೋ. ಬಿಳಿಯನೊಬ್ಬ ನನ್ನ ಕಡೆ ಬರುತ್ತಿರುವುದು ಕಾಣಿಸುತ್ತದೆ. ಲಂಡನ್ನಿನ ಈ ಭಾಗದಲ್ಲಿ ಸ್ಥಳೀಯರು ಅವನನ್ನು 'ಫಾರಿನರ್' ಎಂದು ಕರೆಯುತ್ತಾರೆ. ದಾರಿ ತಪ್ಪಿಹೋಯಿತೆ? ಎಂದು ಕೇಳುತ್ತಿದ್ದಾನೆ. ಹ್ಞಂ! ದಾರಿ ತಪ್ಪಿ ಬೆಪ್ಪಾಗಿ ನಿಂತೆನೆ? ಕಣ್ಣು ಪಿಳಿಪಿಳಿ ಬಿಡುತ್ತಾ ಅವನನ್ನೇ ನೋಡುತ್ತೇನೆ. ನನಗೆ ಇಂಗ್ಲಿಷ್ ಅರ್ಥವಾಗುವುದಿಲ್ಲ ಎಂದುಕೊಂಡ ಅವ ಮತ್ತೆ ನಿಧಾನವಾಗಿ, ಬಿಡಿಬಿಡಿಯಾಗಿ ಕೇಳುತ್ತಾನೆ — ದಾರಿ ತಪ್ಪಿದೆನೆ?

ಮತ್ತೆ ಹಾದಿಗುಂಟ ನನ್ನ ಕಣ್ಣು ಹಾಯುತ್ತದೆ. ಯುವ ವಯಸ್ಸಿನ ಹುಡುಗರ ಗುಂಪೊಂದು ಹಾದಿಬೀದಿಯಲ್ಲಿ ಹೋಗುತ್ತಿರುವರಿಗೆ ಕರಪತ್ರಗಳನ್ನು ಹಂಚುತ್ತಿದೆ. ಯಹೂದಿಗಳ ವಿರುದ್ಧ ಹೋರಾಡಲು ಕರೆ ನೀಡುತ್ತಿದೆ. "ಪ್ಯಾಲೆಸ್ತೀನಿನಲ್ಲಿ ಯುದ್ಧ ನಿಲ್ಲಬೇಕು! ಇರಾಕಿನಲ್ಲಿ ಯುದ್ಧ ಕೊನೆಗಾಣಬೇಕು! ನಮ್ಮ ಮುಸ್ಲಿಮ್ ಸಹೋದರರ ಹತ್ಯೆ ನಿಲ್ಲಬೇಕು!"

"ದಾರಿ ತಪ್ಪಿದವಳು ನಾನಲ್ಲ" ಎಂದು ಹೇಳಿ ಮುನ್ನಡೆಯುತ್ತೇನೆ. ಕಕ್ಕಾಬಿಕ್ಕಿಯಾದ ಬಿಳಿಯ ತಲೆ ಕೊಡವಿ ಮತ್ತೆ ತನ್ನ ಅಂಗಡಿಯ ಕಡೆಗೆ ಹೆಜ್ಜೆ ಹಾಕುತ್ತಾನೆ.

ಆ ಹುಡುಗರನ್ನು ಹಾದು ಹೋಗುವಾಗ ಅವರ ಚರ್ಯೆಯಲ್ಲಿ ಅರಬ್ ಅಂಶ ಎಲ್ಲಿದೆ ಎಂದು ಹುಡುಕಲು ಪ್ರಯತ್ನಿಸುತ್ತೇನೆ. "ಅಕ್ಕಾ, ನಮ್ಮ ಪ್ಯಾಲೆಸ್ತೀನ್ ಸಹೋದರರ ಒಳಿತಿಗೆ ಧನಸಹಾಯ ಮಾಡಿ" ಎಂದು ಬ್ರಿಟಿಷ್ ಉಚ್ಚಾರಣೆ ಜಿನುಗುತ್ತಿದ್ದ ಧ್ವನಿಯಲ್ಲಿ ಅವರಲ್ಲೊಬ್ಬ ಕೇಳಿಕೊಳ್ಳುತ್ತಾನೆ. ಅವನ ಗೋಧಿ ಪಾಕಿಸ್ತಾನಿ ಮೈಬಣ್ಣ ಬೂದುಬಣ್ಣದ ಗಡ್ಡ ಪ್ರಾರ್ಥನಾ ಟೊಪ್ಪಿ ಎಲ್ಲವೂ ಬೆನ್ನು ಹುರಿಯಲ್ಲಿ ಚಳಿ ಹುಟ್ಟಿಸುತ್ತಿವೆಯೇನೋ ಎಂದೆನಿಸುತ್ತದೆ. ನನ್ನ ಜೊತೆ ಮಾತಾಡುವಾಗ ಅವನ ದೃಷ್ಟಿ ನೆಲಕ್ಕೆ ಕೀಲಿಸಿರುತ್ತದೆ.

ನನ್ನದಲ್ಲದ ಹೋರಾಟವನ್ನು ನಾನ್ಯಾಕೆ ಬೆಂಬಲಿಸಬೇಕು? ಸುಮ್ಮನೆ ದೂರ ಉಳಿದು, ನನ್ನ ಪಾಡಿಗೆ ಇರೋಣವೆನ್ನಿಸುತ್ತದೆ. ಹೊಸದಾಗಿ ಬ್ರಿಟಿಷ್ ಪಾಸ್‌ಪೋರ್ಟ್ ದಕ್ಕಿಸಿಕೊಂಡಿರುವ, ಲಂಡನ್ನಿಗೆ ಬರುತ್ತಿರುವ ಮೊದಲ ಪೀಳಿಗೆಯ ವ್ಯಕ್ತಿ ನಾನು ಎಂದೆಲ್ಲ ಕಲ್ಪಿಸಿಕೊಳ್ಳಬೇಕೆನಿಸುತ್ತದೆ. ಆಮೇಲೆ ನಾನೊಬ್ಬ ಮುಸ್ಲಿಮ್, ತುಂಬ ಆಮೇಲೆ ನಾನೊಬ್ಬ ಹೆಣ್ಣು.

ಇಲ್ಲಿ, ಟೂಟಿಂಗ್‌ನಲ್ಲಿ, ಅಂತಹ ಕಲ್ಪನೆಗೆ ಅವಕಾಶವೆಲ್ಲಿ? ಕಿವಿಗೆ ಹೊಡೆಯುವ ಪಂಜಾಬಿ, ಉರ್ದು ಮಾತುಗಳು, ರಂಗುರಂಗಿನ ಮೇಲುವಸ್ತ್ರಗಳು, ಘಮಗುಡುವ ಮಸಾಲೆಪಲ್ಯಗಳು, 'ಯುದ್ಧವನ್ನು ನಿಲ್ಲಿಸಿ' ಎಂಬ ಘೋಷಣೆಗಳು, ಜೊತೆಗೆ, ಹತ್ತಿರದ ಮಸೀದಿಯಿಂದ ಪ್ರಾರ್ಥನೆಗೆ ಕರೆ ನೀಡುತ್ತಿರುವ ಮುಲ್ಲಾನ ಘಾಟು ಧ್ವನಿ. ಇಲ್ಲಿ, ವರ್ತಮಾನವನ್ನು ಮರೆಯುವುದಾದರೂ ಹೇಗೆ?

ಸಾವರಿಸಿಕೊಳ್ಳುವ ಪ್ರಯತ್ನದಲ್ಲಿ ನನ್ನ ಕೋಟಿನ ಎಡಗಡೆಯ ಜೇಬನ್ನು ತಡಕಾಡುತ್ತೇನೆ. ಅಬ್ಬ! ನನ್ನ ಪಾಸ್‌ಪೋರ್ಟು ಇದ್ದಲ್ಲಿಯೇ ಇದೆ. ಪ್ರವೇಶ ನಿಷೇಧ ಎಂದು ಹಾಕಿದ ಕಡೆಯೆಲ್ಲ ಬಾಗಿಲು ತೆರೆಸಿ ಒಳಗೆ ಕೊಂಡೊಯ್ಯುವ ರಹದಾರಿ ಪತ್ರ! 'ಅರೇಬಿಯನ್ ನೈಟ್ಸ್' ಕತೆಯ ಹಾರಾಡುವ ನೆಲಗಂಬಳಿ ಎಲ್ಲೆಂದರಲ್ಲಿ ಕರೆದೊಯ್ಯುತ್ತಲ್ಲ ಹಾಗೆ ಮುಚ್ಚಿದ ಬಾಗಿಲುಗಳನ್ನು ತೆರೆಸುವ ಪವಾಡಪತ್ರ ಇದು. ನಾನು ಇನ್ನೆಂದೂ 'ಪಾಕಿ'ಯಲ್ಲ, ರಾಷ್ಟ್ರೀಯತೆ ಎಂಬ ಕಲಮಿನಲ್ಲಿ ಬ್ರಿಟಿಷ್ ಎಂದು ಧೈರ್ಯವಾಗಿ ಬರೆಯಬಲ್ಲೆ. ಆದರೂ "ಎಲ್ಲಿಂದ ಬಂದದ್ದು?" ಎಂದು ಕೇಳೇ ಕೇಳುತ್ತಾರಲ್ಲ? ಅವರ ಮಾತಿನ ಧಾಟಿ ನನ್ನನ್ನು ಬೆಬ್ಬೆ ಅನ್ನುವಂತೆ ಮಾಡುತ್ತದೆ. ನನ್ನ ಉಚ್ಚಾರಣೆ ಅವರ ಮುಖ ಕಿವಿಚಿಸುತ್ತಲ್ಲ? ಹಾಗೆಯೇ. ಇಷ್ಟಕ್ಕೂ ನನಗೆ ಸ್ಕ್ಯಾನ್ ತಿನ್ನುವುದು ಹೇಗೆ ಎಂದು ಗೊತ್ತಿಲ್ಲ, ಮಾರ್ಮೈಟ್ ಮಹಾ ರುಚಿಯಂತೆ. ಕಟ್ಟಿಕೊಂಡು ನನಗೇನಾಗಬೇಕು? ಫುಟ್‌ಬಾಲ್ ಎಂತಹ ಅದ್ಭುತ ಆಟ ಆಡಿದರೂ ನನಗೆ ಬೇಕಾಗಿಲ್ಲ. ಇಷ್ಟಕ್ಕೂ ಹುರಿದ ಈರುಳ್ಳಿ ಸುರುಳಿಗಳಿಗೆ, ಹೊಸ ಹೊಸ ಮಾದರಿಯ ಶಲ್ವಾರುಗಳಿಗೆ, ಸ್ಟಾರ್ ಪ್ಲಸ್‌ನಲ್ಲಿ ಬರುವ ಅತ್ತೆ ಸೊಸೆಯರ ಗೋಳು ಧಾರಾವಾಹಿಗಳಿಗೆ ನಾನೆಂದಾದರೂ ತಲೆ ಕೆಡಿಸಿಕೊಂಡಿದ್ದೇನೆಯೆ?

ಬದುಕು ಅಡ್ಡಡ್ಡ, ಉದ್ದುದ್ದ ಹಾಯುವ ಗೆರೆಗಳ ನಡುವಿನಲ್ಲಿ ಸಿಕ್ಕಿಹಾಕಿಕೊಂಡಿದೆಯೇನೋ ಎಂದೆನಿಸುತ್ತದೆ. ಪೂರ್ವ, ಪಶ್ಚಿಮ, ಪಾಕಿಸ್ತಾನ್, ಬ್ರಿಟನ್, ಪಾಕಿ, ಪಾಕಿ-ಬ್ರಿಟಿಷ್, ಬ್ರಿಟಿಷ್-ಪಾಕಿ, ಬ್ರಿಟಿಷ್ ಯಾವುದಾದರೊಂದನ್ನು ಅಥವಾ ನನ್ನಂತೆ ಎರಡನ್ನೂ ಆಯ್ದುಕೊಳ್ಳುವ ಗೊಂದಲವೇ ಬೇಡವೆಂದೋ ಏನೋ, ಕ್ಯಾಂಪಸ್ಸಿನಲ್ಲಿರುವ ವಿದ್ಯಾರ್ಥಿಗಳು ತಮ್ಮನ್ನು ಮುಸ್ಲಿಮರೆಂದು ಮಾತ್ರ

...ರುತಿಸಿಕೊಳ್ಳುತ್ತಾರೆ. ನನ್ನ ಅಮ್ಮ ಹೇಳುತ್ತಿದ್ದಂತೆ ಎರಡು ...ೋಣೆಯಲ್ಲಿ ಕಾಲಿಟ್ಟು ಸಾಗುವ ಸಾಹಸ ನನ್ನದು. ಅಥವಾ ...ಯೊಯ ಭಾರವೇ ಬೇಡವೆಂದು ಅರ್ಧಗೋಡೆಯ ಮೇಲಿನ ...ಷದ ಸ್ಕೈಗೆ ಜೋತುಬೀಳುವ ಇರಾದೆಯೋ ಏನೋ. ...ತೆಜೊತೆಯಲ್ಲೇ ನಾನು ಎರಡೂ ಯಾಕಾಗಿರಲು ...ಧ್ಯವಿಲ್ಲಾರದು ಎಂದು ಯೋಚಿಸುತ್ತಾ ಹುಬೀಟ್ ಬ್ಯಾಂಕಿನ ...ಟಿಂಗ್ ಬ್ರಾಂಚನ್ನು ದಾಟುತ್ತೇನೆ. ಕಣ್ಣಿಗೆ ಢಾಳಾಗಿ ...ಡೆಯುವ ಶಬನಮ್ ಬ್ಯೂಟಿ ಪಾರ್ಲರ್ ಕಾಣಿಸುತ್ತದೆ. ...ಬ್ಬು ತೀಳಿಸಿಕೊಂಡು ತಿದ್ದಿಕೊಳ್ಳಲು ಅದರ ಒಳ ...ೊಕ್ಕುತ್ತೇನೆ. ಸೆಂಟ್ರಲ್ ಲಂಡನ್ನಿನ ಪಾರ್ಲರುಗಳಲ್ಲಿ ...ರ್ಜಗ್ಗರಂತೆ ಕಾಣುವ ಬ್ಯೂಟಿಶಿಯನ್ನರ ಕೈಲಿ ಹುಬ್ಬು ...ಳಿಸಿಕೊಳ್ಳಲು ನನಗಿನ್ನೂ ಸಾಧ್ಯವಾಗಿಲ್ಲ.

ಶಬನಮ್ ಬ್ಯೂಟಿ ಪಾರ್ಲರ್ ತುಂಬ ಮಕ್ಕಳನ್ನು ...ಯಾಗಿ ತೊಡೆಯ ಮೇಲೆ ಕೂರಿಸಿಕೊಂಡು ಕೂದಲನ್ನು ...ಮಾಡಿಸಿಕೊಳ್ಳುತ್ತಿದ್ದ ಹೆಂಗಸರು ತುಂಬಿರುತ್ತಾರೆ. ಎತ್ತರದ ...ೋಡೆಗಳುದ್ದಗಲಕ್ಕೆ ರೀಮಾ, ಮೀರಾ, ಮಾಧುರಿಯರು ...ಜಗಾತ್ರದ ಪೋಸ್ಟರುಗಳಲ್ಲಿ ಘಳ್ ಎನ್ನುವ ನಗು ...ರುತ್ತಿರುತ್ತಾರೆ. ಚಾರ್ಲಿ ಪರ್ ಫ್ಯೂಮಿನ ಜೊತೆಗೆ ...ಲ್ಲಿಮಾರ್ ಅಗರಬತ್ತಿಯ ಸುವಾಸನೆ ಸೇರಿಕೊಂಡು ವಿಚಿತ್ರ ...ಮಟನ್ನು ಹೊಮ್ಮಿಸುತ್ತಿರುತ್ತದೆ. ಎಲ್ಲೋ ಮೂಲೆಯಲ್ಲಿ ...ರಿಕೊಂಡಿದ್ದ ಕ್ಯಾಸೆಟ್ ಪ್ಲೇಯರಿನಿಂದ ಇತ್ತೀಚಿನ ...ರತೀಯ ಚಲನಚಿತ್ರಗಳ ಹಾಡುಗಳು ಅರಚುತ್ತಿರುತ್ತವೆ. ...ಲಿ ಬಣ್ಣದ ಕಾಂಟ್ಯಾಕ್ಟ್ ಲೆನ್ಸ್ ಧರಿಸಿ, ಕೂದಲನ್ನು ...ಳಿಚಿದ ಹೊನ್ನ ಬಣ್ಣಕ್ಕೆ ತಿರುಗಿಸಿಕೊಂಡಿದ್ದ ...ಡುಗಿಯೊಬ್ಬಳು ಎದ್ದ ತಕ್ಷಣವೇ ಬಿರ್ರನೆ ಆ ಕುರ್ಚಿಯೆಡೆಗೆ ...ಜ್ಜೆ ಹಾಕುತ್ತೇನೆ. ಬಿಗಿಯಾದ ಜೀನ್ಸ್ ತೊಟ್ಟು, ಮೇಲೊಂದು ಕೆಂಪು ಬಣ್ಣದ ಟಾಪ್ ಧರಿಸಿದ ಆ ಹುಡುಗಿ ...ೂಟಿ ಪಾರ್ಲರಿನ ಮಾಲೀಕಳ ಎರಡೂ ಕೆನ್ನೆಗೆ ಮುತ್ತಿಟ್ಟು, ...ನ್ನ ಅಬಯಾವನ್ನು ಹತ್ತಿಕೊಂಡು, ಬಬಲ್ ಗಮ್ ...ಗಿಯುತ್ತಾ ಯಾರೊಂದಿಗೋ ಮೊಬೈಲಿನಲ್ಲಿ ಜೋರು ...ನಿಯಲ್ಲಿ ಮಾತಾಡುತ್ತಾ ಹೊರಟರೆ, ಹಿಂದೆಯೇ ...ರ್ಲರಿನೊಳಗೆ ಗುಸಗುಸ ಪ್ರಾರಂಭವಾಗುತ್ತದೆ. "ಒಳಗೆ ...ವಳು ಹಾಕಿಕೊಂಡಿರುವುದು ಏನು ಅಂತ ಅವಳಣ್ಣನಿಗೆ ...ೊತ್ತಾದರೆ ಅವಳ ಗತಿ ಅಷ್ಟೇ!" ಎನ್ನುತ್ತಾಳೆ ಒಬ್ಬಳು. ಮುಂದಿನ ಗಿರಾಕಿಯನ್ನು ಕರೆಯಲು ಮಾಲೀಕಿನಿ ಮೋತಿಯಾ ...ಳಗಿನ ಕೋಣೆಯಿಂದ ಎದ್ದು ಬಂದಾಗ ಉಳಿದವರೆಲ್ಲ ...ವಳನ್ನು ಹುಶ್ ಹುಶ್ ಎಂದು ಸುಮ್ಮನಾಗಿಸುತ್ತಾರೆ.

ಈ ಮೋತಿಯಾ ನನಗೆ ಇಷ್ಟವಾಗುತ್ತಾಳಪ್ಪ. ಮದುವೆಯ ಘನಘೋರ ಹಿಂಸೆಯನ್ನು ತಡೆಯಲಾಗದೆ ...ಕ್ಕೆ ಲಾಹೋರಿನಿಂದ ತಪ್ಪಿಸಿಕೊಂಡು ಬಂದಿದ್ದಳು. ಈ ...ರ್ಲರ್ ಅಲ್ಲದೆ 'ಮೈ ಫೇರ್ ಲೇಡಿ ಸ್ಟಾರಿ' ಮತ್ತು ...ಕ್ಕದಲ್ಲಿಯೇ ಇದ್ದ ಫ್ಯಾಬ್ರಿಕ್ ಅಂಗಡಿಯ ಮಾಲೀಕರಾದ ...ವಳ ಅಣ್ಣ, ಅತ್ತಿಗೆಯರು ಅವಳಿಗೆ ಇನ್ನೊಂದು ಮದುವೆ ಮಾಡಿಸಲು ಪ್ರಯತ್ನಿಸಿ ಸೋತಿದ್ದರು. ಮೋತಿಯಾ ಯಾರ ...ಗ್ಗೆಯೂ ಕೇರ್ ಮಾಡಿದವಳೇ ಅಲ್ಲ, ತನ್ನ ಬಗ್ಗೆ ಯಾರಿಗೂ ...ಜವಾದ ಕಾಳಜಿ ಇಲ್ಲ ಎಂದು ಗೊತ್ತಿದ್ದವಳು. "ಆ ...ಡ್ಡಧಾರಿ ಮೂರ್ಖರು ಹೇಳುತ್ತಾರೆ ಅಂತ ಬುರ್ಖಾ ...ೊಡಲು ನನಗೇನು ತಲೆ ಕೆಟ್ಟಿದೆಯೆ?" ಮಂಡಿಯ ...ಳಗೆ ಮೇಣದ ಹೊದಿಕೆಯನ್ನು ಹರಡುತ್ತಾ ಅಪಹಾಸ್ಯದ ...ಧ್ವನಿಯಲ್ಲಿ ಕೇಳುತ್ತಿದ್ದಳು. "ನನ್ನ ಗಂಡ ದನ ಬಡಿಯುವಂತೆ ...ಡಿಯುತ್ತಿದ್ದಾಗ ಸಾಯಲಿ ಅಂತ ಸುಮ್ಮನಿದ್ದರಲ್ಲಾ ಈ ...ದ್ದಿಗಳು?" ಮೇಣದ ಹೊದಿಕೆಯನ್ನು ಬಲವಾಗಿ ಒತ್ತುತ್ತಾ ...ಳುತ್ತಿದ್ದಳು. ತಮ್ಮ ಕಚ್ಚೆಯನ್ನು ಭದ್ರವಾಗಿಟ್ಟುಕೊಳ್ಳಲಾಗದ ಈ ಗಡ್ಡಾಗಳು ಬಡಪಾಯಿ ಹೆಂಗಸರ ತಲೆ ಮೇಲೆ ...ೂಬೆ ಕೂರಿಸಿಬಿಟ್ಟರೆ? ಅಂತೆಲ್ಲ ಮಾತಾಡುತ್ತಾ ಮೇಣದ ಹೊದಿಕೆಯನ್ನು ಫಟಾರನೆ ಕಿತ್ತಾಗ ನೀವು "ಔಚ್!" ...ಂದು ಕಿರುಚದಿದ್ದರೆ ಕೇಳಿ. ತೆಗೆದ ಬಗಿದ ಎಂಬಂತೆ ಮಾತಾಡುವ ಅವಳ ಭಾಷೆಯನ್ನು ಕೇಳಿದ ಯಾವ ಗಂಡಸೂ ...ವಳನ್ನು 'ಸರಿಯಾದ ದಾರಿಗೆ' ಹಚ್ಚುವ ಸಾಹಸ ...ಮಾಡಲಾರ.

"ಈ ಹೆಣ್ಣಿಗೆ ದೆವ್ವ ಮೆಟ್ಟಿಕೊಂಡಿದೆ. ಏನು ಮಾಡಿದ್ರೂ ...ಷ್ಟೇ..." ಎಂದು ಅವಳ ಅತ್ತಿಗೆ ಸುಖ್ವಿರಾಗಧಲ್ಲಿ ಕೈ ...ಲ್ಲುತ್ತಿದ್ದಳು. "ಏನು ಮಾಡ್ತೀರಾ...? ನಮ್ಮ ಕರ್ಮ ...ಷ್ಟೇ. ದೇವರು ಒಳ್ಳೆಯವರಿಗೇ ಯಾಕೆ ಪರೀಕ್ಷೆಗಳನ್ನು ...ಡುತ್ತಾನೋ ಏನೋ...!" ನಿಡಿದಾದ ಉಸಿರು ಬಿಟ್ಟು ಹೇಳುತ್ತಿದ್ದ ಆ ಅತ್ತಿಗೆ ಮೋತಿಯಾಳಿಗೆ ಸಂಬಳ ಕೊಡದೆ ...ನೆಕ್ಕೆ ಹನ್ನೆರಡು ಗಂಟೆ ದುಡಿಸುತ್ತಿದ್ದಳು.

ಕಿಕ್ಕಿರಿದು ತುಂಬಿದ್ದ ಪಾರ್ಲರಿಂದ ಹೊರಬಿದ್ದಾಗ ...ಸ್ಪ ಬಿರಿಯಾನಿ ಘಮಘಮಕ್ಕೆ ಅಗರಬತ್ತಿ, ಅಮೋನಿಯಾಗಳ ವಾಸನೆಯೂ ಸೇರಿಕೊಂಡು ವಿಚಿತ್ರವಾದ ಕಂಪನ್ನು ...ರುತ್ತಿರುತ್ತದೆ. ಸರಿ, ಈಗ ಮನೆಗೆ ಹೋಗುವ ಹಾದಿಯಲ್ಲಿ ...ಮೂಗುಗಳು ಸಿಂಡರಿಸುತ್ತವೆ, ಮುಖಗಳು ನನ್ನಿಂದ ...ದಷ್ಟೂ ದೂರ ಸರಿಯಲು ಹವಣಿಸುತ್ತವೆ. ಎಲ್ಲದಕ್ಕೂ ...ಸಿದ್ಧವಾಗಿರಬೇಕು. ಟ್ಯೂಬು ರೈಲಿನಲ್ಲಿ ಪಕ್ಕ ಕೂತವರು ...ಮುಂದಿನ ನಿಲ್ದಾಣದಲ್ಲಿ ಇಳಿಯುವ ಸೋಗು ಹಾಕಿ ...ದ ದೂರ ಸರಿದು ಸಿಂತು ನನ್ನ ಬಿರಿಯಾನಿ ಪಾಕೇಟಿನ ...ಕಡೆ ಸಂಶಯದ ದೃಷ್ಟಿ ಬೀರುತ್ತಿರುತ್ತಾರೆ. ಬ್ರಿಟನ್ನಿಗೆ ಬಂದ ...ಸದರಲ್ಲಿ ಯಾರೋ ನನ್ನನ್ನು 'curry head' ಎಂದು ಕರೆದಿದ್ದರಲ್ಲ? ಒಬ್ಬನಂತೂ FOB ಅಂತಲೂ ಕರೆದಿದ್ದ, ಹಾಗೆಂದರೇನು ಅಂತಲೂ ನನಗೆ ಗೊತ್ತಿರಲಿಲ್ಲ, ಅವನನ್ನೇ ಕೇಳಿದಾಗ "ಜೀಸಸ್!" ಎಂದು ಉದ್ಗರಿಸುತ್ತಾ, ಅತೀವ ತಿರಸ್ಕಾರದಲ್ಲಿ ಉಗಿದು ಮುಂದೆ ಹೋಗಿದ್ದ.

ಏನಾದರಾಗಲಿ, ನನ್ನ ಬಾಲ್ಯದ ಬಣ್ಣ ಸುವಾಸನೆಗಳನ್ನು ಹಿಂದೆ ಬಿಟ್ಟು ರಂಗಿಲ್ಲದ ಬೂದುಬೂದಾಗಿರುವ ವರ್ತಮಾನಕ್ಕೆ ಮರಳಿ ಬರುವ ಮೊದಲು ಒಂದು ಕೆಲಸವನ್ನಂತೂ ಮಾಡಿ ಮುಗಿಸಬೇಕು.

ಮಾವಿನ ಹಣ್ಣು! ಪ್ರತಿವರ್ಷವೂ ಈ ಋತುವಿನಲ್ಲಿ ಲಂಡನ್ನಿನ ಈ ಭಾಗಕ್ಕೆ ನಾನು ಬಂದೇ ತೀರಬೇಕು. ಬಾಯಲ್ಲಿ ನೀರೂರಿಸುವ, ರಸರಸವಾದ ಆ ಮಾವಿನ ಹಣ್ಣುಗಳನ್ನು ತಿನ್ನದಿದ್ದರೆ ಬದುಕಿ ಏನು ಬಂತು ಭಾಗ್ಯ?

ಇಗೋ ಇಲ್ಲಿಯೇ ಇವೆಯಲ್ಲ! ಒಂದರ ಮೇಲೊಂದು ಎಷ್ಟು ದಿವಿನಾಗಿ ಪೇರಿಸಿಟ್ಟು ಒಂದು ಪಿರಮಿಡ್ಡನ್ನೇ ಸೃಷ್ಟಿಸಿದ್ದಾರಲ್ಲ! ಅದರ ಮೇಲೆ ಹೆಮ್ಮೆಯಿಂದ ನಿಂತಿರುವ 'ಪಾಕಿಸ್ತಾನದ ಉತ್ಪನ್ನ' ಎಂಬ ಫಲಕ ಬೇರೆ. ಇಂಥ ಅದ್ಭುತವನ್ನು ಉತ್ಪಾದಿಸುವ ನಾಡಿಗೆ ನಾನು ಸೇರಿದವಳು ಎಂದು ಒಂದು ಕ್ಷಣ ನನಗೂ ಬೀಗುವಂತೆನ್ನಿಸುತ್ತದೆ. ಮಾವಿನ ಅಂಗಡಿಯ ಮಾಲೀಕ ಅಬ್ದುಲ್ಲಾ ಯಾರೋ ಒಬ್ಬ ಸಣಕಲು ಯುವಕನೊಂದಿಗೆ ಮಾತಿನಲ್ಲಿದ್ದ, ಅಕ್ಟೋಬರ್ ತಿಂಗಳ ಕೊನೆಯ ದಿನಗಳು, ಆ ಸಣಕಲು ವ್ಯಕ್ತಿಯ ತೆಳ್ಳಗಿನ ದಿರಿಸು ಮತ್ತು ಪೇಶಾವರಿ ಚಪ್ಪಲಿಗಳನ್ನು ನೋಡಿದರೆ ಈಗ ತಾನೇ 'ಹಡಗಿನಿಂದ ಇಳಿದ ಸರಕು' ಇರಬೇಕು ಅಂತನ್ನಿಸುತ್ತದೆ. ವಿಸಿಟರ್ ವೀಸಾದ ಮೇಲೆ ಬಂದಿರಬಹುದು. ಅದು ಹೇಗೂ ಹಾಗೂ ಹೀಗೂ ತಳ್ಳಿಕೊಂಡೋ, ಅಡಗಿಕೊಂಡೋ ಮೂರು ವರ್ಷಗಳ ತನಕ ನಿಭಾಯಿಸುವ ಸಾಧ್ಯತೆಯಂತೂ ಇದೆಯಲ್ಲ? ಅಥವಾ ಆಶ್ರಯ ಕೋರಿಯೂ ಉಳಿಯಬಹುದಲ್ಲ? ಎಂದು ಅವನ ರಕ್ಷಣೆಯನ್ನು ಬೇಡುವ ಕಣ್ಣುಗಳನ್ನು, ಕಾಂತಿಹೀನ ಮುಖವನ್ನು ನೋಡುತ್ತಾ ಅಂದುಕೊಳ್ಳುತ್ತೇನೆ. ಮೋತಿಯಾ ತನ್ನ ಕ್ರೂರ ಗಂಡನಿಂದ ತಪ್ಪಿಸಿಕೊಳ್ಳಲು ಆಶ್ರಯ ಕೋರಿದಂತೆ ಗಂಡಸರೂ ಸಹ ಸೈನ್ಯದಿಂದ, ರಾಜಕೀಯ ನಾಯಕರಿಂದ, ಕೆಲವೊಮ್ಮೆ ತಮ್ಮ ಕುಟುಂಬಗಳಿಂದಲೂ ತಪ್ಪಿಸಿಕೊಳ್ಳಲು ಆಶ್ರಯ ಬೇಡುವುದು ಸಾಮಾನ್ಯವಾಗಿದೆ ತಾನೇ? ಪೇಪರಿನ ತುಂಬ ಅದರ ಸುದ್ದಿಯಿರುತ್ತದೆ. ನಾನು ನಿಟ್ಟುಸಿರು ಬಿಟ್ಟಾಗ ಆ ಸಣಕಲ ವ್ಯಕ್ತಿ ಹಿಂದೆ ನೋಡಿ ನನಗೆ ದಾರಿ ಬಿಡುತ್ತಾನೆ.

"ಆಹಾ!" ಅಬ್ದುಲ್ಲಾ ತನ್ನ ಪುರಾತನ ತಕ್ಕಡಿಯಲ್ಲಿ ಮಾವಿನ ಹಣ್ಣುಗಳನ್ನು ತೂಗುತ್ತಾ ಉದ್ಗರಿಸುತ್ತಾನೆ "ಏನೇ ಇರಲಿ, ಮಾವಿನ ಹಣ್ಣು ಮತ್ತು ಕ್ರಿಕೆಟ್ ನಮ್ಮ ಜನರನ್ನ ಒಗ್ಗೂಡಿಸುತ್ತೆ ನೋಡಿ!"

"ಒಗ್ಗೂಡಿಸುವ ಶಕ್ತಿ ಇರುವುದು ದುಡ್ಡಿಗೆ ಮಾತ್ರ." ಆ ಯುವಕ ಶಾಕುರೀಕಾಗಿ ನಡೆದುಬರುತ್ತಿದ್ದ ಸೂಟಿನ ವ್ಯಕ್ತಿಯೊಬ್ಬನನ್ನೇ ನೋಡುತ್ತಾ ಕಹಿಯಾಗಿ ಹೇಳುತ್ತಾನೆ.



'ಮನೆಯೆಲ್ಲೊ ಏನೋ...'
ಎಂದು ಗುನುಗುತ್ತಾ ಕಿಟಕಿಯ
ಪರದೆಗಳನ್ನು ಸರಿಸುವಾಗ
ಆಕಾಶದಲ್ಲಿಯಾಗಲೇ
ನಕ್ಷತ್ರಗಳು ಮೂಡಿರುತ್ತವೆ.
ಅರೆ! ಇನ್ನೂ ಸರಿಯಾಗಿ
ಕತ್ತಲೆಯಾಗದೇ ಇರುವಾಗ
ನಕ್ಷತ್ರಗಳು ಹೇಗೆ ಬಂದವು?
ಆ ಮಿಣುಕುಗಳಾಚೆ,
ಬಂಡಿಗಟ್ಟಲೆ ಬೂದು
ಮೋಡಗಳಾಚೆ ಸೂರ್ಯ
ಹದವಾಗಿ ಹೊಳೆಯುತ್ತಾನೆ.
'ಲಂಡನ್ನಿನಲ್ಲಿ ಮಾತ್ರ ಸೂರ್ಯ
ಚಂದ್ರರಿಬ್ಬರೂ ಒಟ್ಟಿಗೆ
ಹೊಳೆಯಲು ಸಾಧ್ಯ...!'

ಕತೆ

ಇಂಗ್ಲಿಷ್ ಮೂಲ: ಸಬಿನ್ ಜವೇರಿ ಜಿಯಾನಿ

ಕನ್ನಡಕ್ಕೆ: ಸುಕನ್ಯಾ ಕನಾರಳ್ಳಿ

ಕಡು ಬಣ್ಣದ ಸೂಟು, ಹೊಳೆಯುವ ಬೂಟು, ಕೈಯಲ್ಲಿ ರೋಲೆಕ್ಸ್ ವಾಚು ಧರಿಸಿದ್ದ ಆ ವ್ಯಕ್ತಿ ಮಾವಿನ ಮಾಲೀಕನಿಗೆ ಸಲಾಮಾಲೀಕುಮ್ ಹೇಳುವಾಗ ಸಣಕಲು ಯುವಕನನ್ನು ಕಣ್ಣೆತ್ತಿಯೂ ನೋಡುವುದಿಲ್ಲ.

"ದುಡ್ಡಿರುವಾಗ ಏನು ಮಾಡಿಯೂ ಬಚಾವಾಗಬಹುದಲ್ಲ?" ಎಂದು ಕೇಳುವಾಗ ಆ ಯುವಕ ನನ್ನ ಕಡೆ ಓರೆಯಾಗಿ ನೋಟ ಹರಿಸುತ್ತಾನೆ.

"ಅದೇನೋ ಸರಿಯೆ..." ಅಬ್ದುಲ್ಲಾ ರಟ್ಟಿನ ಡಬ್ಬಿಯೊಳಗೆ ಮಾವಿನ ಹಣ್ಣುಗಳನ್ನು, ಜೊತೆಗೆ ಪೇಪರುಗಳನ್ನು, ಸ್ಟ್ರಾಗಳನ್ನೂ ಜೋಡಿಸುತ್ತಾ ರಾಗ ಎಳೆಯುತ್ತಾನೆ. "ಜೇಬಲ್ಲಿ ಪೌಂಡುಗಳಿದ್ದು ನೈಟ್ಸ್ ಬ್ರಿಜ್‌ನಲ್ಲಿ ಒಂದು ಫ್ಲಾಟಿದ್ದರೆ ಆಯಿತಲ್ಲ? ನಿನ್ನನ್ನು ಯಾರೂ 'ಪಾಕಿ' ಎಂದು ಕರೆಯುವುದಿಲ್ಲ, 'ಸರ್' ಎಂದು ಕರೆಯುತ್ತಾರೆ. Good to have you with us, Sir!" ಅಬ್ದುಲ್ಲಾ ತನ್ನ ಬುದ್ಧಿವಂತಿಕೆಗೆ ತಾನೇ ನಗು ಬೀರುತ್ತಾನೆ.

ಮಾವಿನಹಣ್ಣುಗಳಿದ್ದ ರಟ್ಟಿನ ಪೆಟ್ಟಿಗೆಯನ್ನು ಒಂದು ಕಂಕುಳಲ್ಲಿ ಇರುಕಿಕೊಂಡು, ಇನ್ನೊಂದು ಕೈಯಲ್ಲಿ ಬಿರಿಯಾನಿಯ ಬ್ಯಾಗನ್ನು ಹಿಡಿದುಕೊಂಡು, ಬೆರಗಲ್ಲಿ ಸದಾ ಸ್ವಲ್ಪ ಮೇಲೆದ್ದಿರುವ ಹುಬ್ಬುಗಳಿದ್ದ ನನ್ನ ಮುಖವನ್ನು ಹೊತ್ತು ಹೊರಡುತ್ತೇನೆ. ಉತ್ತರದ ಕಡೆಗೆ ಹೋಗುವ ಟ್ಯೂಬು ರೈಲನ್ನು ಹಿಡಿಯಲು ಹೆಜ್ಜೆ ಹಾಕುತ್ತಿದ್ದಾಗ ಮನಸ್ಸು ತೃಪ್ತಿಯಿಂದ ತುಂಬಿರುತ್ತದೆ.

ಸುರಂಗದಲ್ಲಿ ಸಾಗುವ ರೈಲು ಮುಂದೆ ಮುಂದೆ ಹೋದಂತೆಲ್ಲ ಟೂಟಿಂಗ್ ಹಿಂದೆ ಹಿಂದೆ ಕತ್ತಲಲ್ಲಿ ಸರಿದುಹೋಗುತ್ತದೆ. ಉತ್ತರಕ್ಕೆ ಹೋದಂತೆಲ್ಲ ರೈಲಿನೊಳಗಿನ ಕಂದು ಬಣ್ಣ ಸ್ವಲ್ಪ ಸ್ವಲ್ಪವೇ ತಿಳಿಯಾಗುತ್ತಾ ಹೆಚ್ಚು ಹೆಚ್ಚು ಬಿಳಿಯಾಗುತ್ತಾ ಹೋಗುತ್ತದೆ. ನಾನು ಸುಮ್ಮನೇ ಕೂತು ಪಾರ್ಲರಿನಲ್ಲಿ ಕೊಂಡಿದ್ದ ಸ್ಟಾರ್ ಡಸ್ಟ್ ಅನ್ನು ತಿರುವಿ ಹಾಕುತ್ತೇನೆ. ಎಷ್ಟೊತ್ತಿಗೆ ಮನೆಗೆ ಹೋಗಿ ಬೀಳುತ್ತೇನಪ್ಪ ಅಂತನ್ನಿಸಲು ಪ್ರಾರಂಭವಾಗಿಬಿಟ್ಟಿದೆ. ಪಾದವನ್ನು ಗೋಳುಗುಟ್ಟಿಸುತ್ತಿರುವ ಈ ದರಿದ್ರ ಶೂಸನ್ನು ಬಿಸಾಕಿ, ಬಿಗಿಯಾದ ಈ ಜೀನ್ಸನ್ನು ಬಿಚ್ಚಿ ಆ ಕಡೆ ಒಗೆದು ಕುಕ್ಕರಿಸಿದರೆ ಸಾಕೆನ್ನಿಸುತ್ತಿದೆ. ಹಾಸಿಗೆಯ ತಲೆದೆಸೆಯಲ್ಲಿ ಮಡಿಸಿಟ್ಟಿರುವ ನನ್ನ ಅಳ್ಳಕವಾದ ಶಲ್ವಾರ್ ಕಮೀಜ್ ನೆನಪಿಗೆ ಬರುತ್ತದೆ. ಅದನ್ನು ಹಾಕಿಕೊಂಡು ಹಾಯಾಗಿ ಟಿವಿಯಲ್ಲಿ B4U ಚಾನೆಲ್ ತಿರುಗಿಸಿ, ಬಿರಿಯಾನಿ ತಿನ್ನುತ್ತಾ ಮಾವಿನ ಹಣ್ಣನ್ನು ಸವಿಯುತ್ತಾ ಕೂರುವ ಕಲ್ಪನೆಯೇ ಎಷ್ಟು ಹಿತವಾಗಿದೆಯಪ್ಪ! ಅಸಹನೆಯಿಂದ ವಾಚಿನತ್ತ ಕಣ್ಣು ಹರಿಸುತ್ತೇನೆ. ಸದ್ಯ ಜ್ಯಾಕ್ ಬರಲು ಇನ್ನೂ ಸಾಕಷ್ಟು ಸಮಯವಿದೆ. ಜ್ಯಾಕ್ ನನ್ನ ಗಂಡ. ಅವನಿಗೆ ದಕ್ಷಿಣ ಏಶಿಯಾದ ಸಂಸ್ಕೃತಿಯ ಬಗ್ಗೆ ಪ್ರೀತಿಯೇನೋ ಇದೆ. ಆದರೆ ಮಸಾಲೆ ಪದಾರ್ಥಗಳ ಬಗ್ಗೆಯಾಗಲಿ, ಬಾಲಿವುಡ್ ಸಿನಿಮಾಗಳ ಬಗ್ಗೆಯಾಗಲಿ, ಅವನಿಗೆ ಹೇಳಿಕೊಳ್ಳುವ [illegible] ಇಲ್ಲ. ಒಂದು ಸಲ ಮಾವಿನ ಹಣ್ಣನ್ನು ತಿನ್ನುವುದು ಹೇಗೆ ಎಂದು ಕಲಿಸಲು ಪ್ರಯತ್ನಪಟ್ಟೆ. "ನೋಡಿಲ್ಲಿ, ಹಣ್ಣನ್ನು ಹೀಗೆ ಎರಡೂ ಕೈಯಲ್ಲಿ ಹಿಡಿದು ಅದು ಮೃದುವಾಗುವ ತನಕ ಅಂಗೈಯೊಳಗೆ ತಿರುಗಿಸುತ್ತಿರಬೇಕು. ಆಮೇಲೆ ಮೇಲ್ಭಾಗದಲ್ಲಿ ಕಚ್ಚಿ ಸಿಪ್ಪೆಯನ್ನು ಹಲ್ಲಿನಿಂದ ಜಗ್ಗಿ ಎಳೆದು, ನಂತರ ಹಣ್ಣಿನೊಳಗೆ ಹಲ್ಲನ್ನು ಊರಬೇಕು..." ಕಣ್ಣು ಮುಚ್ಚಿ ಮಾವಿನ ಹಣ್ಣಿನ ಆನಂದಾಮೃತದಲ್ಲಿ ಮುಳುಗಿದ್ದಾಗ ನನಗೇ ಅರಿವಿಲ್ಲದಂತೆ ರಸ ನನ್ನ ಗದ್ದದಿಂದ ಕೆಳಗಿಳಿದು ಜ್ಯಾಕ್ ಕೊಂಡು ತಂದಿದ್ದ ಅಮೂಲ್ಯ ಪರ್ಶಿಯನ್ ಕಾರ್ಪೆಟ್ಟಿನ ಮೇಲೆ ಬಿದ್ದು ಕಲೆಯನ್ನು ಉಂಟುಮಾಡಿತ್ತು, ಅವನ ಮುಖದ ಮೇಲೆ ಜಿಗುಪ್ಸೆ ಒಡೆದು ಮೂಡಿತ್ತು.

ಒಂದು ಸಲ ಅವನನ್ನು ಹಿಂದಿ ಚಿತ್ರವೊಂದಕ್ಕೆ ಕರೆದುಕೊಂಡು ಹೋಗಿದ್ದೆ, ಮೂರು ಘಂಟೆಯ ಮಟ್ಟಿಗೆ ಮರ ಸುತ್ತಾಟ, ಹಾಡು, ಕುಣಿತ, ಇತ್ಯಾದಿಗಳನ್ನು ನೋಡಿದ ಮೇಲೆ "ನಾನೇನು ತಪ್ಪು ಮಾಡಿದ್ದರೂ ಕ್ಷಮಿಸು. ದಯವಿಟ್ಟು ಇಂತಹ ಹಿಂಸೆಗೆ ಮಾತ್ರ ನನ್ನನ್ನು ಗುರಿ ಮಾಡಬೇಡ" ಎಂದು ಬೇಡಿಕೊಂಡಿದ್ದ. ಅವನಿಗೆ ಇರಾನಿಯನ್ ಚಿತ್ರಗಳೆಂದರೆ ಇಷ್ಟ. ಮೂರು ಗಂಟೆಯ ಕಾಲ ಅದರಲ್ಲಿ ಯಾರೂ ಏನೂ ಮಾಡದೆ ಇದ್ದರೂ, ಇದ್ದುದ್ದನ್ನು ಇದ್ದ ಹಾಗೆ ಕಹಿಯಾಗಿ ಹೇಳಿದರೂ ಪರವಾಗಿಲ್ಲ, ಅಷ್ಟೇ ಅಲ್ಲ, ಅವನಿಗೆ ಉಪನ್ಯಾಸಗಳೆಂದರೂ ಪ್ರಿಯವೇ. ಯಾರೋ ಮಾತಾಡುತ್ತಾರೆ ಎಂದರೆ ಧೀ ಎಂದು ಹೊರಟು ಬಿಡುತ್ತಾನೆ. ನನಗೋ, ಆ ಚಳಿಯಲ್ಲಿ ಹೊರಗೆ ಕಾಲಿಡುವುದೆಂದರೆ ಮಹಾ ಸಂಕಟ. ಯಾವುದೋ ಆಫ್ರಿಕನ್ ದೇಶದಲ್ಲಿ ಹೆಣ್ಣು ಕೆಲಸದಾಳುಗಳನ್ನು ಶೋಷಿಸುತ್ತಾರೆ ಎಂದು ಯಾರೋ ಬೊಬ್ಬೆ ಹೊಡೆದರೆ ಕಟ್ಟಿಕೊಂಡು ನನಗೇನಾಗಬೇಕು? ಇಸ್ಲಾಂ ಬಗ್ಗೆ ಗಂಟೆಗಟ್ಟಲೆ ಓದುತ್ತಿರುತ್ತಾನೆ. ನಾನು ನನ್ನ ಬಾಲ್ಯಕ್ಕೆ ತಳುಕು ಹಾಕಿಕೊಂಡಿರುವ ಮುಲ್ಲಾಗಳಿಂದ ಆದಷ್ಟೂ ದೂರ ಓಡಲು ಪ್ರಯತ್ನಿಸುತ್ತಿರುತ್ತೇನೆ.

ಜ್ಯಾಕ್‌ಗೆ ಯೋಗದಲ್ಲಿ ಮಹಾ ಆಸಕ್ತಿ. ರಷ್ದೀ, ನೈಪಾಲರನ್ನು ಬಿಡದೆ ಕೂತು ಓದುತ್ತಾನೆ. ಆದರೆ ನಾನು ಘಮ್ಮೆನ್ನುವ ಮಸಾಲೆ ಪಲ್ಯ ಮಾಡಿದಾಗ ಮಾತ್ರ ತನ್ನ ಬಟ್ಟೆಗಳೆಲ್ಲ ಪ್ಲಾಸ್ಟಿಕ್ಕಿನಲ್ಲಿ ಸೀಲ್ ಮಾಡಿಡುತ್ತಾನೆ. ರಸರಸವಾದ ಮಾವಿನ ಹಣ್ಣನ್ನು ನಾನು ಕಚ್ಚಿ ತಿನ್ನುವಾಗೆಲ್ಲ ಟೇಬಲ್ಲನ್ನು ಪ್ಲಾಸ್ಟಿಕ್ ಕವರುಗಳಿಂದ ಮುಚ್ಚಲು ಮರೆಯುವುದಿಲ್ಲ. ನನ್ನನ್ನು ಪರಿಚಯಿಸುವಾಗೆಲ್ಲ ನಾನೊಬ್ಬ ಏಷಿಯನ್ ಎಂದು ಖಂಡಿತಾ ಸೇರಿಸುತ್ತಾನೆ.

ದಿನನಿತ್ಯದ ಸಾಧಾರಣಗಳ ಬಗೆಗಿನ ನನ್ನ ಬೆರಗು ಅವನಿಗೆ ಅರ್ಥವಾಗುವುದೇ ಇಲ್ಲ, ಮೈಕ್ರೋವೇವ್ ಅವನ್ ಬಗ್ಗೆ ಅದೇಕೆ ಅಷ್ಟು ಸಂಭ್ರಮವೋ ಎಂದು ಮೂಗೆಳೆಯುತ್ತಾನೆ. ನಾನೇನು ಅದನ್ನು ಕಂಡಿಲ್ಲ ಅಂತಲ್ಲ, ರೆಡಿಮೇಡ್ ಖಾದ್ಯಗಳನ್ನು ತಂದು ಬಿಸಿ ಮಾಡಬಹುದಲ್ಲ ಎಂದು ಸಡಗರಪಡುವುದರಲ್ಲಿ ತಪ್ಪೇನು? ಮಹಾಹತುಶಾಹಿ ಚರಿತ್ರೆಯ ಕಳಂಕವನ್ನು ಹೊತ್ತಿರುವ ರಾಜಮನೆತನದ ಬಗ್ಗೆ ನಿನಗೇಕಷ್ಟು ಅಭಿಮಾನ? ಎಂದು ಕೇಳುತ್ತಾನೆ. ನನ್ನ ದೇಶದಲ್ಲಿ ಬದುಕಲು ನನಗೆ ಇಷ್ಟವಿಲ್ಲದಿರುವಾಗ ಅಲ್ಲಿಯ ವಾಸನೆಗಳನ್ನು, ರುಚಿಗಳನ್ನು ಇಲ್ಲಿ ಎಳೆದು ತಂದು ಜೀವ ಕೊಡುವ, ಭೂತಕ್ಕೆ ಉಸಿರು ತುಂಬುವ ನನ್ನ ಪ್ರಯತ್ನಗಳೆಲ್ಲವೂ ಅವನಿಗೆ ಹಾಸ್ಯಾಸ್ಪದವೆನ್ನಿಸುತ್ತದೆ.

ಟೂಟಿಂಗ್ ಜನರಾಗಲಿ, ಜ್ಯಾಕ್ ಆಗಲಿ, ನನ್ನನ್ನು ಬಿಡಿಬಿಡಿಯಾಗಿ ವಿಂಗಡಿಸಿ ಇಡಲು ಸಾಧ್ಯವಿಲ್ಲ. ಮಾನವಜಾತಿಯೆಂಬ ಅಡನಾಡಿಗೆ ನಾನು ಸೇರಿದವಳು. ಇಲ್ಲಿ ನನ್ನದೆನ್ನುವುದು ಏನೂ ಇಲ್ಲ. ಹಿಂದೆ ಬಿಟ್ಟು ಬಂದ ಹಾದಿ ನನ್ನದಲ್ಲ, ಈಗ ನಿಂತಿರುವ ನನ್ನ ಕಾಲ ಕೆಳಗಿನ ಭೂಮಿಯೂ ನನ್ನದಲ್ಲ, ನಾನೊಂದು ಮಹಾ ಮಿಶ್ರತಳಿ. ನನಗೆ ಅಚಲ ನಂಬಿಕೆಗಳೆನ್ನುವುದು ಏನೂ ಇಲ್ಲ, ಅವರಂತೆ ನಾನಿರಬೇಕೆಂಬ ಆದರ್ಶಪ್ರಾಯರೂ ಇಲ್ಲ, ನನ್ನ ಹಿಂದಿನವರನ್ನು ಕಾಡಿದಂತೆ ಬೇರುಗಳು ನನ್ನನ್ನು ಕಾಡುವುದಿಲ್ಲ. ಎಲ್ಲಿಂದಲೋ ಬಂದೆವು, ಯಾವತ್ತೋ ಹೋಗುತ್ತೇವೆ ಅಷ್ಟೇ. ನಾವು ಯಾರಿಗೂ, ಎಲ್ಲಿಗೂ ಸೇರಿದವರಲ್ಲ.

ಜ್ಯಾಕ್ ಬರುವ ಹೊತ್ತಾಗುತ್ತಿದೆಯಲ್ಲ? ಕೋಣೆಯಲ್ಲಿದ್ದ ವಾಸನೆಯೆಲ್ಲವೂ ಹೊರಗೆ ತೊಲಗುವಂತೆ ಕಿಟಕಿಗಳನ್ನು ಹರವಾಗಿ ತೆರೆದಿಡುತ್ತೇನೆ. ನಾನು ತಿಂದ ಬಿರಿಯಾನಿಯ ಅಳಿದುಳಿದ ಕುರುಹುಗಳೆಲ್ಲವೂ ಹೋಗುವಂತೆ ಫ್ಲಾಟಿನ ತುಂಬ ಸುಗಂಧದ್ರವ್ಯವನ್ನು ಸಿಂಪಡಿಸುತ್ತೇನೆ. ಒಂದು ಬಟ್ಟಲು ಚಹಾ ಹಿಡಿದು ರೇಡಿಯೋನಲ್ಲಿ ಸನ್ ರೈಸ್ ಸ್ಟೇಷನ್ ಬದಲಾಯಿಸಿ ಕ್ಯಾಪಿಟಲ್ FM ಹಚ್ಚುತ್ತೇನೆ. ನೆಲ್ಲಿ ಫ್ಯುರ್ಟಾಡೋ ಧ್ವನಿ ಹಾಡುತ್ತದೆ: "ನಾನೊಂದು ಹಕ್ಕಿ...ಮನೆಯೆಲ್ಲೊ ಏನೋ..."

'ಮನೆಯೆಲ್ಲೊ ಏನೋ...' ಎಂದು ಗುನುಗುತ್ತಾ ಕಿಟಕಿಯ ಪರದೆಗಳನ್ನು ಸರಿಸುವಾಗ ಆಕಾಶದಲ್ಲಿಯಾಗಲೇ ನಕ್ಷತ್ರಗಳು ಮೂಡಿರುತ್ತವೆ. ಅರೆ! ಇನ್ನೂ ಸರಿಯಾಗಿ ಕತ್ತಲೆಯಾಗದೇ ಇರುವಾಗ ನಕ್ಷತ್ರಗಳು ಹೇಗೆ ಬಂದವು? ಆ ಮಿಣುಕುಗಳಾಚೆ, ಬಂಡಿಗಟ್ಟಲೆ ಬೂದು ಮೋಡಗ[illegible] ಸೂರ್ಯ ಹದವಾಗಿ ಹೊಳೆಯುತ್ತಾನೆ. 'ಲಂಡ[illegible] ಮಾತ್ರ ಸೂರ್ಯ ಚಂದ್ರರಿಬ್ಬರೂ ಒಟ್ಟಿಗೆ ಹೊ[illegible] ಸಾಧ್ಯ...!' ಎಂದೆಲ್ಲ ಯೋಚಿಸುತ್ತಾ ಬೆರಗಾಗುತ್ತೇ[illegible] ■

ಇಟ್ಸ್ ರಿಯಲಿ ಸೇಂ ಟು ಅವರ್ ಎಕ್ಸ್ ಲೀಡರ್

ಸೀರ ಕುಕುಳು ಕರೆದ. ಸುಮ್ಮುಸುಮ್ಮನೆ ಮೈಯೆಲ್ಲಾ ತಡಕಿದ. ಇಂತಹ ಘನಕಾರ್ಯ ಮಾಡುತ್ತಲೇ,

"ಎಡೂರಪ್ಪ ಮುಖ್ಯಮಂತ್ರಿಯಾಗಿ ಮೂರು ತಿಂಗ ಳಾಯ್ತಂತೆ" ಎಂದ. ಅದಕ್ಕೆ ಕಾಳಮಾವ ಮಾತನಾಡ ಲಿಲ್ಲ. ಆಗ ಜುಮ್ಮಿ,

"ಮೂರು ತಿಂಗಳಲ್ಲ ನೂರು ದಿನಾಯ್ತಂತೆ ಕಣೊ" ಎಂದಳು.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ನೂರು ದಿನಾಗಿದ್ರೆ ಐದೊರ್ಸ ಮುಗಿಸಿದೋರಂಗಾ ದ್ತವೆ" ಎಂದ ಉಗ್ರಿ.

"ಆಗೊಂದು ಸತಿ ಬಂಗಾರಪ್ಪ ಹಿಂಗೆ ಮಾಡಿಕಂಡಿದ್ದ ಅಲವೆ?"

"ಅವುನಾರ ಯರಡೊರ್ಸ ತುಂಬಿಸಿ ಮಾಡಿಕಂಡಿದ್ದ. ಮಾಡಿಕೊಳೊ ಅಂತ ಕ್ಯಲಸನೂ ಮಾಡಿದ್ದ. ಇವೇಳು?" ಎಂದ ಉಗ್ರಿ.

"ಇವು ಏನೇನೊ ಮಾಡಿರಬೇಕಲ್ಲವೇನ್ಲ?"

"ಮಾಡ್ಯವುರೆ ಕಣಕ್ಕ. ಹಿಂದೆ ಯಾರೂ ಮಾಡದೆಯಿರೊ ಕ್ಯಲ್ಸ ಮಾಡ್ಯವುರೆ" ಎಂದ ವಾಟಿಸ್ಸೆ.

"ಅದೇನು ಮಾಡಿದ್ದರ್ಲ?"

"ಗ್ವಬ್ಬರ ಕೀಳಿದ್ಕೆ ಗೋಲಿಬಾರ್ ಮಾಡಿದ್ರು. ಆ ಕೋತಿ ತಿಮ್ಮನಂಗಾಡೊ ಜಗ್ಗೇಸನ್ನ ಖರೀದಿ ಮಾಡಿದ್ರು."

"ಖರೀದಿ ಮಾಡಿದ್ರೆ?"

"ಇನ್ನೇನು ಪುಗಸಟ್ಟೆ ಹೋದನೆ ಅವುನು. ಕಾಸು ತೋರಿಸಿದೇಟಗೆ ಕಾಂಗ್ರೆ ಮರದಿಂದ ಬಿಜೆಪಿ ಮರಕ್ಕೆ ನ್ಯಗದ ಕಣಕ್ಕ. ಅಮ್ಯಾಲೆ ಬೆಳ್ಳುಬ್ಬ ಬುರುಡಿಗೆ ವಡದು ಅವುನು ಖಾತೆ ಕಿತಗಂಡು ಉಮೇಸ್ ಕತ್ತಿ ಅನ್ನೊನಿಗೆ ಕೊಟ್ರು. ಚೆನ್ನಿಗಪ್ಪನ ಹುಡುಗುನ್ನ ಸೇರಿಸಿಗಂಡ್ರು. ಅಂತವೇ ಇನ್ನು ಯಾವ್ಯಾವುನೋ ಸೇರಿಸ್ಕಂಡ್ರು."

"ಚೆನ್ನಿಗಪ್ಪನೂ ಹೋದನಲ್ಲೊ?" ಎಂದ ಉಗ್ರಿ.

"ನೋಡು ಮತ್ತೆ?"

"ಲ್ಯಕ್ಕ ಹಾಕು. ಚೆನ್ನಿಗಪ್ಪನಂಥೋನು ಇರಕ್ಯಾಗಲಿಲ್ಲ ಅಂದ್ರೆ ಆ ಜೆಡಿಎಸ್ಸು ಇನ್ನಂಥ ಪಾರ್ಟಿ ಇದ್ದತು ಅಂತ?"

"ಅದು ಅಪ್ಪ ಮಕ್ಕಳ ಪಾರ್ಟಿ ಅನ್ನದು ಬುಟ್ರೆ ಈ ಪಿಂಜರಾಪೋಲು ಪಾರ್ಟಿಗೋ ಲಿಸಿದ್ರೆ ಜೆಡಿಎಸ್ಸೆ ಪರವಾಗಿಲ್ಲ ಕಣೊ" ಎಂದು ವಾಟಿಸ್ಸೆ ಹೇಳಿದ ಕೂಡಲೆ, ಅವನ ಕಡೆ ಕಣ್ಣುಬಿಟ್ಟ ಕಾಳಮಾವ,

"ಕುಮಾರಸ್ವಾಮಿ ಯಡೂರಪ್ಪನಿಗಿಂತ್ಲೂ ತೂಕವಾಗಿ ಮಾತಾಡತಿದ್ದ ಅಲವೆ?" ಎಂದ.

"ತೂಕವಾಗೇನುಯಿಲ್ಲ ಧ್ವಡಪ್ಪ ಎಡೂ ರಪ್ಪ ಆತುರಗೆಟ್ಟ ಆಂಜನೇಯನಂಗೆ ಮಾತಾಡ್ತನೆ. ಅವುನು ನಿಧಾನಕ್ಕೆ ಸ್ವಲುಪ ಸ್ಲೋ ಆಗಿ ಮಾತಾಡತಿದ್ದ ಅಷ್ಟೆ. ಅಂಗೇ ನೋಡಿದ್ರೆ ಇಬ್ರು ಮಾತಾಡೊ ಮೀನಿಂಗೂ ಒಂದೇ ಆಗಿತ್ತು" ಎಂದ ವಾಟಿಸ್ಸೆ.

"ಅಲ್ಲಾ ಕುಮಾರಸ್ವಾಮಿನೆ ಪರವಾಗಿಲ್ಲ ಅನ್ನೊ ಮಟ್ಟಕೆ ಎಡೂರಪ್ಪ ಇಳದ ಅಂದ್ರೆ ಏನ್ಹೇಳನಾ?" ಎಂದ ಉಗ್ರಿ.

"ಕಾಲ ಇನ್ನ ಕೆಟ್ಟೋಗಬವುದು ಕಣೊ ಉಗ್ರಿ. ಮುಂದೆ ಎಡೂರಪ್ಪನೆ ಪರವಾಗಿಲ್ಲ ಅನ್ನೊ ಕಾಲ ಬರಬವುದು."

"ಅಂಗೇನು ಆಗದಿಲ್ಲ ಕಣೊ ವಾಟಿಸ್ಸೆ. ಆಗ ಗುಂಡೂ ರಾಯ ಮುಖ್ಯಮಂತ್ರಿ ಆದಾಗ ಮುಂದೆ ಇನ್ನಂಥೋನು ಬಂದನಪ್ಪಾ ಅನ್ನುವಾಗ ಯಗಡೆ ಮುಖ್ಯಮಂತ್ರಿಯಾದ" ಎಂದ ಉಗ್ರಿ.

"ಇವತ್ತು ಹಿಂತಿರಿಗಿ ನೋಡಿದ್ರೆ ಯಗಡೆನೆ ಪರವಾಗಿಲ್ಲ ಅನ್ನಂಗೆ ಕಾಣ್ತದ್ತಪ್ಪ" ಎಂದ ಕಾಳಮಾವ.

"ಅದ್ಯಾಕ್ ಧ್ವಡಪ್ಪ ದ್ಯಾವೇಗೌಡುನ್ನ ಬುಟ್ಟೆ? ಅವುನು ಹದಿನೆಂಟು ತಿಂಗಳಿದ್ದ."

"ಐದೊರ್ಸ ಇರೋನಲ್ಲ, ಯಂಥಾ ಅಧಿಕಾರ ಕೊಡೋನು ಅಂತೀ?"



"ಅಲವೆ ಮತ್ತೆ? ಇದೀ ಕರ್ನಾಟಕದ ತುಂಬ ಮಕ್ಕಳು ಮರಿ ಬೀಗರು ಬಿಜ್ಜರು ನೆಂಟರು ಇಷ್ಟರೇ ತುಂಬಿರರು."

"ಅಂಗೇನು ಆಯ್ತಿರಲಿಲ್ಲ ಸುಂಕಿರ್ಲ."

"ಇವತ್ತಾಗಿರದೇನೇಳು ನೋಡನ? ವಬ್ಬ ಮಗ ಪಾರ್ಟಿ ಅಧ್ಯಕ್ಷ ಇದ್ರು ತಾನೇ ಮ್ಯರಿತಾ ಅವುನೆ. ಇನ್ನೊಬ್ಬ ಹಾಲಿನ ಡೈರಿಲಿ ಕುತುಗುಂಡ ಯಾವಾಗ್ಲು ಕ್ಯನೆ ತಿನ್ನೊನಂಗೆ ಜೊಲ್ಲರಿಸಿಗಂಡು ಮಾತಾಡ್ತನೆ. ಇವುರ ಪರ ನೀನು ವಕಾಲತ್ತೊಯಿಸ್ತಿ."

"ವಕಾಲತ್ತ ನಾನು ಯಾವ ಕಾಲದಿಂದ್ಲೂ ವಯಿಸಿಲ್ಲ ಕಂಡ್ಯ. ಏನದೆ ಅದ ಮಾತಾಡ್ತಿನಿ."

"ಕಾಲಾದಿಂದ ಕಾಂಗ್ರೆಸ್ಸಲಿದ್ರು ದ್ಯಾವೇಗೌಡನ ಪರ ಮಾತಾಡ್ತಿಯಲ್ಲ ಹೇಳು?"

"ಮಾತಾಡ್ಳಿ ಬುಡೊ. ಇವತ್ತು ನಾವೆ ಬ್ಯಾರೆ ಬ್ಯಾರೆ ಪಾರ್ಟಿ ಜನ ಮೆಚ್ಚ ಮಾತಾಡದಿಲವೆ, ಅಂಗೆ ಕಾಳಮಾವನೂ ಮಾತಾಡ್ತನೆ. ಹೋಗ್ಲಿ ಕಾಂಗ್ರೆಸ್ಸಿನಲ್ಲೇ ಮೆಚ್ಚ ಮಾತಾಡೋ ಅಂತ ಲೀಡ್ರು ಯಾವನಿದ್ದನಪ್ಪ?" ಎಂದ ಉಗ್ರಿ.

"ಸಿದ್ದರಾಮಯ್ಯ ಅವುನಲ್ಲೊ."

"ಸಿದ್ದರಾಮಯ್ಯ ಇನ್ನು ಕಾಂಗ್ರೆಸ್ಸಾಗಕ್ಕೆ ಆಗಿಲವಂತೆ ಕಣೊ. ಅವುನ ಮನಸು ಇನ್ನು ಜಂತಾದಳವೇ ಆಗಿದ್ದತಂತೆ. ಅದ್ಕೆ ಅವುನ್ನ ಅಧ್ಯಕ್ಷನ್ನ ಮಾಡಕ್ಕೆ ಹಿಂದುಮುಂದು ನೋಡ್ತಾ ಯಿದ್ದರಂತೆ."

"ಸಿದ್ದರಾಮಯ್ಯನೇ ಕಾಂಗ್ರೆಸ್ ಅಧ್ಯಕ್ಷಾದ್ರು ಆ ಪಾರ್ಟಿ ಉದ್ದಾರಾಗಂಗೆ ಕಾಣದಿಲ್ಲ ಕಣೊ."

"ಎಜ್ಜಾಟ್ಲಿ ಕರಟ್ ಕಣೊ ಉಗ್ರಿ. ಆ ಬಿಜೆಪಿಗಳೆದ್ರಿಗೆ ಇವರು ವಳ್ಳೆ ವಿರೋಧ ಪಕ್ಷದ ಕ್ಯಲಸ ಮಾಡಬವುದಿತ್ತು. ಅದುಬುಟ್ಟು ಅಧ್ಯಕ್ಷನ್ನ ಮಾಡಕ್ಕೆ ಮೂರು ತಿಂಗಳಾಯ್ತು."

"ಅವುರೆಲ್ಲಿವರಿಗೂ ಹೈಕಮಾಂಡು, ಹೈಕಮಾಂಡು ಅಂತರೋ ಅಲ್ಲಿವರಿಗೂ ಉದ್ದಾರಾಗದಿಲ್ಲ ಕಣೊ. ಇವತ್ತು ಆ ಪಾರ್ಟಿ ನೋಡಿದ್ರೆ ಅಂಗೆ ಧರಮಸಿಂಗನ್ನೋಡಿದಂಗಾಯ್ತದೆ."

"ಅವು ಪವರ್ರಲಿದ್ದೂ ಇದ್ದೂ ಬೇಕಾದೋಟು ಮಾಡಿಕಂಡು ಮಲ್ಗೋಗ್ಯವೆ ಕಣೊ. ಅವು ಚಟುವಟಿಕ್ಯಾ ಗಿರದು ಯಲಕ್ಸನ್ ಟೇಮಲ್ಲಿ ಮಾತ್ರ. ಉಳದಂಗೆ ಆರಾ ಮಾಗಿರತವೆ. ಇಲ್ದೆಯಿದ್ರೆ ಬಿಜೆಪಿಗೆ ಗ್ರಾಚರ ಬುಡು ಸಬವುದಿತ್ತು ಕಣೊ."

ಯಡ್ಡಿ ನಾಟಕ ಕಂಪೆನಿಯೂ ಹಂಡ್ರೆಡ್ ಡೇಸ್ ಗ್ಯಾರಂಟಿಯೂ

ಅಣಕ

ಎಚ್.ಎಲ್. ಕೇಶವಮೂರ್ತಿ

ಸರ್ಕಾರದ ನೂರು ದಿನಗಳ ಸಾಧನಾ ಸಮಾರಂಭ ನಡೆಯಿತಲ್ಲಾ, ಅದು ಏನು ಸಾಧನೆ ಮಾಡಿದೆ ಎಂಬುದನ್ನು ತಿಳಿಯಲು ಶತಪ್ರಯತ್ನಪಟ್ಟೆ. ಯಡ್ಡಿ ಕೈಗೆ ಸಿಗುತ್ತಿರಲಿಲ್ಲ, ಪ್ರಭಾವಿ ಮಂತ್ರಿಗಳೂ ಡಿಟ್ಟೋ... ಉಡಿಪಡಿ ಮಂತ್ರಿಗಳನ್ನೇ ಹಿಡಿದು ತಿಳಿಯೋಣ ಅಂತ ತಡಕಾಡಿದೆ. ಪಕ್ಷೇತರರಾಗಿ ಆಯ್ಕೆಯಾಗಿ ಮಂತ್ರಿ ಪದವಿ ಗಿಟ್ಟಿಸಿಕೊಂಡರಲ್ಲ ಅವರು ಬಿಡುವಾಗಿದ್ದರು. ಮಾತನಾಡಿಸಿದಾಗ ಯಾಕೋ ಕದ್ದು ಬಸುರಾದವರ ತರಹ ಕಂಡರು. ಇಲ್ಲಿ ಏನೂ ಹೂರಣ ಸಿಗಲ್ಲ ಅಂತ ಅವರ ಕೈಬಿಟ್ಟೆ.. ಇತರೇ ಪಕ್ಷಗಳಿಂದ ಹಾರಿ ಭಾರತೀಯ ಜನತಾ ಪಕ್ಷದ ಸರ್ಕಾರದಲ್ಲಿ ವಿರಾಜಮಾನರಾಗಿದ್ದವರದ್ದೂ ಇದೇ ಕತೆ. ಇದೆಲ್ಲ ವ್ಯರ್ಥ ಕಸರತ್ತು ಅಂದುಕೊಂಡು ಎಚ್.ಡಿ.ಕುಮಾರ ಸ್ವಾಮಿಯವರನ್ನು ಕಂಡೆ. ವರ್ಗಾವಣೆಯಲ್ಲಿ ಕೋಟ್ಯಂತರ ರೂಪಾಯಿ ಕಮಾಯಿಸಿದ್ದೇ ಇದರ ಸಾಧನೆ ಎಂದರು. ದೈನಿಕ ಧಾರಾವಾಹಿಯಂತೆ ಪ್ರತಿನಿತ್ಯ ವರ್ಗಾವಣೆಪಟ್ಟಿ ಬರ್ತಾನೆ ಇದೆಯಲ್ಲ ಅದರ ಕುರಿತು ಕುತೂಹಲ ಆಯಿತು. ಒಂದೊಂದು ಜಾಗಕ್ಕೂ ಅದೆಷ್ಟೋ ಲಕ್ಷ ಪೀಕ ಬೇಕಂತೆ. ಲಂಚದಲ್ಲೂ ಜಾತಿವಾರು ಇದೆಯಂತೆ.

ಒಕ್ಕಲಿಗರಿಗೆ ಇಷ್ಟು, ದಲಿತರಿಗೆ ಇಷ್ಟು, ಲಿಂಗಾಯತರಿಗೆ ಇಷ್ಟು, ಇತರರಿಗೆ ಇಷ್ಟು ಅಂತ ದರ ನಿಗದಿಪಡಿಸಿದ್ದಾರಂತೆ. ಶಾಸಕರನ್ನು ಕರೆದುಕೊಂಡು ಹೋದರೆ ಅದಕ್ಕೆ ಬೇರೆ ರೇಟಂತೆ. ಇದನ್ನೆಲ್ಲ ಶ್ರೀಯುತರು ವಿಷದೀಕರಿಸಿದರು. ಆಡಳಿತದಲ್ಲಿ ಇದ್ದು ಅನುಭವ ಇದ್ದೋರಲ್ವ, ನಿಜ ಇರಬೇಕು. ನನಗೋ ಹಾಳಾದ ಕುತೂಹಲ. ಈ ಸರ್ಕಾರಕ್ಕೆ ಜನರಿಗಿಂತ ಹೆಚ್ಚು ಮಠಗಳ ಮೇಲೆ ಪ್ರೀತಿ, ಅಭಿಮಾನ. ಪೇಜಾವರ ಶ್ರೀಗಳು, ಆದಿಚುಂಚನಗಿರಿ ಶ್ರೀಗಳು, ಸಾವಿರಾರು ಸಂಖ್ಯೆ...ಲ್ಲಿರುವ ವೀರಶೈವ ಮಠಾಧೀಶರು ಇವರು ಹೇಳಿದರೂ ಅದೇ ರೇಟು ಕೊಡಬೇಕಾ? ರಾಮಚಂದ್ರಮಠದ ಶ್ರೀಗಳು ಹೇಳಿದರೆ ಬೇರೆ ರೇಟು ಇರುತ್ತಾ... ಯಾಕೆಂದರೆ ಯಾವ ಶ್ರೀಗಳೂ ತಮ್ಮ ಅಮೃತವಾಣಿಯ... ವ್ಯರ್ಥಮಾಡಿಕೊಳ್ಳಬಯಸುವುದಿಲ್ಲ. ಈ ಸರ್ವಸಂಗ ಪ... ...ಗಿಗಳಿಗೆ 'ಯಥಾ ಜಾಗೇ' ಪಾದಕಾಣಿಕೆ ಅರ್ಪಿಸಬೇಕಾಗುತ್ತದಲ್ಲಾ ಅದಕ್ಕೇನಾದರೂ ರಿಯಾಯಿತಿ ಇರುತ್ತಾ? ಇದಕ್ಕೆ ಕುಮಾರಸ್ವಾಮಿಯವರಿಂದ ತೃಪ್ತಿಕರವಾದ ಉತ್ತರ ಬರಲಿಲ್ಲವಾದರೂ ಅದನ್ನು ಎಲ್ಲಿಗೆ ತಲುಪಿಸಬೇಕು ಅನ್ನುವುದರ ಸೂಕ್ಷ್ಮ ತಿಳಿಯಿತು. ಆ ಶ್ರೀಮನ್ನಾರಾಯಣನನ್ನು ಕಾಣಬೇಕಾದರೆ ಮೊದಲು ದ್ವಾರಪಾಲಕರಾದ ಜಯವಿಜಯರನ್ನು ಒಲಿಸಿಕೊಳ್ಳಬೇಕಾಗಿತ್ತಲ್ಲ, ವೈಕುಂಠದಲ್ಲಿ. ಹಾಗೆನೇ ಈ ಯಡ್ಡಿಯುಗದಲ್ಲಿ ವಿಜಯರಾಘವರನ್ನು ಒಲಿಸಿಕೊಂಡು 'ಜಾಗಯಜ್ಞ'ಕ್ಕೆ ನಿಗದಿಪಡಿಸಿದ ಹಣವನ್ನು ಸಮರ್ಪಿಸಿದರೆ ಯಶಸ್ಸುಗಳಿಸುವುದರಲ್ಲಿ ಸಂಶಯವಿಲ್ಲವಂತೆ. ಸತತವಾದ ಯಜ್ಞದಿಂದ ಈ ಈರ್ವರು ಸಹೋದರರೂ ಆಯಾಸಗೊಳ್ಳುವ ಸಂಭವ ಉಂಟಂತೆ. ಇದರ ಪರಿಹಾರಾರ್ಥ ಅಂತಹ



ಸಮಯಗಳಲ್ಲಿ ಯಡ್ಡಿ ಭಕ್ತ ಹನುಮಂತನೂ, ಯಡ್ಡಿ ಆರಾಧಕ ಸಚಿವರೊಬ್ಬರೂ ನೆರವಿಗೆ ಬರುತ್ತಾರಂತೆ. 'ಸಚಿವ'ರೋ, 'ಸಚಿವೆ'ಯೋ ಎಂದು ಪ್ರಶ್ನಿಸಲಾಗಿ ಹುಸಿನಗೆ ನಕ್ಕರು ಶ್ರೀಯುತರು. ಇದೂ ಸ್ವಾನುಭವದ ಮಾತೇ ಅನ್ನಿ!

ಥತ್ ಈ ರಾಜಕಾರಣಿಗಳನ್ನ ಕೇಳಿದರೆ ಹೀಗೇ ಏನೇನೋ ಅಪದ್ಧ ನುಡೀತಿರ್ತಾರೆ ಅಂತ ಸಾಂಸ್ಕೃತಿಕ ಲೋಕದ ಕಡೆ ತಿರುಗಿದೆ. ಫಿಲ್ಮ್‌ಚೇಂಬರ್ ಅಧ್ಯಕ್ಷೆ ಜಯಮಾಲಾ ನೆನಪಾದರು. ಅವರನ್ನು ಕಂಡೆ. 'ನೂರು ದಿನದ ಸಾಧನೆ' ಎನ್ನುತ್ತಿದ್ದಂತೆ 'ಭಯಂಕರ ಉಂಟು' ಅಂದರು. 'ನಿಮ್ಮ ಸಾಧನೆ ಅಲ್ಲ ಸರ್ಕಾರದ ಸಾಧನೆ' ಅಂದದ್ದಕ್ಕೆ 'ಅದೂ ಭಯಂಕರ ಉಂಟು' ಎಂದರು. ಪೆನ್ನು ಪುಸ್ತಕ ರೆಡಿಮಾಡಿಕೊಂಡೆ.'ಎಲ್ಲಾ ಆಫ್ ದಿ ರೆಕಾರ್ಡ್' ಅಂದರು. 'ನೀವು ಟಿವಿ ನೋಡ್ತೀರಾ' ಕೇಳಿದರು. ಟಿವಿ ನೋಡದೆ ಮನುಷ್ಯರಾಗಿರಲು ಸಾಧ್ಯ ಇಲ್ಲ ಅನ್ನುವ ಸತ್ಯ ತಿಳಿಸಿದೆ. 'ಪಿಕ್ಚರ್ ಬಿಡುಗಡೆ ಆದ ದಿವಸ ಪ್ರೇಕ್ಷಕರ ಅಭಿಪ್ರಾಯ ತಿಳಿಸುತ್ತಾರೆ, ಪ್ರೇಕ್ಷಕ ಏನು ಹೇಳ್ತಾನೆ?' ಕೇಳಿದರು. ನೆನೆಪಿಸಿಕೊಂಡೆ. ಏನು ಅವರು ಹೇಳುವುದು? 'ಬೊಂಬಾಟಾಗಿದೆ', 'ಹಂಡ್ರೆಡ್ ಡೇಸ್ ಗ್ಯಾರಂಟಿ', ಸಕತ್ ಆಗಿದೆ'... ಇಂತಹ ಮಾತುಗಳು. ಸಿನಿಮಾ ಎಷ್ಟು ಕೆಟ್ಟದಾಗಿದ್ದರೂ ಇಂತಹದ್ದೇ ಮಾತು! ಇದನ್ನ ಅವರಿಗೆ ತಿಳಿಸಿದೆ. 'ಹಾಗೇನೇ ನೂವ್ರೂನೇವೇ' ಅಂದರು.

ಕಚಡಾ ಸಿನಿಮಾಕ್ಕೂ 'ಹಂಡ್ರೆಡ್ ಡೇಸ್ ಗ್ಯಾರಂಟಿ' ಅಂತಾರಲ್ಲ, ಇಂತಹವೇ ಹಲವು ಪ್ರಖ್ಯಾತ ಸಿನಿಮಾ ನಾಮಧೇಯರ ಚಿತ್ರಗಳು ನೂರು ದಿನಾನೂ ಕಾಣ್ತಿದಾವಲ್ಲ, ಪ್ರೇಕ್ಷಕರ ಅಭಿರುಚೀನೇ ಹಾಳಾಯ್ತಾ ಅನ್ನೋ ಸಂಶಯ ಕಾಡಿತು. ಪ್ರಸಿದ್ಧ ಪತ್ರಿಕೆಯೊಂದರ ಸಿನಿಮಾ ವರದಿಗಾರನನ್ನು ಹಿಡಿದೆ. 'ಹಂಡ್ರೆಡ್ ಡೇಸ್' ಅಂದೆ. 'ಬರೀ ಹಂಡ್ರೆಡ್ ಡೇಸ್ ಏನು ಮುನ್ನೂರ ಅರವತ್ತೈದು ದಿನ ಗ್ಯಾರಂಟಿ' ಅಂದ ಅವ. 'ಅಲ್ಲಪ್ಪ ನೂರು ದಿನ ಅಂತಾರಲ್ಲ' ಅಂದೆ 'ನೂರು ದಿನ ಏನು. ಮೂರು ಮೂರು ದಿನಕ್ಕೂ ನಡೀಬೇಕು ಇಂತಹವು' ಅಂದ. ವಿಷಯ ಏನಪ್ಪಾ ಅಂದರೆ ಸರ್ಕಾರ ಬಿಡುಗಡೆ ಮಾಡಿದ್ದ ಪುಟಗಟ್ಟಲೇ ಜಾಹೀರಾತಿನಿಂದ ಪುಳಕಿತನಾಗಿದ್ದ! ಸಮಯಕ್ಕೆ ಸರಿಯಾಗಿ ಸಂಬಳ ಸಿಗುತ್ತಲ್ಲಾ ಅಂತ ಅವನ ಖುಷಿ. ಅವನನ್ನು ಜಾಹೀರಾತಿನ ಗುಂಗಿನಿಂದ ಎಳೆದು ತರುವಷ್ಟರಲ್ಲಿ ಸಾಕುಬೇಕಾಯಿತು. 'ಓ ಹಂಡ್ರೆಡ್ ಡೇಸ್ ಪಿಕ್ಚರ್‌ದಾ' ಅಂತ ಇಹಪ್ರಪಂಚಕ್ಕೆ ಇಳಿದುಬಂದ. 'ಬಾ ತೋರುಸ್ತೀನಿ' ಅಂದ. ಹೋದೆ.

'ಚಿತ್ರಮಂದಿರ ಭರ್ತಿಯಾಗಿದೆ' ಸಿನಿಮಾ ಮಂದಿರದ ಮುಂದೆ ಬೋರ್ಡು. ಒಳಗೆ? ಜನರ ಸುಳಿವೇ ಇಲ್ಲ!

'ಒಳಗೆ ಖಾಲಿ, ಹೊರಗೆ ಭರ್ತಿ.' ಇದು ಹಂಡ್ರೆಡ್ ಡೇಸ್ ಕತೆ!

ಇದು ಯಾಕೆ ಹೀಗೆ?

'ನಾನು ಸೂಪರ್‌ಸ್ಟಾರು. ಜನಪ್ರಿಯ ಅನ್ನುವ ಭ್ರಮೆ. ಅವೇ ಕೌಂಟರಿಗೆ ಬಂದು ಟಿಕೆಟ್ ಹರೀತಾ ಕುಂತ್ಕೋಳ್ಳೋದು ಉಂಟು' ವರದಿಗಾರ ವಿವರಿಸಿದ.

ಅಲ್ಲ ಇಂತಹವ್ರೂ ಸರ್ಕಾರದ ನೂರು ದಿನಗಳ ಸಾಧನೇನೂ ಇರಬಹುದಾ ಅನ್ನುವ ಅನುಮಾನವೇನೂ ಬಂತು ಅನ್ನಿ.

ಇದೇ ಗುಂಗಿನಲ್ಲಿರುವಾಗ ನಟ ಭಯಂಕರರೊಬ್ಬರ ಭೇಟಿ ಆಯಿತು. ನಾಟಕ ಕಂಪೆನಿ ನಡೆಸಿದ ಅನುಭವವೂ ಅವರಿಗಿತ್ತು, ಅವರ ಮುಂದೆ 'ನೂರು ದಿನದ ಸಾಧನೆ' ಸುದ್ದಿ ಎತ್ತಿದೆ. 'ಆಹಾ ಇದರಲ್ಲೇನಿಹುದು ಅಚ್ಚರಿಯು' ಅಂತ ನಾಟಕ ಶೈಲಿಯಲ್ಲೇ ಕೇಳಿದರು. ನಾನು ಅವರ ಮುಖ ನೋಡಿದೆ. 'ನಾಟಕ ಕಂಪೆನಿಯವರು ಕಲೆಕ್ಷನ್ ಡಲ್ ಆದಾಗ ಏನು ಮಾಡ್ತಾರೆ ಗೊತ್ತಾ? ಬಹುಜನ ಒತ್ತಾಯದ ಮೇರೆಗೆ ನಾಟಕವನ್ನು ರಂಗದ ಮೇಲೆ ತರುತ್ತಿದ್ದೇವೆ ಅಂತ ಸಾರುತ್ತಾರೆ. ಯಾರು ಒತ್ತಾಯಿಸೋಕೆ ಬಂದಿರ್ತಾರೆ? ಯಾರೂ ಇಲ್ಲ, ಆದರೂ ಜನ ನಂಬುತ್ತಾರೆ ಅನ್ನೋ ಭ್ರಮೆ. ಹಾಗೆಯೇ ಇದೂನೆವೆ' ಅಂದರು!

ಅವರಿಂದ ಕಳಚಿಕೊಂಡು ಸಾಹಿತ್ಯಲೋಕದ ಚಿಂತಕರೊಬ್ಬರನ್ನು ಕಂಡೆ. ವಿಷಯ ತಿಳಿಸಿದೆ. 'ಸರ್ಕಾರದ ಸಾಧನೆ ಶೂನ್ಯ' ಎಂದರು. 'ಸರ್ಕಾರ ಗಣಿ ಮಾಲೀಕರ ಕೈಗೊಂಬೆಯಾಗಿದೆ' ಅಂತ ಛೇಡಿಸಿದರು. ನಾನು ಅಲ್ಲಗಳೆದೆ. ಮುಖ್ಯಮಂತ್ರಿಯವರು ನಾನು ಅಧಿಕಾರಕ್ಕೆ ಬಂದನಂತರ ಹೊಸಗಣಿಗಳಿಗೆ ಪರವಾನಗಿ ನೀಡಿಲ್ಲ ಎಂದು ಸಾರಿಸಾರಿ ಹೇಳುತ್ತಿರುವುದನ್ನ, ಅಕ್ರಮ ಗಣಿಗಾರಿಕೆಯ ವಿವರ ಪಡೆಯಲು ಲೋಕಾಯುಕ್ತರಿಗೆ ಅಧಿಕಾರ ನೀಡಿರುವುದನ್ನ ತಿಳಿಸಿದೆ.

"ಅಷ್ಟಾದ್ರೂ ಆ ಪಾರ್ಟಿ ಹಾಳಾಗದಿಲ್ಲ ಕಣೋ."

"ಅಟೊಂತರ ಕುದುದ್ರು ಪಾಟ್ಸಿ ಹಾಳಾಗಿಲವಲ್ಲ ಅಂಗೆ ಅನ್ನು" ಎಂದು ಜುಮ್ಮಿ ನಕ್ಕಳು.

"ಎಷ್ಟಾಷ್ಟು ಕರಟ್ ಕಣಕ್ಕ, ನಂಗೆ ಬಿಪಿ ಇಲ್ಲ, ಶುಗರು ಇಲ್ಲ, ಒಂದಿಷ್ಟು ಲೇಜಿಯಾಗಿರ್‍ತಿನಿ. ಒಂದಿಷ್ಟು ಸುಸ್ತಾಗಿರತಿನಿ ಅನ್ನದು ಬುಟ್ರೆ ನಾನು ತುಂಬಾ ಹೆಲ್ತಿ ಕಣಕ್ಕ."

"ಯೇಲ್ತಿ ಬುಡು, ಕಳ್ಳು ತುಂಬ ಕುಡಿಯದು, ಕಳ್ಳುತುಂಬ ಬಾಡು ತಿನ್ನದು, ಎಲ್ಲಿ ಅಂದ್ರಲ್ಲಿ ಮನಿಗಿರದು, ಇದೇ ಅಲವೇನ್ಲ ನಿನ್ನ ಕ್ಯಲಸ?".

"ಕಾಂಗ್ರೆಸ್‌ನೋರದು ಸದ್ದಿಕದೆ ಅಲವೇನೆ ಕ್ಯಲಸ?" ಎಂದ ಉಗ್ರಿ.

"ಈ ಟೈಮಲ್ಲಿ ಕಾಂಗ್ರೆಸ್‌ಗೆ ನಮ್ಮ ಬಂಗಾರಿ ತರದ ನಾಯಕಬೇಕು ಕಣೊ ಉಗ್ರಿ."

"ಬೇಕು ಸರಿಯಪ್ಪ ಆದ್ರವುನ ಕತೆ ಹೇಳೂ. ಯರಡು ಕಣ ನಟ್ಟಿ ದಾಸಯ್ಯ ಕೆಟ್ಟ ಅನ್ನಂಗಾಗ್ಯದೆ ಅವುನ ಕತೆ."

"ಇವತ್ತು ತೀರ ಅವುಮಾನಾಗಿರದು ಅವುನಿಗೆ ಕಣೊ ಉಗ್ರಿ."

"ಅವುನಿಗೇನವುಮಾನಾಗಿದ್ದತೂ?"

"ಆಯ್ಯೋ ಅವುಮಾನ ಅಂತ ಕೇಳ್ತಿಯೇನಕ್ಕ? ಅವುನ ಯರಡು ಮಕ್ಕಳೂ ಸೋತವೆ. ಅವುನೇ ಬ್ಯಳಿಸಿರೊ ಹರತಾಳು ಹಾಲಪ್ಪ ಅನ್ನೋನು ಮಂತ್ರಿಯಾಗಿ ಹಾಲು ಮೊಸರು ಬ್ಯಣ್ಣೆನ್ಯಲ್ಲ ಸ್ವರಗರಿತ ಬಾರುಸ್ತ ಅವುನೆ. ಇನ್ನ ಬೇಳೂರು ಗೋಪಾಲಕಿಷ್ಣ ಅನ್ನೊನು 'ಬಂಗಾರಪ್ಪನಿಗೆ ನನ್ನ ಜೀವ ಕೊಡ್ತಿನಿ' ಅಂತಿದ್ದ. ಅಂಥೋನೀಗ 'ಎಡೂರಪ್ಪನಿಗೆ ಯದೆ ಕೊಡ್ತಿನಿ ಬೇಕಾದ್ರೆ ವದಿಲಿ' ಅನ್ನಂಗಾಗ್ಯವುನೆ. ಒಂದೇ ಯಲಕ್ಸನ್ನಲಿ ಅಪ್ಪಮಕ್ಕಳು ಸೇರಿ ಮೂರು ಜನ ಸೋತು ಮೂಲೆ ಸೇರಿಬುಟ್ಟವುರೆ. ನಿಜವಾಗ್ಲು ನಮ್ಮ ಬಂಗಾರಿಗೆ ಇದು ಕ್ಯಟ್ಟ ಕಾಲ ಕಣೊ ಉಗ್ರಿ."

"ಕ್ಯಟ್ಟ ಕಾಲ ಅಂದ್ರೆ ಅದವುನೆ ತಂದುಕೊಂಡಿದ್ದಲ ವೇನೊ?"

"ಅದೂ ಸರಿನೆ. ಆದ್ರು ಬಂಗಾರಿಗೆ ಇಂತ ಸ್ಥಿತಿ ಬರಬಾರದಿತ್ತು. ಇಟೀಸ್ ರಿಯಲಿ ಸೇಂ ಟು ಅವರ್ ಎಕ್ಸ್ ಲೀಡರ್."

'ಗಣಿಹಗರಣ ಪ್ರಹಸನ ಇದು' ಎಂದರು. ವಿಷಯ ಏನು ಅಂದರೆ ಗೋಗ್ರಹಣ ಪ್ರಸಂಗದಲ್ಲಿ ಉತ್ತರಕುಮಾರ ಆಸ್ಥಾನದ ಮಹಿಳೆಯರ ಎದುರು ಬಡಾಯಿಕೊಚ್ಚಿ ಕೌರವರ ಸೇನೆ ಕಂಡ ತಕ್ಷಣ ಬೆದರಿ ಓಡಿಹೋದನಲ್ಲ ಹಾಗೇನೆ ಇದೂನೆವೆ. ಉತ್ತರ ಪೌರುಷ ಒಲೆ ಮುಂದೆ ಯಡ್ಡಿ ಪೌರುಷ ಮಾಧ್ಯಮದವರ ಎದುರು ಅನ್ನುವುದು ಅವರ ಅಭಿಪ್ರಾಯ ಆಗಿತ್ತು.

ಇದನ್ನೆಲ್ಲ ಕೇಳಿದ ಮೇಲೆ ರಾಜಕಾರಣಿಗಳಿಗೂ ಒಂದು ಕೋರ್ಸು ಪ್ರಾರಂಭ ಆಗಿರುವುದು ನೆನಪಿಗೆ ಬಂತು. ಅದು ಐದು ತಿಂಗಳ ಅವಧಿಯಂತೆ. ಅಲ್ಲಿ ಯಾವ ಯಾವ ವಿಷಯಗಳನ್ನು ಬೋಧಿಸಲಾಗುತ್ತದೆ ಎಂಬುದು ಖಚಿತವಾಗಿ ಗೊತ್ತಿಲ್ಲ. ಬೋಧಕರು ಯಾರು ಯಾರು ಎಂಬುದರ ಬಗ್ಗೆಯೂ ಸ್ಪಷ್ಟತೆ ಇಲ್ಲ. ಆಡಳಿತ ಮಂಡಳಿಯವರು ಈ ಕೆಳಕಂಡ ವಿಷಯ ಹಾಗೂ ಬೋಧಕರನ್ನು ಪರಿಶೀಲಿಸಬಹುದಾಗಿದೆ.

1. ವರ್ಗಾವಣೆ : ಬತ್ತದ ಜಲ-ವಿಜಯ-ರಾಘವ
2. ಬುರುಡೆಯೇ ಏಳ್ಗೆಯ ಬೇರು- ಯಡ್ಯೂರಪ್ಪ
3. ವಶೀಕರಣ ವಿಧಾನಗಳು- ಶೋಭಾ ಕರಂದ್ಲಾಜೆ

ನೂತನ ಮಾದರಿ!

ನೂರು ದಿನಗಳ ಸಾಧನಾ ಸಮಾವೇಶ

ಹಲವಾರು ಜನಪರ(!) ಘೋಷಣೆ. ಅದರಲ್ಲಿ ಒಂದು-'ಒಂದರಿಂದ ಏಳನೇ ತರಗತಿಯವರೆಗಿನ ಮಕ್ಕಳಿಗೆ ಉಚಿತ ಬಸ್‌ಪಾಸ್'

ಗ್ರಾಮೀಣ ಮಕ್ಕಳು ತಮ್ಮ ಊರಿನ ಶಾಲೆಗೆ ಹೋಗುತ್ತಾರೆ. ಪ್ರತಿಯೊಂದು ಊರಿನಲ್ಲೂ ಶಾಲೆಗಳಿವೆ. ಈ ಸೌಲಭ್ಯ ಪಡೆಯಬೇಕಾದರೆ ಅವರೇನು ಮಾಡಬೇಕು? ಪಟ್ಟಣ, ನಗರಗಳ ಕಾನ್ವೆಂಟ್‌ಗಳ ಸೇರಬೇಕು!

ಹಿಂದೆ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದರು; 'ಐದುನೂರು ಸರಕಾರಿ ಶಾಲೆಗಳನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆ'

ಯಾಕೆ ನಿರ್ಧಾರ?

ಮಕ್ಕಳ ಸಂಖ್ಯೆ ಕಡಿಮೆ!

ಈ ಮಕ್ಕಳೇನು ಮಾಡಬೇಕು?

ಉಚಿತ ಪಾಸ್ ವ್ಯವಸ್ಥೆ ಇದೆಯಲ್ಲ, ಇತರೇ ಶಾಲೆಗಳನ್ನು ಸೇರಬೇಕು!

ಸರ್ಕಾರಿ ಶಾಲೆಯಿಂದ ಮತ್ತೆ ಸರ್ಕಾರಿ ಶಾಲೆಗೆ ಯಾಕೆ ಹೋಗಬೇಕು? ಕಾನ್ವೆಂಟ್‌ಗೆ ಸೇರುತ್ತಾರೆ!

ಖಾಸಗೀಕರಣದ ನೂತನ ಮಾದರಿ ಇದು!

ಭಾಜಪದ ಸ್ವದೇಶಿ ಮಾದರಿ ಆಡಳಿತವಿದು!

ಮರೆಯುವ ಮುನ್ನ



ಪಿ. ಲಂಕೇಶ್ ನವೆಂಬರ್ 9, 1990


ವರದಿಗಾರರಿಗೆ ಹಿತವಚನ



ಹೊಸ ವರದಿಗಾರನೊಬ್ಬನನ್ನು ನೇಮಿಸುವಾಗ ಏನು ಹೇಳಬೇಕು? ಮೊನ್ನೆ ಕ್ರಾಂತಿಕಾರಿ ಚಟುವಟಿಕೆಗಳ ಹುಡುಗನೊಬ್ಬನಿಗೆ ತನ್ನ ಜಿಲ್ಲೆಯಿಂದ ವರದಿ ಮಾಡಲು ಹೇಳಿದೆವು. ಈತ ಸ್ವಲ್ಪ ಬಂಡಾಯ ಪ್ರವೃತ್ತಿಯವ. ಅದೇನೇ ಆದರೂ ಹೆಂಗಸರ ಪರ, ದಲಿತರ ಪರ, ರೈತರ ಪರ, ಕಾರ್ಮಿಕರ ಪರ... ಮೆಚ್ಚಿ ತಲೆದೂಗಿ ಹೇಳಿದೆ. ಬಹಳ ಒಳ್ಳೆಯದು. ಇವರೆಲ್ಲರಿಗೆ ಒಳ್ಳೆಯದಾಗುವುದು ನೀನು ಯಾವ ರೀತಿಯಲ್ಲಿ ವರದಿ ಮಾಡಿದಾಗ ಗೊತ್ತೆ? ಸತ್ಯನಿಷ್ಠೆಯಿಂದ ವರದಿ ಮಾಡಿದಾಗ ಮಾತ್ರ. ಸತ್ಯಕ್ಕೆ ವಿಚಿತ್ರ ಮುಖಗಳಿರುತ್ತವೆ. ಬಡವರ ಕಷ್ಟ ಮತ್ತು ಶ್ರೀಮಂತರ ದಬ್ಬಾಳಿಕೆ ಎಲ್ಲರಿಗೆ ಗೊತ್ತಾಗುವುದು ಸತ್ಯದ ವೈಚಿತ್ರ್ಯಗಳನ್ನು ಗ್ರಹಿಸಿದಾಗ ಮಾತ್ರ. ದಲಿತರು, ಮುಸ್ಲಿಮರು, ಹಿಂದೂಗಳು, ಸ್ತ್ರೀಯರು-ಎಲ್ಲರೂ ಮನುಷ್ಯರೇ. ಬಡವ ಶೋಷಿತನಾಗಿರುವಂತೆಯೇ ನೀಚನೂ ಸಣ್ಣವನೂ ಆಗಿರುವುದು ಸಾಧ್ಯವಿದೆ. ಕಾರ್ಮಿಕ ಸುಲಿಗೆಗೊಳಗಾಗಿರುವಂತೆಯೇ ಸೋಮಾರಿಯೂ ಸ್ವಾರ್ಥಿಯೂ ಆಗಿರುವುದು ಸಾಧ್ಯವಿದೆ. ಒಂದು ಘಟನೆಯನ್ನು ವರದಿ ಮಾಡುವಾಗ ನೀನು ಮನಸ್ಸಿನಲ್ಲಿ ಬಡವ, ಕಾರ್ಮಿಕ, ಅಲ್ಪಸಂಖ್ಯಾತ-ಎಂಬ ಮೊದಲೇ ಸಿದ್ಧವಾದ ಅಚ್ಚುಗಳನ್ನಿಟ್ಟುಕೊಂಡು ಹೊರಡಬಾರದು. ಮನುಷ್ಯರೆಲ್ಲ ಸೇರಿ ಆಗಿರುವ ಘಟನೆ ಅಥವಾ ಅವಾಂತರ ಎಂದು ಮಾತ್ರ ಹೊರಡಬೇಕು. ಆಗ ಶ್ರೀಮಂತರ ಕಷ್ಟ ಮತ್ತು ಬಡವನ ಗೋಳುಗಳೆಲ್ಲ ಗೋಚರಿಸುತ್ತ ಹೋಗುತ್ತವೆ.

ಪ್ರತಿಯೊಬ್ಬ ಒಳ್ಳೆಯ ಲೇಖಕನೂ ಅನುಭವ ಮತ್ತು ಭಾಷೆಯ ಜೀವಂತಿಕೆ ಕಾಪಾಡಿಕೊಳ್ಳುತ್ತ ಹೋಗುತ್ತಾನೆ. ಹಾಗೆಯೇ ವರದಿಗಾರ ಬದುಗಣ್ಣಿನಿಂದ ತಿಳಿದುಕೊಳ್ಳತೊಡಗಿದಾಗ ಕ್ಲೀಷೆಗಳು, ಹಳಸಲು ಪದಗಳು, ಪೂರ್ವಗ್ರಹಗಳು ಒತ್ತಟ್ಟಿಗೆ ಸರಿದು ಸತ್ಯ ನಿಚ್ಚಳವಾಗುತ್ತ ಹೋಗುತ್ತದೆ. ಇನ್ನೊಂದು ಮುಖ್ಯ ಮಾತು. ವರದಿಗಾರ ಹೆಚ್ಚು ಮಾತಾಡದ, ತನ್ನೊಂದಿಗೆ ಮಾತಾಡುವ ಜನರೊಂದಿಗೆ ಸ್ನೇಹ ಬೆಳೆಸಿಕೊಳ್ಳಲು ಇಷ್ಟಪಡದ ಲಜ್ಜಾವಂತನಾಗಿರಬೇಕು; ತಾನೇ ಮಾತಾಡುವುದಕ್ಕಿಂತ ಹೆಚ್ಚಾಗಿ ಮಾತಾಡಿದ್ದು ಕೇಳುವವನಾಗಿರಬೇಕು. ಅಷ್ಟೇ ಮುಖ್ಯವಾಗಿ ನಿಷ್ಠುರತೆ, ಪ್ರಾಮಾಣಿಕತೆಯಿಂದ ತಿಳಿದುಕೊಂಡದ್ದನ್ನು ಸಿಟ್ಟು, ದ್ವೇಷ, ಮತ್ಸರವಿಲ್ಲದ ತಣ್ಣನೆಯ, ಸ್ಪಷ್ಟ, ಸರಳ ಭಾಷೆಯಲ್ಲಿ ಬರೆಯಬೇಕು. ವರದಿ ಕೂಡ ಒಂದು ಕಸುಬುಗಾರಿಕೆ, ಬರೆಯುವ ಶ್ರೇಷ್ಠಕಲೆ ಎಂಬುದನ್ನು ಮರೆಯಬಾರದು.

ಒಂದು ಕೇಸು, ಒಂದು ಚಿಂತನೆ



ಒಂದು ಕೇಸು ಮತ್ತು ಒಂದು ಸಭೆ. ಬಿಜಾಪುರದಲ್ಲಿ ಕಳೆದ ಮೂರು ವರ್ಷದಿಂದ ನಡೆಯುತ್ತಿದ್ದ ಕಟ್ಲೆಯನ್ನು ರಾಜಿಯಲ್ಲಿ ಮುಕ್ತಾಯಗೊಳಿಸಲು ನಮ್ಮ ಮತ್ತು ಎದುರುಪಾರ್ಟಿಯ ವಕೀಲರು ತೀರ್ಮಾನಿಸಿದ್ದರು. ಹೋದ ಸಲ ಬಿಜಾಪುರಕ್ಕೆ ವರ್ಷದ ಹಿಂದೆ-ಹೋದಾಗ ಬಸ್ಸಿನಲ್ಲಿ ಹೋಗಿದ್ದೆ. ಕೆಟ್ಟ ರಸ್ತೆ, ಗಬ್ಬು ವಾತಾವರಣ, ಹದಿಮೂರು ಗಂಟೆ ಬಸ್ಸಿನಲ್ಲಿ ಕುಕ್ಕರಿಸಿರುವುದು; ಇದರಿಂದೆಲ್ಲ ತಲೆ ರೋಸಿಹೋಗಿ ಈ ಸಲ ರೈಲಿನಲ್ಲಿ ಹೋಗಲು ತೀರ್ಮಾನಿಸಿದೆ. ರೈಲಿನಲ್ಲಿ ಹದಿನಾರು ಗಂಟೆ ಪ್ರಯಾಣ! ಬೆಂಗಳೂರಲ್ಲಿ ಬೆಳಗ್ಗೆ ಒಂಭತ್ತು ಮುಕ್ಕಾಲಿಗೆ ಕುಳಿತರೆ ಅದು ವಿಜಾಪುರ ಸೇರುವುದು ಮರುದಿನ ಮುಂಜಾನೆ ನಾಲ್ಕು ಗಂಟೆಗೆ! ಆದರೂ ಎಲ್ಲ ಸರಿಹೋಯಿತು. ನಾನಿದ್ದ ಪುಟ್ಟ ಕಂಪಾರ್ಟ್‌ಮೆಂಟಿನ ನಾಲ್ಕು ಬರ್ತ್‌ಗಳಲ್ಲಿ ಇದ್ದವನು ನಾನೊಬ್ಬನೇ. ಓದಲು, ಬರೆಯಲು, ಚಿಂತಿಸಲು ಒಳ್ಳೆಯ ಅವಕಾಶ. ನನ್ನಲ್ಲಿದ್ದ ಕನ್ನಡ, ಇಂಗ್ಲಿಷ್ ಪತ್ರಿಕೆಗಳನ್ನೆಲ್ಲ ಮುಗಿಸಿ, ಮಾರ್ಕ್ವೆಸ್‌ನ 'ಕ್ಲಾಂಡಸ್ಟೈನ್ ಇನ್ ಚಿಲಿ' ಪುಸ್ತಕ ಮುಗಿಸಿ ಹೊಸ ಪತ್ರಿಕೆಗಳನ್ನು ಕೊಳ್ಳಲು ಸುತ್ತ ನೋಡಿದೆ. ಚಿಕ್ಕಜಾಜೂರಿನಲ್ಲಿ ಪತ್ರಿಕೆಗಳನ್ನು ಮಾರುತ್ತಿದ್ದ ಹುಡುಗ ನನಗೆ ಪರಿಚಿತ, ಉಚಿತವಾಗಿ ಪತ್ರಿಕೆಗಳನ್ನು ಕೊಡಲು ಬಂದ. ನಾನು ಅವನಿಂದ ಕೊಂಡದ್ದು ಏನು ಗೊತ್ತೆ-ಬಾಲಮಿತ್ರ, ಚಂದಮಾಮ. ಒಂದಿಷ್ಟೂ ಅಹಂಕಾರವಿಲ್ಲದ, ಕೃತಕತೆಯನ್ನು ಮುಗ್ಧವಾಗಿ ಹೇಳುವ ಎರಡು ಪತ್ರಿಕೆಗಳು. ಬಾಲಮಿತ್ರದ 'ಸ್ಟಂಟ್ ಮಾಸ್ಟರ್' ಕತೆ ಓದುತ್ತ ರೋಮಾಂಚಿತನಾದೆ.


ಬಿಜಾಪುರದಲ್ಲಿ ಬರೀ ಕೇಸಿದ್ದರೆ ಬೇಸರವಾಗುತ್ತಿತ್ತು ಎಂದು ಕಾಣುತ್ತದೆ; ಅಲ್ಲಿ ತರುಣ ಸಾಹಿತಿಯೊಬ್ಬನ ಕಥಾಸಂಕಲನವೊಂದರ ಬಿಡುಗಡೆಯನ್ನು 'ಸ್ಫೂರ್ತಿ' ಎಂಬ ಮಹಿಳಾ ಸಂಘದವರು ಇಟ್ಟುಕೊಂಡಿದ್ದರು. ಪುಸ್ತಕ ಸಾಧಾರಣ ಇತ್ತು, ಸ್ವಾಗತಿಸಿದವರು ತಮಿಳು ಹೆಣ್ಣುಮಗಳು; ಶ್ಯಾಮಲ ವರದರಾಜನ್ ಎಂದು ಕಾಣುತ್ತದೆ. ತುಂಬ ಉತ್ಸಾಹದ, ಚುರುಕಾದ, ಪ್ರೀತಿಯ ಹೆಂಗಸು; ಅಲ್ಲಿಯ ಸ್ಕೂಲಿನ ಮೇಡಂ. ಆಕೆ ತಮ್ಮ ಭಾಷಣದಲ್ಲಿ ನನ್ನ 'ತಾಯಿ' ಎಂಬ ಪದ್ಯ ಮತ್ತು ನಾನು 'ತಯಾರಿಸುತ್ತಿರುವ' ಪತ್ರಿಕೆಯ ಬಗ್ಗೆ ಮಾತಾಡಿದರು. ಆಕೆಯ ಭಾಷಣವನ್ನು ಪ್ರಸ್ತಾಪಿಸುತ್ತಲೇ ನನ್ನ ಮಾತು ಆರಂಭಿಸುವುದೆಂದು ತೀರ್ಮಾನಿಸಿದೆ. ಆಕೆ ಬೇಸರಪಟ್ಟುಕೊಳ್ಳಬಾರದೆಂದು ಕೇಳಿಕೊಂಡು "ನನ್ನ ಪದ್ಯದ ಹೆಸರು 'ಅವ್ವ'" ಎಂದು ಹೇಳಿ ಅವ್ವ, ಅಮ್ಮ, ತಾಯಿ, ಮಾತೃ, ಅಬ್ಬೆ, ಮಮ್ಮೀ-ಎಂಬ ಮಾತುಗಳಿಗಿರುವ ಭಾವಕೋಶದ ಭಿನ್ನತೆ ಕುರಿತು ಹೇಳಿದೆ. ಏಕಲವ್ಯನ ಅಬ್ಬೆ ಮತ್ತು ನನ್ನ ಅವ್ವ ಇನ್ನಿತರರ ಅಮ್ಮ ಮತ್ತು ಮಮ್ಮಿಗಿಂತ ಹೇಗೆ ಬೇರೆತರಹ ಎಂದು ವಿವರಿಸಿದೆ. ಈ ಭಾವಕೋಶವನ್ನು ತಿಳಿದವರು ಮಾತ್ರ ಕವಿಯಾಗುತ್ತಾನೆ. ಹಾಗೆಯೇ ಒಬ್ಬ ಮನುಷ್ಯ ವ್ಯಾಕರಣ, ಛಂದಸ್ಸು, ಕಾಗುಣಿತ ಕಲಿತರೂ ಹೇಗೆ ಕವಿಯಲ್ಲದೆ ಇರಬಹುದು ಎಂದು ವಿವರಿಸುತ್ತ ಆ ತರುಣ ಸಾಹಿತಿಯ ಪುಸ್ತಕಕ್ಕೆ ಬರೆದಿರುವ ಮುನ್ನುಡಿಕಾರನ ಕ್ರಾಂತಿಕಾರಿ ಘೋಷಣೆಗಳನ್ನು ಎತ್ತಿಕೊಂಡೆ. ಸಾಮಾನ್ಯ ಜನತೆಯ ಕಷ್ಟಕ್ಕೆ ಸ್ಪಂದಿಸುವವ, ಸುಸಂಸ್ಕೃತ ಬುಡಕಟ್ಟಿನಲ್ಲಿ ಹುಟ್ಟಿದವ, ಕೆಳಸ್ತರದ ಬದುಕಿನಲ್ಲಿ ಜನಿಸಿದವ... ಈ ಯಾವುದೂ ಒಬ್ಬನನ್ನು ಲೇಖನನನ್ನಾಗಿ ಮಾಡದಿರಬಹುದು, ಯಾಕೆ ಮಾಡದಿರಬಹುದು ಎಂದು ವಿವರಿಸಿದೆ. ನೋವು, ಏಕಾಂತತೆ, ಅನುಭವ ಮಾತ್ರ ಒಬ್ಬನನ್ನು ಸಾಹಿತಿಯಾಗಿ ಮಾಡಬಲ್ಲದು; ಪರಂಪರೆ ಮತ್ತು ಇಡೀ ಜಗತ್ತು ಕಂಡದ್ದು ಸಣ್ಣ ಸತ್ಯವಾಗಿಯಾದರೂ ಲೇಖಕನಲ್ಲಿ ಬರಬೇಕೆಂದು ಹೇಳಿ... ಒಂದೆರಡು ನೆಚ್ಚಿನ ಕತೆಗಳನ್ನು ನಿರೂಪಿಸಿ ವಿವರಿಸಿದೆ. ಅರೆಸತ್ಯ ಮತ್ತು ಕೊರೆಕಾಣ್ಕೆಯನ್ನು ಮಾತ್ರ ಕಾಣಬಲ್ಲ ಮನುಷ್ಯ ಅಡ್ಡದಾರಿ, ಅಡ್ಜಸ್ಟ್‌ಮೆಂಟ್‌ಗಳಿಂದ ಸಾಹಿತಿಯಾಗುವುದಿಲ್ಲ; ಅರೆಸತ್ಯದ ಬೆನ್ನುಹತ್ತಿ ನೋಯುತ್ತ ಸಾಗುವುದೇ ಆತನ ಕರ್ಮ.

ಚಂದಮಾಮಾ ಹಿಡಿದುಕೊಂಡು ಹಿಂದಿರುಗಿದೆ.

ಅಮೃತ್‌ಮಹಲ್ ಎಂಬ ಹುಸಿ ಪ್ರಹಸನ

ರಾಜ್ಯ ಸರ್ಕಾರವು ಅಮೃತಮಹಲ್ ಕಾವಲನ್ನು ರಾಮಚಂದ್ರಾಪುರ ಮಠಕ್ಕೆ ವಹಿಸಿಕೊಡುವ ಸುದ್ದಿ ಕೇಳಿದ ಶಿವಾನಂದಸ್ವಾಮಿಗಳು ಬೆಚ್ಚಿಬಿದ್ದರು. ಏಕೆಂದರೆ ಅಮೃತ್‌ಮಹಲ್ ಕಾವಲು ಪಕ್ಕದಲ್ಲೇ ಹಣ್ಣೆಸಂಸ್ಥಾನ ಮಠವಿದೆ. ಈ ಮಠಕ್ಕೆ ಕಳೆದ 25 ವರ್ಷಗಳಿಂದಲೂ ಸ್ವಾಮಿಗಳಾಗಿರುವ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಕೃಷಿಕ ಸಮಾಜದಿಂದ ಬಂದವರು.

ಅವರ ಮನೆಯಲ್ಲಿ ಹದಿಮೂರು ಎಮ್ಮೆ ಮತ್ತು ಹದಿನೈದು ದನಗಳಿದ್ದವು. ಇವುಗಳಲ್ಲಿ ಅಮೃತ್‌ಮಹಲ್ ತಳಿಯೂ ಇದ್ದವು. ಆ ಕಾರಣಕ್ಕೆ ಸ್ವಾಮಿಗಳ ಮನೆಯಲ್ಲಿ ಎಂದೂ ಹಾಲುಕೊಳ್ಳಲಿಲ್ಲ, ಮತ್ತು ದನಗಳನ್ನು ಕೊಳ್ಳಲಿಲ್ಲ. ಪ್ರಾಯಕ್ಕೆ ಬಂದ ಕರುಗಳನ್ನು ಮಾರಿ ಅದರ ಆದಾಯದಿಂದಲೇ ಮನೆ ನಡೆಸಿದ್ದಾರೆ. ಈ ಶಿವಾನಂದ ಸ್ವಾಮಿಗಳು ಪಟ್ಟಕ್ಕೆ ಬಂದ ನಂತರವೂ ಬೇಸಾಯದ ಕಸುಬು ಬಿಟ್ಟವರಲ್ಲ. ಮಠಕ್ಕೆ ಇರುವ ಭೂಮಿಯಲ್ಲಿ ಕೃಷಿ ಮಾಡಿಕೊಂಡೇ ಬಂದಿದ್ದಾರೆ.



ಆದರೆ ಅಮೃತ್‌ಮಹಲ್ ಕಾವಲು ಮತ್ತು ರಾಸುಗಳನ್ನು ರಾಮಚಂದ್ರಾಪುರದ ರಾಘವೇಶ್ವರ ಸ್ವಾಮೀಜಿ ದಾನ ಮಾಡುವಾಗ ಎಡೂರಪ್ಪನಿಗೆ ಈ ಹಣ್ಣೆ ಮಠವಾಗಲಿ, ಶಿವಾನಂದ ಸ್ವಾಮಿಗಳಾಗಲಿ ಜ್ಞಾಪಕಕ್ಕೆ ಬರಲಿಲ್ಲ. ಇನ್ನೂ ಒಂದು ಸತ್ಯಸಂಗತಿ ಏನೆಂದರೆ ಎಡೂರಪ್ಪನವರು ಈ ಕ್ಷಣಕ್ಕೂ ಅಮೃತ್‌ಮಹಲ್ ಕೇಂದ್ರವನ್ನು ನೋಡಿಲ್ಲ, ಅದರ ಪೂರ್ಣ ಮಾಹಿತಿಯೂ ಅವರಿಗೆ ಗೊತ್ತಿಲ್ಲ. ಯಡಿಯೂರಪ್ಪನ ಇಂತಹ ಮೂರ್ಖ ತೀರ್ಮಾನದ ವಿರುದ್ಧ ತಿರುಗಿಬಿದ್ದ ಶಿವಾನಂದ ಸ್ವಾಮಿಗಳು, ಬೆಂಗಳೂರಿಗೆ ಹೋಗಿ ಪ್ರೆಸ್‌ಮೀಟ್ ಮಾಡುವ ತೀರ್ಮಾನ ತೆಗೆದುಕೊಂಡರು. ಅವರಿಗೆ ಸಹಾಯಕರಾಗಿ ಚಿಕ್ಕಮಗಳೂರಿನ ಜನದನಿ ಸಂಘಟನೆಯ ಕಾರ್ಯಕರ್ತರು ಮತ್ತು ಅಜ್ಜಂಪುರದ ಯುವಕರು ನಿಂತು ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ ಒಂದು ಪ್ರೆಸ್‌ಮೀಟ್ ಆರೇಂಜ್ ಮಾಡಿದರು.

ಶಿವಾನಂದ ಸ್ವಾಮಿಗಳೂ ಕೂಡ ತಮ್ಮ ಅಹವಾಲು ಕೇಳಲು ಪತ್ರಿಕೆಯವರು ತೀವ್ರ ಕಾಳಜಿಯಿಂದ ಕಾಯುತ್ತಿದ್ದಾರೆ ಎಂದು ಭಾವಿಸಿದ್ದರು. ಸ್ವಾಮಿಗಳು "ಅಮೃತ್‌ಮಹಲ್ ಕೊಡುವುದಾದರೆ ಚಿಕ್ಕಮಗಳೂರು ಜಿಲ್ಲೆ ಯಾವುದಾದರೂ ಒಂದು ಮಠಕ್ಕೆ ಕೊಡಿ. ಇಲ್ಲ ಸರ್ಕಾರವೇ ನಿಭಾಯಿಸಲಿ" ಎಂದು ಹೇಳಿದರು. ಆದರೆ ಕೆಲ ಪತ್ರಕರ್ತರಿಂದ ಬಂದ ಎಂದು ಅರಿವಾಯಿತು.
ಪ್ರಶ್ನೆಗಳನ್ನು ಆಲಿಸಿದ ಅವರಿಗೆ, ರಾಮಚಂದ್ರಾಪುರ ಮಠದ ಪಿಂಡಗಳು ಪತ್ರಿಕೋದ್ಯಮದ ಒಳಗೂ ಸೇರಿಕೊಂಡಿವೆ ಎಂಬ
"ರಾಮಚಂದ್ರಾಪುರ ಮಠವೇ ಅಮೃತಮಹಲ್ ಕೇಂದ್ರವನ್ನು ಅಭಿವೃದ್ಧಿ ಪಡಿಸುತ್ತವೆ. ಉಳಿದವರಿಗೆ ಈ ಬಗ್ಗೆ ಹೊಟ್ಟೆಯುರಿ ಏಕೆ?" ಬೇಗನೆ ಪ್ರಶ್ನೆಗಳೆಲ್ಲಾ ಪತ್ರಕರ್ತರಿಂದ ಪುನರಾವರ್ತನೆಗೊಂಡವು. ಆಗ ಸ್ವಾಮಿ ಮಾತು ನಿಲ್ಲಿಸಿದರು. "ನಮ್ಮ ಪತ್ರಿಕೆ ಪ್ರಿಂಟ್‌ಗೆ ಹೋಗಬೇಕು. ನಮಗೆ ಸುದ್ದಿ ಕೊಡಿ" ಎಂದು ಮೊದಲೇ ಮಾಹಿತಿ ಪಡೆದಿದ್ದ ಇಬ್ಬರು ಪತ್ರಕರ್ತರು ಸ್ವಾಮಿ ಪ್ರೆಸ್‌ಮೀಟ್ ಮಾಡುವಾಗ ಹೊರಗಡೆ ಸಿಗರೇಟು ಸೇದುತ್ತಿದ್ದವು.

ಇದೆಲ್ಲಾ ಅರಿವಿಗೆ ಬಂದ ನಂತರ ಶಿವಾನಂದ ಸ್ವಾಮಿಗಳಿಗೆ "ನಾವಿನ್ನು ಪ್ರೆಸ್‌ಮೀಟ್ ಎಂಬ ಪ್ರಹಸನಕ್ಕೆ ಬರಬಾರದು. ಸಮಸ್ಯೆ ಇರುವಲ್ಲೇ ಜನ ಸಂಘಟನೆ ಮಾಡಿ ಹೋರಾಡಬೇಕು" ಅನ್ನಿಸಿತು. ಮರುದಿನ ಪತ್ರಿಕೆಗಳಲ್ಲಿ ಅವರ ಪತ್ರಿಕಾಗೋಷ್ಠಿಯ ವರದಿ ಒಂದೊಂದು ಅಂಗುಲದಷ್ಟು ಪ್ರಕಟ ವಾಗಿದ್ದೂ ಇದಕ್ಕೆ ಕಾರಣವಾಗಿತ್ತು.

ತಮಗೆ ಬೇಕಿರುವ ಮಾಹಿತಿಯನ್ನು ಮಾತ್ರ ಉದ್ದುದ್ದ ಪ್ರಕಟಿಸುವ ಇಂತಹ ಮಾಧ್ಯಮಗಳ ಹುನ್ನಾರದಿಂದ ಇವತ್ತು ಬಹಳಷ್ಟು ಚಳವಳಿಗಳು ದಿಕ್ಕು ತಪ್ಪುತ್ತಿವೆ. ಪತ್ರಿಕೆಗಳು ಮಾತ್ರವಲ್ಲ ಟಿವಿ ಮಾಧ್ಯಮವೂ ರಾಮಚಂದ್ರಾಪುರ ಮಠದ ಪರವಾಗಿ ವಕಾಲತ್ತು ವಹಿಸಿದ್ದನ್ನು ಜನ ನೋಡಿದ್ದಾರೆ.

ಅದಕ್ಕೆ ಅಮೃತ್‌ಮಹಲ್ ಕೇಂದ್ರದಲ್ಲೇ ಬೃಹತ್ ಪ್ರತಿಭಟನೆಯನ್ನು ದಿ. 16.9.08 ರಂದು ಹಮ್ಮಿಕೊಳ್ಳಲಾಗಿದೆ. ಸಮಸ್ಯೆ ಬಗೆಹರಿಯುವುದು ಹೋರಾಟದಿಂದ, ಜನಸಂಘಟನೆಯಿಂದ, ಪ್ರೆಸ್‌ಮೀಟನಿಂದಲ್ಲ, ಇಂತಹ ಪತ್ರಿಕೆಗಳಿಲ್ಲದೆ ಜಗತ್ತು ನಡೆದು ಬಂದ ಹಾದಿ ಬಹುದೀರ್ಘವಾಗಿದೆ.

■ ವರದಿಗಾರ

ಒಂದು ಅಲ್ಲೋಲಕಲ್ಲೋಲದೆದುರು...



ಪತ್ರಿಕೋದ್ಯಮದ ನಾಡಿಮಿಡಿತದ ವಿಚಾರ ಇದು. ಈಗಿನ ಕನ್ನಡ ಪತ್ರಿಕೋದ್ಯಮದ ಒಳಗೆ ಎಂಥ ಅಲ್ಲೋಲಕಲ್ಲೋಲ ಎದ್ದಿದೆಯೆಂದರೆ ಮುಂದಿನ ಒಂದೆರಡು ವರ್ಷದೊಳಗೆ ಕೆಲ ದೈಲಿಗಳು, ವಾರಪತ್ರಿಕೆಗಳು ಮಾಯವಾದರೂ ಆಶ್ಚರ್ಯವಿಲ್ಲ ಅನ್ನಿಸುತ್ತಿದೆ.

ನ್ಯೂಸ್ ಪ್ರಿಂಟಿನ ಬೆಲೆ ಏರಿಕೆ, ಪ್ರಿಂಟಿಂಗ್, ಪಿನ್ನಿಂಗ್, ಸಾರಿಗೆ, ಸಿಬ್ಬಂದಿ ಖರ್ಚುಗಳ ಬಿಕ್ಕಟ್ಟುಗಳಂತೂ ನಿತ್ಯನವೀನ ಬಿಡಿ. ಆದರೆ ನಿಮಗೆ ನುರಿತ ಜನವೇ ಸಿಗದೆ ಹೋದರೆ?

ಅದೀಗ ಬಹುತೇಕ ಎಲ್ಲಾ ಸಂಸ್ಥೆಗಳ ಬಿಕ್ಕಟ್ಟು.

ಕಳೆದ ವಾರ ಪ್ರೆಸ್‌ಕ್ಲಬ್‌ನಲ್ಲಿ ಸಿಕ್ಕ ಗೆಳೆಯನೊಬ್ಬ 'ಟಿವಿ ಚಾನಲ್ ಸೇರ್ಕೊಂಡೆ ಸಾರ್' ಅಂದ. 'ಸಂಬಳ ಎಷ್ಟಯ್ಯ' ಅಂದಿದ್ದಕ್ಕೆ 'ಇಪ್ಪತ್ತು ಸಾವಿರ' ಅಂದುಬಿಟ್ಟ. ನಾಲ್ಕಾರು ಸಾವಿರದಷ್ಟು ಹೆಚ್ಚೇ ಕಲ್ಪಿಸಿಕೊಂಡು ಹೇಳುತ್ತಿರಬಹುದೆನ್ನಿಸಿದರೂ ಅವನು ಟಿವಿ ಚಾನೆಲ್ ಸೇರಿಕೊಂಡಿದ್ದಂತೂ ಸತ್ಯವಾಗಿತ್ತು. ಕೆಲಕಾಲ ನಮ್ಮ ತಂಡದಲ್ಲಿ ಕೆಲಸ ಮಾಡಿದ್ದ ಅವನಿಗೆ ಶಿಸ್ತಿಲ್ಲ, ಪ್ರೊಫೆಷನಲಿಸಂ ಇಲ್ಲ ಅಂತ ಬೇಸರದಿಂದ 'ಬೇಡ ಹೋಗು' ಅಂದಿದ್ದ ನಾವೆಲ್ಲಾ ಅವಾಕ್ಕಾಗುವಂತೆ ಆತ ಇನ್ನೆಲ್ಲೋ ತೂರಿಕೊಂಡು ನೆಲೆ ಕಲ್ಪಿಸಿಕೊಂಡಿದ್ದ.... ಅದೇ ಅಶಿಸ್ತು ಅರಾಜಕತೆಯೊಂದಿಗೇನೇ!

ಇನ್ನೊಬ್ಬ ಪತ್ರಕರ್ತ ಮಿತ್ರ ಹೇಳಿದ ಕತೆ ಇನ್ನೂ ವಿಚಿತ್ರವಾಗಿತ್ತು.

ಈಗ ಇನ್ನೇನು DNA ಗುಂಪಿನ ಇಂಗ್ಲಿಷ್ ದಿನಪತ್ರಿಕೆ ಬೆಂಗಳೂರಿನಿಂದ ಲಾಂಚ್ ಆಗುತ್ತಿದೆ. ಇಂಗ್ಲಿಷ್ ಬಲ್ಲ ಜನ ಸಾಕಷ್ಟು ಸಿಗದ ಕಾರಣ ಅವರು ಕನ್ನಡ ಪತ್ರಕರ್ತರನ್ನೇ ಕರೆಕರೆದು ತುಂಬಿಸಿಕೊಳ್ಳುತ್ತಿದ್ದಾರಂತೆ. ಅದ್ಯಾಕೆ ಹೀಗೆ ಎಂದು ಚೆಕ್ ಮಾಡಿದರೆ 'ನಿಮಗೆ ಗೊತ್ತಿರೋಷ್ಟು ಇಂಗ್ಲಿಷೋ ಇಲ್ಲಾ ಕನ್ನಡದಲ್ಲೋ ವರದಿ ಬರೆದುಕೊಡಿ, ನಮ್ಮ ಡೆಸ್ಕ್ ಸಿಬ್ಬಂದಿ ಇಂಗ್ಲಿಷ್‌ಗೆ ಅನುವಾದ ಮಾಡಿಕೊಳ್ಳುತ್ತಾರೆ' ಅನ್ನುತ್ತಿದ್ದಾರಂತೆ.

ಇದು ಮಿಡಲ್ ರೇಂಜಿನ ಸಂಸ್ಥೆಗಳಿಗೆ ಉಸಿರು ಕಟ್ಟಿಸುವ ಪರಿಸ್ಥಿತಿ. ಲೋಕಲ್ ಪತ್ರಿಕೆಗಳು (ಕಡಿಮೆ ಸರ್ಕುಲೇಷನ್ನು, ವ್ಯಾಪ್ತಿ ಸಿಬ್ಬಂದಿ) ಇದರಿಂದ ಹೇಗೋ ಬಚಾವಾಗುತ್ತಾರೆ. ನೂರಾರು ಕೋಟಿ ಹಣ ಪಂಪ್ ಮಾಡುವ ದೊಡ್ಡ ಸಂಸ್ಥೆಗಳು ನಾಲ್ಕಾರು ವರ್ಷ ಗುದ್ದಾಡಬಲ್ಲ ತಾಕತ್ತು ಹೊಂದಿರುತ್ತಾರೆ. ಆದರೆ ಜಾಹೀರಾತಿಲ್ಲದ ಬರೀ ಮಾರಾಟದಿಂದಲೇ ಬದುಕಬೇಕಾದವರ ಪಾಡು ಏನು ಹೇಳಿ?

ಇಂಥದ್ದೊಂದು ಅಪಾಯ ಕಾದಿದೆ ಎಂದು ಮೊದಲೇ ಊಹಿಸಿದ್ದ ನಾವು 'ಗೈಡ್' ಚಾಲೂ ಮಾಡಿ, ಜೊತೆಗೊಂದು ಪುಸ್ತಕ ಪ್ರಕಾಶನ ಸಂಸ್ಥೆಯೆಂಬ ಪಿಲ್ಲರ್ ಅನ್ನೂ ವೇಗವಾಗಿ ಕಟ್ಟಿಕೊಂಡಿದ್ದರಿಂದ ಈ ಚಂಡಮಾರುತದೆದುರು ಅಲ್ಲಾಡದೆ ನಿಂತಿದ್ದೇವೆ. ಬರಬಹುದಾದ ಒಂದು ರೂಪಾಯಿಯನ್ನು ಕಳೆದುಕೊಳ್ಳದೆ, ಖರ್ಚಾಗುವ ಪ್ರತಿ ರೂಪಾಯಿಯ ಬಗ್ಗೆ ನಿಗಾ ಇಡದೇ ಹೋದರೆ ಇಲ್ಲಿ ಯಾರೂ ಉಳಿಯುವ ಹಾಗಿಲ್ಲ. ಅದೇರೀತಿ ಅತೀ ಜಿಪುಣತನದಿಂದ Time ಖರ್ಚು ಮಾಡದೇಹೋದರೆ, ದಿನಕ್ಕೆ ಹದಿನಾರು ಗಂಟೆ ಹಲ್ಲು ಕಚ್ಚಿಕೊಂಡು ಕೆಲಸ ಮಾಡದೆ ಹೋದರೂ ಈ ಚಂಡಮಾರುತದೆದುರು ನಿಲ್ಲಲಾಗುವುದಿಲ್ಲ.

ಬಿಡಿ ಚಿತ್ರಗಳು

• ಈಶ

ಹೊರಗಿನಿಂದ ನೋಡುವವರಿಗೆ ಪತ್ರಿಕೋದ್ಯಮದ ಒಳಸುಳಿಗಳ ಅರಿವೇ ಇರುವುದಿಲ್ಲ ಅನ್ನಿಸುತ್ತದೆ. ಅದೇರೀತಿ ಪತ್ರಿಕೋದ್ಯಮದಲ್ಲಿದ್ದವರಿಗೂ ಕೆಲವೊಮ್ಮೆ ಅದರ economics ಗೊತ್ತೇ ಆಗಿರುವುದಿಲ್ಲ.

ಕೆಲ ದಿನಗಳ ಹಿಂದೆ ಪ್ರಖ್ಯಾತ ದಿನಪತ್ರಿಕೆಯ ಹಿರಿಯ ಪತ್ರಕರ್ತರೊಬ್ಬರು ನಮ್ಮ ಕಚೇರಿಗೆ ಬಂದು ಗೌರಿಯ ಹತ್ತಿರ ಕೆಲಹೊತ್ತು ಮಾತಾಡಿಹೋದರು.

'ಸಾಹಿತ್ಯ ಮಾಸ ಪತ್ರಿಕೆಯೊಂದನ್ನು ಮಾಡಿ, ನಾನು ಆರು ತಿಂಗಳಲ್ಲಿ 10 ಸಾವಿರ ಸರ್ಕುಲೇಷನ್ನು ತಲುಪಿಸುತ್ತೇನೆ' ಅಂದರಂತೆ. ಅವರ ಉತ್ಸಾಹವೇನೊ ಚೆನ್ನಾಗಿತ್ತು, ಆದರೆ ಲೆಕ್ಕ ಹಾಕಿ ನೋಡಿದರೆ ತಿಂಗಳಿಗೆ 10 ಸಾವಿರ ಪ್ರತಿ ಮಾರಿದರೂ ತಿಂಗಳ ನಷ್ಟ 30 ಸಾವಿರ ಆಗುವಂತಿತ್ತು. ನಾವು ಆ ಬಗ್ಗೆ ಉತ್ಸಾಹ ತೋರಿಸಲಿಲ್ಲ. ಬರೀ ಕ್ರೈಮು, ಸೆಕ್ಸು ಅಂತ ಬರೆಯದೆ, ಬೇರೆಲ್ಲೋ ಲಪಟಾಯಿಸಿದ ಹಣ ತಂದು ಸುರಿಯದೆ, ಕೇವಲ ಜನಪರ ಕಾಳಜಿಯಿರಿಸಿಕೊಂಡು ಒಂದು ಪತ್ರಿಕೆ ನಡೆಸುತ್ತಾ ಹೋಗುವುದೆಂದರೆ.....

ಬಹುಶಃ ಈ segment ನಲ್ಲಿ 'ಲಂಕೇಶ್'ನದ್ದೇ ಕೊನೆಯ ಸಕ್ಸಸ್ ಸ್ಟೋರಿ ಆಗುತ್ತದೆನಿಸುತ್ತಿದೆ.

ಇವತ್ತಿನ ಪರಿಸ್ಥಿತಿ ಇದು. ■

ಜೀನಿಐ ಕತೆ

ಸಿದ್ಧಾಂತ

ಮಠಕ್ಕೆ ಬಂದಿದ್ದ ರಾಜಕೀಯ ಕಾರ್ಯಕರ್ತರ ಗುಂಪೊಂದು ಹೇಗೆ ತಮ್ಮ ಸಿದ್ಧಾಂತವು ಜಗತ್ತನ್ನೇ ಬದಲಾಯಿಸಬಹುದು ಎಂಬುದರ ಬಗ್ಗೆ ಗುರುಗಳ ಮನವೊಲಿಸಲು ಪ್ರಯತ್ನಿಸಿದರು.

ಅವರ ಮಾತುಗಳನ್ನು ಆಲಿಸಿದ ಗುರುಗಳು ಕೊನೆಗೆ ಪ್ರತಿಕ್ರಿಯಿಸಿ "ಯಾವುದೇ ಸಿದ್ಧಾಂತ ಅದನ್ನು ಬಳಸುವ ಜನ ಎಷ್ಟು ಒಳ್ಳೆಯದಕ್ಕೆ ಅಥವಾ ಎಷ್ಟು ಕೆಟ್ಟದ್ದಕ್ಕೆ ಉಪಯೋಗಿಸಿಕೊಂಡರು ಎಂಬುದನ್ನು ಅವಲಂಬಿಸಿರುತ್ತದೆ. ಹಾಗೊಮ್ಮೆ ನಾಳೆ ನ್ಯಾಯ ಕೇಳಿ ಲಕ್ಷಾಂತರ ನರಿಗಳು ಸಂಘಟಿತವಾದರೆ ಅವು ಲಕ್ಷಾಂತರ ನರಿಗಳಾಗಿ ಉಳಿದಿರುವುದಿಲ್ಲವೆ?" ಎಂದು ಕೇಳಿದರು.



ಮತಾಂತರ ವಿರುದ್ಧ ಪ್ರತಿಭಟಿಸಲು ಹಿಂದೂತ್ವವಾದಿಗಳಿಗೆ ಹಕ್ಕಿದೆಯೇ?

ಸೆ. 10 ರ ಸಂಚಿಕೆಯ 'ಒರಿಸ್ಸಾ ಎಂಬ ನರಕ' ಸಂಪಾದಕೀಯದ ಕೊನೆಯ ಸಾಲನ್ನು ಓದಿದಾಗ ಮಹಾನುಭಾವನೊಬ್ಬ "ಧರ್ಮದ ಹೆಸರಲ್ಲಿ ಬಡಿದಾಡುವವರಿದ್ದಾರೆ, ಸಾಯುವಂತಹವರೂ ಇದ್ದಾರೆ. ಆದರೆ ಧರ್ಮ ಮಾರ್ಗದಲ್ಲಿ ನಡೆಯುವವನನ್ನು ಕಾಣುವುದು ಮಾತ್ರ ಕಷ್ಟಸಾಧ್ಯ" ಎಂದು ಹೇಳಿದ್ದ ಮಾತು ನೆನಪಾಯಿತು. ಯಾಕೆಂದರೆ ಧರ್ಮದ ಹೆಸರಲ್ಲಿ ಬೇಳೆ ಬೇಯಿಸಿಕೊಳ್ಳಲು ಹೋಗುವವರಿಗೆ ಬೇಕಿರುವುದು ಅನ್ಯಧರ್ಮೀಯರ ವಿರುದ್ಧ ದ್ವೇಷ ಕಾರುವುದೇ ಹೊರತು ಧರ್ಮದ ಅನುಸರಣೆ ಅಲ್ಲ.

ತೆ ಹೊಗಳಿಕೆ ಗೆ ಕೆ

ಕಂಧಮಾಲ್ ಘಟನೆಯ ಹಿನ್ನೆಲೆಯಲ್ಲಿ ಮತಾಂತರ ಕುರಿತು ಹಿರಿಯ ಸಾಹಿತಿ ಡಾ. ಯು.ಆರ್. ಅನಂತಮೂರ್ತಿಯವರು "ಕಾನೂನುಬದ್ಧ ಹಕ್ಕಾದ ಮತಾಂತರವನ್ನು ಸಂಶಯದ ದೃಷ್ಟಿಯಿಂದ ನೋಡುವುದು ಸರಿಯಲ್ಲ" ಎಂದು ಸರಿಯಾಗಿಯೇ ಹೇಳಿದ್ದಾರೆ. ಆದರೆ ಅವರ ಮಾತಿಗೆ ಪ್ರತಿಯಾಗಿ ಚೆಡ್ಡಿ ಚಿಂತಕ ಚಿದಾನಂದಮೂರ್ತಿಯವರು "ಮತಾಂತರ ನಿಷೇಧ ಕಾನೂನನ್ನು ಪ್ರತಿಪಾದಿಸುವ ಬದಲಿಗೆ ಅದನ್ನ ಬೆಂಬಲಿಸಿ ಅನಂತಮೂರ್ತಿ ಮಾತನಾಡಿದ್ದು ಸರಿಯಲ್ಲ. ಕ್ರಿಶ್ಚಿಯನ್ ಮಿಷನರಿಗಳ ಅನೈತಿಕ(?) ಕಾರ್ಯಗಳಿಗೆ ಮತ್ತಷ್ಟು ಶಕ್ತಿ ನೀಡಿದಂತಾಗುತ್ತದೆ. ಪಾದ್ರಿಗಳೆಲ್ಲ ಹಣದ ಆಮಿಷ ಹಾಗು ಕುತಂತ್ರಗಳಿಂದ ದಲಿತರನ್ನು ಮತಾಂತರಗೊಳಿಸುತ್ತಾ ಹಿಂದೂ ಧರ್ಮ ಹಾಗೂ ಸಂಸ್ಕೃತಿಯನ್ನು ಹಾಳು ಮಾಡುತ್ತಿದ್ದಾರೆ" ಎಂದು ತಮ್ಮ ಅಸಹನೆಯನ್ನು ಕಾರಿಕೊಂಡಿದ್ದಾರೆ.

ಚಿಮೂ ಮತ್ತು ಪೇಜಾವರ ಸ್ವಾಮಿ ತರಹದ ಹಿಂದೂತ್ವವಾದಿಗಳಿಗೆ ದಲಿತರ ಬಗ್ಗೆ 'ದಿಢೀರ್ ಪ್ರೇಮ' ಹುಟ್ಟಿರುವುದರ ಹಿಂದೆ ಕಾರಣ ಇಲ್ಲದಿಲ್ಲ. ಇಂತಹವರಿಗೆ ಬೇಕಿರುವುದು ಹಿಂದೂ ಧರ್ಮದಲ್ಲಿನ ಹುಳುಕುಗಳನ್ನು ಮುಚ್ಚಿಡುವುದಷ್ಟೇ. ಅಸಮಾನತೆ ಮತ್ತು ಶ್ರೇಣೀಕೃತ ಸಮಾಜದ ತಳಪಾಯದ ಮೇಲೆ ನಿಂತಿರುವ ಇವರ ಹಿಂದೂ ಧರ್ಮವನ್ನು ತಿರಸ್ಕರಿಸಿ ತಮಗೆ ಗೌರವಯುತ ಬದುಕನ್ನು ಕೊಡುವ ಇನ್ನೊಂದು ಧರ್ಮವನ್ನು ಸ್ವೀಕರಿಸುವ ಮೂಲಕ ಅವರೆಲ್ಲ ಹಿಂದೂ ಧರ್ಮದಲ್ಲಿನ ಕೊಳಕನ್ನು ಬಹಿರಂಗಪಡಿಸುತ್ತಿದ್ದಾರಲ್ಲ ಎಂಬುದು ಇವರ ಕೊರಗು. ಆದ್ದರಿಂದ ಮತಾಂತರದಿಂದ ಹಿಂದೂ ಧರ್ಮ ಮತ್ತು ಸಂಸ್ಕೃತಿ ನಾಶವಾಗುತ್ತಿದೆ ಎಂದು ಕಣ್ಣೀರಿಡುತ್ತಿದ್ದಾರೆ.

ಮೊದಲಿಗೆ ಮೊಸಳೆ ಕಣ್ಣೀರು ಸುರಿಸುವುದನ್ನು ನಿಲ್ಲಿಸಿ ತಮ್ಮ ಧರ್ಮ ಸ್ವಾಭಿಮಾನದಿಂದ ಬದುಕಲು ಜನರನ್ನು ಬಿಡದಿರುವುದೇ ಮತಾಂತರಕ್ಕೆ ಕಾರಣ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ. ಹಾಗೊಮ್ಮೆ ಅವರು ಹೇಳುವಂತೆ ಮತಾಂತರಕ್ಕೆ ಕಾರಣ ಹಣದ ಆಮಿಷವೇ ನಿಜವಾಗಿದ್ದರೆ ಕೇವಲ ದಲಿತರು ಮಾತ್ರ ಇದಕ್ಕೆ ಬಲಿ ಬೀಳುತ್ತಿದ್ದಾರೆ, ಮೇಲುಜಾತಿಯವರು ಯಾಕೆ ಬೀಳುತ್ತಿಲ್ಲ ಎಂದು ಪ್ರಶ್ನೆ ಮಾಡಿಕೊಳ್ಳಬೇಕಿದೆ.

ಅದನ್ನು ಬಿಟ್ಟು ಮತಾಂತರಗೊಂಡವರ ಮೇಲೆ ದಾಳಿ ಮಾಡಿ ಅದನ್ನೇ ತಮ್ಮ ಧರ್ಮದ ರಕ್ಷಣೆ ಎಂದು ಕರೆದರೆ, ಇಲ್ಲಿಯತನಕ ಸುಮ್ಮನಿರುವ ದಲಿತ ಕ್ರಿಶ್ಚಿಯನ್ನರು ತಮ್ಮ ಕೈಗಳಿಗೆ ದೊಣ್ಣೆ ಎತ್ತಿಕೊಂಡು ಇವರನ್ನೆಲ್ಲ ಬಡಿಯಲು ಬರುತ್ತಾರಷ್ಟೇ. ಆದಾಗುವ ಮುನ್ನ ಇವರು ತಮ್ಮ ಧರ್ಮದಲ್ಲಿನ ಕೊಳಕುತನದ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಿದೆ.

-ರವಿ ಪುತ್ತೂರ, ದಕ್ಷಿಣ ಕನ್ನಡ

ಸುಮಾರು ಮೂವತ್ತು ಮೂವತ್ತೈದು ವರ್ಷಗಳ ಹಿಂದೆಯೇ ಕವಿ ದಿ. ಕಾರ್ಯಹಳ್ಳಿ ರಾಮಕೃಷ್ಣ ಶೆಟ್ಟಿ ಎಂಬವರು ಬರೆದ ಕವಿತೆಯ ಸಾಲುಗಳು ಹೀಗಿದ್ದವು: 'ಕವಿಯಾಗಿ ಹುಟ್ಟಬೇಡ... ಕನ್ನಡದ ಕವಿಯಾಗಿ ಹುಟ್ಟಬೇಡ....'

ಶೆಟ್ಟಿಯವರು ಹೀಗೇಕೆ ಬರೆದರು? ಎಂಬ ಪ್ರಶ್ನೆ ನನ್ನನ್ನು ಆಗಾಗ ಕಾಡುತಿತ್ತು. 'ಲಂಕೇಶ್' ಪತ್ರಿಕೆ ಸೆಪ್ಟೆಂಬರ್ 10 ರ ಸಂಚಿಕೆಯಲ್ಲಿ ಸಾರಾ ಅಬೂಬಕ್ಕರ್ ಬರೆದ 'ಸಾಹಿತಿಗಳಿಗೆ ಚಿಕ್ಕಾಸಿನ ಬೆಲೆ ಇಲ್ಲವೇಕೆ?' ಎಂಬ ಪತ್ರ ಓದಿದಾಗ ಶೆಟ್ಟಿಯವರ ನೋವು ಅರ್ಥವಾಯಿತು.

ಕನ್ನಡದ ಉದ್ಧಾರಕ್ಕೆ ಕರ್ನಾಟಕದಲ್ಲಿ ನಡೆದಷ್ಟು ಚಳವಳಿಗಳು ಬೇರಾವ ರಾಜ್ಯದಲ್ಲೂ ನಡೆದಿರಲಾರದು. ಅದರಲ್ಲೂ ನಮ್ಮ ರಾಜಕಾರಣಿಗಳು ಮತ್ತು ಅವರ ಮಾನಸಿಕ 'ದತ್ತುಪುತ್ರ'ರಾಗಿರುವ ಕನ್ನಡ 'ಓ'ರಾಟಗಾರರಂತೂ ಕನ್ನಡಕ್ಕಾಗಿ ಬಗಿದಿರುವ ಭಾಷಣಗಳಿಗೂ ಲೆಕ್ಕವಿಲ್ಲ. ಪ್ರಸ್ತುತ ಚೆಡ್ಡಿಗಳ ಸರ್ಕಾರವಂತೂ ಕನ್ನಡೋದ್ಧಾರಕ್ಕೆ ಅಮೆರಿಕದ ಷಿಕಾಗೋ ನಗರಕ್ಕೂ ಹೋಗಿ ಗಾಳಿಬಿಟ್ಟು ಬಂದದ್ದಾಯಿತು.

ಇನ್ನು ಕನ್ನಡದ ರಕ್ಷಣೆಗೆ ಎಂದೇ ಇರುವ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ನಿಗಮ, ಸಾಹಿತ್ಯ ಅಕಾಡೆಮಿ ತರಹದ ಸಂಸ್ಥೆಗಳು ಕನ್ನಡ ಸಾಹಿತಿಗಳಿಗಾಗುವ ಅವಮಾನದತ್ತ ಜಾಣ ಕುರುಡುತನವನ್ನು ಪ್ರದರ್ಶಿಸುತ್ತವೆ. ಸಾಹಿತಿಗಳ ಸಾಹಿತ್ಯ ಕೃತಿಯನ್ನು ಪಠ್ಯಪುಸ್ತಕದಲ್ಲಿ ಪ್ರಕಟಿಸಿದಾಗಲೂ ಅವರಿಗೊಂದಿಷ್ಟು ಸಂಭಾವನೆ ಕೊಡಲಾರದ ಗತಿ ಇದೆ ಎಂದರೆ ಇನ್ನೇನೆನ್ನಬೇಕು?

'ಕನ್ನಡ ಕನ್ನಡ' ಎಂದು ಬಾಂಗ್ ಇಡುವ ಈ ನರಸತ್ತವರಿಗೆ ಸಾರಾ ಅಬೂಬಕ್ಕರ್ ಅವರು ತಮಗಾದ ಮೋಸವನ್ನು ಬಹಿರಂಗಪಡಿಸಿದ ಮೇಲಾದರೂ ಬುದ್ಧಿಬರಬೇಕಾಗಿದೆ. ಇಲ್ಲಿ ಸರ್ಕಾರ ಎಂಬುದು ಇದ್ದರೆ ಅಂತಹ ಸೂಕ್ಷ್ಮತೆಯನ್ನು ನಿರೀಕ್ಷಿಸಬಹುದಿತ್ತು.

ಆದರೆ ಇಲ್ಲಿ ಸರ್ಕಾರ ಎಂಬುದೇ ಇಲ್ಲವಲ್ಲ? ರಾಮಚಂದ್ರಾಪುರ ಮಠಕ್ಕೆ ಕೋಟಿ ಕೋಟಿ ಹಣ ನೀಡಿದ್ದು ಸಾಲದೆಂಬಂತೆ, ಅದಕ್ಕೀಗ ದೇಗುಲಗಳನ್ನು, ಸರ್ಕಾರಿ ಜಮೀನನ್ನೂ ನೀಡುತ್ತಿರುವ ಯಡಿಯೂರಪ್ಪನಿಗೆ ಸಾಹಿತಿಗಳಿಗಾಗುವ ಅನ್ಯಾಯ ಅರ್ಥವಾಗುವುದಾದರೂ ಹೇಗೆ?

-ಕೆ.ಜಿ. ಶೆಟ್ಟಿ, ಕದಂದಲೆ

ಬಿಬಿಎಂಪಿಯ ಪಶ್ಚಿಮ ವಲಯದ ನಗರ ಯೋಜನಾ ವಿಭಾಗದ ಎಂಜಿನಿಯರ್‌ಗಳು ನನ್ನ ಮನೆಯ ಪ್ಲಾನ್ ಮಂಜೂರು ಮಾಡಿಕೊಡಲು ಲಂಚಕ್ಕಾಗಿ ಪೀಡಿಸಿ ಕಿರುಕುಳ ನೀಡಿದ್ದರ ಬಗ್ಗೆ ತಮ್ಮ ಪತ್ರಿಕೆಗೆ ಪತ್ರ ಬರೆಯುವ ಮೂಲಕ ದೂರಿಕೊಂಡಿದ್ದೆ. ಅದನ್ನು ತಾವು ಪ್ರಕಟಿಸಿ ನೆರವಾದಿರಿ. ಪತ್ರ ಪ್ರಕಟಗೊಂಡಿದ್ದರಿಂದ ದಿಗಿಲುಗೊಂಡ ನಗರ ಯೋಜನಾ ಅಧಿಕಾರಿಗಳು ನನಗೆ ತಕ್ಷಣ ಪ್ಲಾನ್ ಮಂಜೂರು ಮಾಡಿ ಕೊಟ್ಟಿರುತ್ತಾರೆ.

ಆಪ್ತರೊಬ್ಬರು ನೀಡಿದ ಸಲಹೆಯಂತೆ ನಾನೇನೊ ಪತ್ರಿಕೆಗೆ ದೂರು ನೀಡಿ ಸಂಬಂಧಿಸಿದ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದೆ. ಆದರೆ ತಿಳಿವಳಿಕೆ ಇಲ್ಲದ ಮುಗ್ಧರ ಕತೆ ಏನಾಗಬೇಕು? ಎಷ್ಟೋ ಮಂದಿಗೆ ಬೈಲಾ ನಿಯಮದ ಅರಿವಿಲ್ಲವಾದ್ದರಿಂದ ಈ ದೌರ್ಬಲ್ಯವನ್ನು ಪಾಲಿಗೆ ಅಧಿಕಾರಿಗಳು ಬಂಡವಾಳ ಮಾಡಿಕೊಳ್ಳುತ್ತಿದ್ದಾರೆ.

-ಬಿ.ಎಸ್. ಸಂಪತ್‌ಕುಮಾರ್, ಬೆಂಗಳೂರು

ಬಂಡಲ್ ಬಡಾಯಿ ಮಾದೇವ!




'ತಾಜ್‌ಮಹಲ್' ಚಂದ್ರುರನ್ನು ಪತ್ರಿಕೆಗಳು 'ಸೆಕೆಂಡ್ ಪ್ರೇಮ್' ಎಂದು ಕರೆಯುತ್ತಿರುವುದು ಸಂಪೂರ್ಣವಾಗಿ ಸತ್ಯವಾಗಿದೆ. ತಾನು ನಿರ್ದೇಶಿಸಿದ ಮೊದಲ ಸಿನಿಮಾದಿಂದಲೇ ಪ್ರಚಾರದ ಹುಚ್ಚು ಹತ್ತಿಸಿಕೊಂಡಿರುವ ಈ ಚಂದ್ರು ಅದಕ್ಕೆಂದು ಆಡುತ್ತಿರುವ ಆಟಗಳು ಒಂದೆರಡಲ್ಲ.

ಕಳೆದವಾರವಷ್ಟೇ ಚಂದ್ರು ಸ್ವತಃ ಪತ್ರಕರ್ತರುಗಳಿಗೆಲ್ಲಾ ಫೋನ್ ಮಾಡಿ "ನಾನು ಗಣೇಶನ ತಮ್ಮನನ್ನು ಹೀರೋ ಮಾಡುತ್ತಿದ್ದೇನೆ, ಜೋಗಿ ಪ್ರೇಮ್ ಚಿತ್ರವನ್ನು ನಾನೇ ನಿರ್ದೇಶಿಸುತ್ತಿದ್ದೇನೆ..." ಎಂದೆಲ್ಲಾ ಭೋಂಗು ಬಿಟ್ಟಿದ್ದರು. ಈಗ ಅದೆಲ್ಲಾ ಸುಳ್ಳಾಗಿದೆ. ಸದ್ಯ ಚಂದ್ರು ನಿರ್ದೇಶನದ ಎರಡನೇ ಚಿತ್ರದಲ್ಲೂ ಅದೇ ಅಜಯ್ ನಾಯಕ ಎಂಬುದು ನಿಕ್ಕಿಯಾಗಿದೆ.

ಸಿನಿಮಾ ಪ್ರಾರಂಭವಾಗುವ ಮುನ್ನವೇ ಅದಕ್ಕೆ ಪ್ರಚಾರ ಸಿಗಲಿ ಎಂಬ ಕಾರಣಕ್ಕೆ ಚಂದ್ರು ಹೀಗೆಲ್ಲ ಬಂಡಲ್ ಬಿಡುತ್ತಿದ್ದಾರೆ. ಚಂದ್ರುಗೆ ಇಂತಹ ತಲೆಹರಟೆ ಕೆಲಸ ಬೇಕಿತ್ತಾ?

ಪರರ ದುಡ್ಡು ನಮಗ್ಯಾಕಯ್ಯಾ...?



ಬಾಟಲಿ ಹಿಡಿದು 'ಇಂತೀ ನಿನ್ನ ಪ್ರೀತಿಯ....' ಎಂಬ ಕಂಠಮಟ್ಟ ಕುಡಿದು ಟೈಟಾಗಿದ್ದ ನಿರ್ದೇಶಕ ಸೂರಿ ಇನ್ನು ಮುಂದೆ ಕಂಡವರ ದುಡ್ಡಿನಲ್ಲಿ ಕುಡಿಯಬಾರದು ಕ್ಷಮಿಸಿ, ಬೇರೆಯವರ ದುಡ್ಡಿನಲ್ಲಿ ಹೊಸ ಪ್ರಯೋಗದ ಸಿನಿಮಾ ಮಾಡಬಾರದು ಅಂತ ತೀರ್ಮಾನ ಮಾಡಿದ್ದಾರಂತೆ.

ಅಂದರೆ ದುಡ್ಡು ಗ್ಯಾರಂಟಿ ವಾಪಾಸು ಬರುವ ಚಿತ್ರಗಳನ್ನು ಮಾತ್ರ ಬೇರೆ ನಿರ್ಮಾಪಕರಿಗೆ ಮಾಡುತ್ತಾರಂತೆ. ಇನ್ನು ಹಾಕಿದ ಬಂಡವಾಳವೇ ದೋಖಾ ಎಂಬಂತಿರುವ ಚಿತ್ರಗಳನ್ನು ಸ್ವತಃ ತಾವು ಮತ್ತು ತಮ್ಮ ಸ್ನೇಹಿತರೇ ಸೇರಿ ನಿರ್ಮಿಸುತ್ತಾರಂತೆ.

ಕಂಡವರ ದುಡ್ಡಿನಲ್ಲಿ ಜೂಜಿಗೆ ನಿಲ್ಲುವ ಚಿತ್ರರಂಗದವರ ಮಧ್ಯೆ ಸೂರಿ ವಿಭಿನ್ನವಾಗಿ ಕಾಣಿಸುತ್ತಾರಲ್ಲವೇ?


'ಬಿರುಗಾಳಿ'ಯಿಂದ ಬಚಾವ್!



ಯುವ ನಿರ್ದೇಶಕ ಹರ್ಷ ಮೊದಲ ಬಾರಿಗೆ ನಿರ್ದೇಶಿಸಿದ್ದ 'ಗೆಳೆಯ' ಚಿತ್ರದ ಹಾಡುಗಳು ಸೂಪರ್ ಹಿಟ್ ಆದರೂ ಚಿತ್ರ ಮಾತ್ರ ಹೇಳಹೆಸರಿಲ್ಲದಂತೆ ಪಾಚಿಕೊಂಡಿತ್ತು. ಆದರೆ ಈ ಬಾರಿ ಹರ್ಷ ನಿರ್ದೇಶಿಸುತ್ತಿರುವ ಚಿತ್ರದ ನಿರ್ಮಾಪಕರಿಗೆ ಒಂದು ಹಂತದ ಬಂಡವಾಳ ಈಗಾಗಲೇ ವಾಪಾಸ್ ಬಂದಿದೆಯಂತೆ.

'ಇನ್ನೂ ಚಿತ್ರ ಬಿಡುಗಡೆಯೇ ಆಗಿಲ್ಲ, ಅದೆಲ್ಲಿಂದ ಬಂತು ಬಂಡವಾಳ' ಎಂದು ಗಾಬರಿ ಬೀಳುವ ಅವಶ್ಯಕತೆ ಇಲ್ಲ. ವಿಷಯ ಏನೆಂದರೆ ಈಗ ತಾನೆ ಬಿಡುಗಡೆಗೆ ಸಿದ್ದಗೊಂಡಿರುವ ಈ ಚಿತ್ರದ ಟಿವಿ ಹಕ್ಕನ್ನು ಝೀ ಕನ್ನಡ ಚಾನೆಲ್‌ನವರು ಎಂಭತ್ತು ಲಕ್ಷಕ್ಕೆ ಖರೀದಿಸಿದ್ದಾರಂತೆ.

ಇಷ್ಟರಮಟ್ಟಿಗೆ 'ಬಿರುಗಾಳಿ'ಯ ನಿರ್ಮಾಪಕರನ್ನು ಹರ್ಷ ಭಯದ 'ಬಿರುಗಾಳಿ'ಯಿಂದ ಪಾರು ಮಾಡಿದ್ದಾರೆ!



ಶಾರುಖ್ ಧೂಮಲೀಲೆ!

ಸ್ಟಾರ್ ನಟರು ಇನ್ನು ಮುಂದೆ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮರೆಯಬೇಕು ಎಂದು ಕೇಂದ್ರ ಆರೋಗ್ಯ ಸಚಿವ ರಾಮದಾಸ್ ಧಮಕಿ ಹಾಕಿದ್ದಾರೆ. ಅವರ ಪ್ರಥಮ ಗುರಿ ಬಾಲಿವುಡ್ ಬಾದಶಾ ಶಾರುಖ್ ಖಾನ್.

ಚೈನ್ ಸ್ಮೋಕರ್ ಆಗಿರುವ ಶಾರುಖ್ ಇನ್ನು ಮುಂದೆ ತನ್ನಿಷ್ಟದಂತೆ ಹೊರಗಡೆ ಸಿಗರೇಟ್ ಸೇದುವಂತಿಲ್ಲ, ಹೀಗೆಂದು ರಾಮದಾಸ್ ಆಜ್ಞೆ ಹೊರಡಿಸಿದ್ದಾರೆ. ಅಕಸ್ಮಾತ್ ಸಾರ್ವಜನಿಕ ಸ್ಥಳದಲ್ಲಿ ಶಾರುಖ್ ಸಿಗರೇಟ್ ಹಿಡಿದರೆ ಒಂದು ಸಾವಿರ ರೂಪಾಯಿಯ ದಂಡ ಕಟ್ಟಬೇಕಂತೆ.

ಶಾರುಖ್‌ನಂಥ ಪ್ರಭಾವಿ ನಟ ಸಾರ್ವಜನಿಕವಾಗಿ ಧೂಮಪಾನ ಮಾಡಿದರೆ ಆತನನ್ನು ಅನುಕರಿಸಿ ಯುವ ಪೀಳಿಗೆ ಕೆಟ್ಟ ದಾರಿ ತುಳಿಯುತ್ತದೆ ಎಂಬ ಕಾರಣಕ್ಕಾಗಿ ರಾಮದಾಸ್ ಈ ನಿರ್ಧಾರಕ್ಕೆ ಬಂದಿದ್ದಾರಂತೆ.

ಏನಾದರೂ ಆಗಲಿ, ಶಾರುಖ್‌ಗಿಂತ ಆತನ ಧೂಮಲೀಲೆಯೇ ಆಗಾಗ ಸುದ್ದಿ ಮಾಡುತ್ತಿರುತ್ತೆ!

ಖಳನಾಯಕ ಮಕ್ಕಳ ಖದರ್



ತೂಗುದೀಪ್ ದಿನಕರ್ ನಿರ್ದೇಶನದ 'ನವಗ್ರಹ' ಚಿತ್ರದ ವಾಲ್‌ಪೋಸ್ಟರ್‌ಗಳು ಬೆಂಗಳೂರಿನ ಗೋಡೆಗಳನ್ನು ಅಲಂಕರಿಸಿವೆ. ಈ ಜಾಹೀರಾತುಗಳು ನಿಜಕ್ಕೂ ಒಂದು ರೀತಿಯಲ್ಲಿ ನೋಡುಗರನ್ನು ಆಕರ್ಷಿಸುತ್ತಿವೆ. ಇದಕ್ಕೆ ಕಾರಣ ಅದರಲ್ಲಿ ಕನ್ನಡ ಚಿತ್ರರಂಗದ ಖಳನಾಯಕ ದಿಗ್ಗಜರುಗಳಾದ ತೂಗುದೀಪ್ ಶ್ರೀನಿವಾಸ್, ದಿನೇಶ್, ಸುಧೀರ್, ಪ್ರಭಾಕರ್, ವಜ್ರಮುನಿ, ಸುಂದರ ಕೃಷ್ಣ ಅರಸ್ ಮೊದಲಾದವರ ಲೈಫ್‌ಸೈಜ್ ಫೋಟೋಗಳು ಮಿನುಗುತ್ತಿರುವುದು. ಬಹುಶಃ ಅವರೆಲ್ಲ ಬದುಕಿದ್ದಾಗ ಅವರು ನಟಿಸಿದ್ದ ಒಂದೇ ಒಂದು ಚಿತ್ರದ ಜಾಹೀರಾತುಗಳಲ್ಲಿ ಅವರ ಚಿತ್ರಗಳನ್ನು ಇಷ್ಟು ದೊಡ್ಡದಾಗಿ ಹಾಕಿರಲಿಲ್ಲವೇನೋ.

ಚಿತ್ರರಂಗಕ್ಕೆ 75 ವರ್ಷ ತುಂಬುತ್ತಿರುವ ಈ ಸಂದರ್ಭದಲ್ಲಿ ಈ ಖಳನಾಯಕರಿಗೆ ದಿನಕರ್ ಮತ್ತು ದರ್ಶನ್ ನೀಡುತ್ತಿರುವ ಶ್ರದ್ಧಾಂಜಲಿಯೂ ಹೌದು. ಯಾಕೆಂದರೆ ಖಳನಾಯಕರ ಮಕ್ಕಳನ್ನು ನಾಯಕರನ್ನಾಗಿ ಮಾಡಿ ದಿನಕರ್ ಈ 'ನವಗ್ರಹ' ಚಿತ್ರವನ್ನು ನಿರ್ದೇಶಿಸಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ ಯುವನಾಯಕ ನವೀನ್‌ಕೃಷ್ಣ ನಟಿಸಿರುವ 'ಧಿಮಾಕು' ಚಿತ್ರದ ಜಾಹೀರಾತುಗಳು ಬೆಂಗಳೂರಿನಲ್ಲಿ ರಾರಾಜಿಸುತ್ತಿವೆ. ಆದರೆ ಆ ಜಾಹೀರಾತುಗಳಲ್ಲಿ ನವೀನ್‌ಕೃಷ್ಣನ ಸುಮಾರು ಹತ್ತು ವಿಭಿನ್ನ ರೂಪಗಳ ಫೋಟೋಗಳೇ ತುಂಬಿವೆ. ಅಲ್ಲಿ ಚಿತ್ರದ ಬೇರೆ ಕಲಾವಿದರ ಒಂದು ಚಿಕ್ಕ ಪಾಸ್‌ಪೋರ್ಟ್ ಸೈಜ್ ಫೋಟೋ ಕೂಡಾ ಇಲ್ಲ. ನವೀನ್ ಕೃಷ್ಣ ಕೂಡಾ ಪ್ರತಿಭಾವಂತ ಖಳನಾಯಕ ಶ್ರೀನಿವಾಸಮೂರ್ತಿಯ ಮಗ ಎಂಬುದನ್ನಿಲ್ಲಿ ಸ್ಮರಿಸಬಹುದು.


'ಅತಿ' ಬುದ್ಧಿವಂತ



ತನ್ನ ಫೇವರೇಟ್ ಹೀರೋ ಉಪೇಂದ್ರರ ಬರ್ತ್‌ಡೇ ಗಿಫ್ಟ್ ಆಗಿ ಆತ ನಟಿಸಿರುವ 'ಬುದ್ಧಿವಂತ' ಚಿತ್ರವನ್ನು ಬಿಡುಗಡೆ ಮಾಡಲು ಅದರ ನಿರ್ಮಾಪಕ ಮೋಹನ್ ನಿರ್ಧರಿಸಿದ್ದರು. ಈ ಕಾರಣಕ್ಕಾಗಿಯೇ ಮೂರು ತಿಂಗಳ ಹಿಂದೆಯೇ ಚಿತ್ರ ರೆಡಿಯಾಗಿದ್ದರೂ, ಮೋಹನ್ ಇದನ್ನು ಬಿಡುಗಡೆ ಮಾಡಿರಲಿಲ್ಲ.

ಆದರೆ ಈಗ ಉಪ್ಪಿಯ ಬರ್ತ್‌ಡೇ ದಿನದಂದು ಈ ಚಿತ್ರ ಬಿಡುಗಡೆಯಾಗುವ ಸಾಧ್ಯತೆಗಳು ಕಾಣಿಸುತ್ತಿಲ್ಲ. ಅದಕ್ಕೆ ಕಾರಣ ಆ ಚಿತ್ರಕ್ಕೆ ಇನ್ನೂ ಸೆನ್ಸಾರ್ ಸರ್ಟಿಫಿಕೇಟ್ ಸಿಗದಿರುವುದು. ಮೂರು ತಿಂಗಳ ಹಿಂದೆಯೇ ಚಿತ್ರ ತಯಾರಾಗಿದ್ದರೂ, ಅದನ್ನು ಆಗಲೇ ಸೆನ್ಸಾರ್ ಮಾಡಿಸದೆ ಈಗ ಕೊನೆಗಳಿಗೆಯಲ್ಲಿ ಅದರ ರೀಲ್‌ಗಳನ್ನು ಸೆನ್ಸಾರ್ ಸಮಿತಿಯ ಮುಂದಿಟ್ಟಿದ್ದಾರೆ. ಆದರೆ ಸೆನ್ಸಾರ್ ಆಫೀಸರ್ ಚಂದ್ರಶೇಖರ್ "ನೀವು ತಂದಿಟ್ಟ ಕೂಡಲೇ ನಾನು ಸಿನಿಮಾ ಸೆನ್ಸಾರ್ ಮಾಡಬೇಕೆಂದೇನಿಲ್ಲ" ಎಂದು ಉತ್ತರಿಸಿದ್ದಾರೆ.

ಇದರಿಂದ ಕುಪಿತಗೊಂಡಿರುವ ರಾಜೇಂದ್ರಸಿಂಗ್ ಬಾಬು ಮತ್ತು ಮೋಹನ್ ಸೇರಿದಂತೆ ಹಲವಾರು ಉದ್ಯಮದ ಜನ ಸೆನ್ಸಾರ್ ಕಚೇರಿ ಎದುರು ಧರಣಿ ಕುಳಿತುಕೊಳ್ಳಲು ಹೊರಟುನಿಂತಿದ್ದಾರೆ. ಈಗ ನೀವೇ ಹೇಳಿ, ಕೊನೆಗಳಿಗೆಯಲ್ಲಿ ಸೆನ್ಸಾರ್‌ಗೆ ಹೋಗುವುದು 'ಬುದ್ಧಿವಂತ'ನ ಲಕ್ಷಣನಾ? ಇಂತಹ ಎಡವಟ್ಟನ್ನು ಮಾಡಿಕೊಂಡಿರುವ ನಿರ್ಮಾಪಕ ಮೋಹನ್ ಶತಾಯಗತಾಯ ಉಪ್ಪಿ ಹುಟ್ಟುಹಬ್ಬದಂದೇ ಚಿತ್ರ ಬಿಡುಗಡೆ ಮಾಡುವುದು ಗ್ಯಾರಂಟಿ ಎಂಬ ಆತ್ಮವಿಶ್ವಾಸದಲ್ಲಿದ್ದಾರೆ. ಇಡೀ ಸಿನಿಮಾವನ್ನು ಶಿಸ್ತುಬದ್ಧವಾಗಿ ಮಾಡಿ ಮುಗಿಸಿದ ಈ ಜನ ಕೊನೆಗಳಿಗೆಯಲ್ಲಿ ಯಾಕೆ ಮುಗ್ಗರಿಸಿದರು?




■ ಅಜಿತ್ 'ಪಟ್ರೆ ಲವ್ಸ್ ಪದ್ಮ'

ಪಟ್ರೆ ಜೊತೆ ಬತ್ತಾವ್ಳೆ ಪದ್ಮ!

ಯಾಕೋ ಏನೋ ಗಾಂಧಿನಗರದಲ್ಲಿ ಈ 'ಪಟ್ರೆ ಲವ್ಸ್ ಪದ್ಮ' ಚಿತ್ರದ ಬಗ್ಗೆ ಒಂಥರಾ ವಿಲಕ್ಷಣ ಕ್ರೇಜ್ ಆರಂಭವಾಗಿಬಿಟ್ಟಿದೆ. ಒಮ್ಮೆ ಪತ್ರಿಕಾಗೋಷ್ಠಿಯಲ್ಲಿ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ ಪತ್ರಕರ್ತರಿಗೆ 'ಸೆನ್ಸ್ ಇಲ್ಲವಾ?' ಎಂದು ನೇರವಾಗಿ ಕೇಳಿ ಜರ್ನಲಿಸ್ಟುಗಳ ಕೆಂಗಣ್ಣಿಗೆ ಗುರಿಯಾಗಿದ್ದ, ಗಡ್ಡ ಬಿಟ್ಟು ನೋಡಲು ತಿಕ್ಕಲು ತಿಕ್ಕಲಾಗಿ ಕಾಣಿಸುವ ಚಂದ್ರಶೇಖರ್ ಶ್ರೀವಾತ್ಸವ್ ನಿರ್ದೇಶನದ 'ಪಟ್ರೆ' ತನ್ನ ಚಿತ್ರ ವಿಚಿತ್ರ ಪೋಸ್ಟರ್‌ಗಳಿಂದ ಸಖತ್ ಪಾಪ್ಯುಲರ್ ಆಗಿದೆ. ಚಿತ್ರ ಕೂಡ ಚೆನ್ನಾಗಿ ಬಂದಿದೆ ಅನ್ನೋದು ನೋಡಿದವರ ಮಾತು.


ಇದ್ದರೂ ಇರಬಹುದು. ನೋಡಲು ವಿಚಿತ್ರವಾಗಿ, ತಿಕ್ಕಲುಗಳಾಗಿ ಕಾಣುವ ಎಷ್ಟೋ ಚಿತ್ರಗಳು ನಮ್ಮಲ್ಲಿ ಸೂಪರ್ ಹಿಟ್‌ಆಗಿವೆ. 'ಪಟ್ರೆ' ಕೂಡಾ ಹಾಗೇ ಆಗಬಹುದೋ ಏನೋ!



■

ಗುರುಕಿರಣ-ಬಾಡಿಗೆ ಪುರಾಣ

ಇತ್ತೀಚೆಗೆ ಸಿನಿಮಾ ಮಂದಿ ಅಂದರೆ ಸಾಕು, ಬೆಂಗಳೂರಿನ ಮನೆ ಮಾಲೀಕರು ಬೆಚ್ಚಿಬೀಳುತ್ತಿದ್ದಾರೆ, ಚಿತ್ರರಂಗದ ಜನರಿಗೆ ತಮ್ಮ ಮನೆಗಳನ್ನು ಬಾಡಿಗೆಗೆ ಕೊಡಲು ಹಿಂಜರಿಯುತ್ತಿದ್ದಾರೆ. ಇದಕ್ಕೆ ಕಾರಣ ಇಲ್ಲದಿಲ್ಲ. ಉದಾಹರಣೆಗೆ ಕನ್ನಡ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ಅವರನ್ನೇ ತೆಗೆದುಕೊಳ್ಳಿ. ಈತ ವರ್ಷಗಟ್ಟಲೆ ವಾಸವಿರುವ ಮನೆಗೆ ಬಾಡಿಗೆ ಕಟ್ಟದೆ ಪುಕ್ಕಟೆಯಾಗಿ ಜೀವನ ನಡೆಸುತ್ತಾ 'ದಾಖಲೆ' ನಿರ್ಮಿಸಿದ್ದಾರೆ!



ಬಾಡಿಗೆ ಕಟ್ಟದೆ ಬಿಟ್ಟಿ ಇರುವುದರ ಜೊತೆಗೆ ಮನೆ ಮಾಲೀಕರ ಮನೆಯ ಬಾಗಿಲಿಗೆ ಹೋಗಿ ಮೀನು ಮಡ್ಡಿಯನ್ನು ತೊಳೆಯುತ್ತಂತೆ ಗುರು ಕುಟುಂಬ. ಗುರುಕಿರಣ್ ವಾಸವಿರುವ ಮನೆ ಮಾಲಿಕರಾದ ಮಾದಲಾಂಬಿಕೆ ಅನ್ನೋ ಹೆಣ್ಣುಮಗಳು ಮೊನ್ನೆ ವಿಜಯನಗರ ಪೊಲೀಸರಿಗೆ ದೂರು ನೀಡಿ ಗುರು ವಿರುದ್ಧ ಯುದ್ಧ ಸಾರಿದ್ದಾರೆ.

ಈ ಹೆಣ್ಣುಮಗಳ ಮಾತು ಎಷ್ಟು ನಿಜ, ಎಷ್ಟು ಸರಿ ಎಂದು ತಿಳಿಯೋಣವೆಂದರೆ ಗುರುಕಿರಣ್ ಈಗ ನಾಟ್ ಅವೈಲಬಲ್ಲು! ಯಾಕೆಂದರೆ ಈಯಪ್ಪ ದೂರದ ಅಮೆರಿಕದಲ್ಲಿ ಕುಂತಿದ್ದಾರಂತೆ. ಒಟ್ಟಿನಲ್ಲಿ ಗುರು ಬಂದ ನಂತರವಷ್ಟೇ ಈ ವಿವಾದಕ್ಕೆ ತೆರೆ ಬೀಳುವುದು. ಅಲ್ಲೀತನಕ ಈ ಸುದ್ದಿಗೆ ಇನ್ನಷ್ಟು ರೆಕ್ಕೆಪುಕ್ಕಗಳು ಬೆಳೆದರೆ ಅಚ್ಚರಿ ಇಲ್ಲ.

R B P LANKESH, Kannada Weekly Price Rs. 12/- 24-9-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4

ಸದ್ದಿಲ್ಲದೆ ಬರುತಿಹಳು 'ಗೌರಿ'



ಮೂರ್‍ನಾಲ್ಕು ವರ್ಷಗಳ ನಂತರ ಮತ್ತೆ ಉಪೇಂದ್ರ-ಶೈಲೇಂದ್ರಬಾಬು-ನಾಗಣ್ಣ ಎಂಬ ತ್ರಿಮೂರ್ತಿಗಳು ಒಟ್ಟಾಗಿದ್ದಾರೆ. ಇವರ ಸಮಾಗಮ ಈ ಹಿಂದೆ 'ಗೌರಮ್ಮ' ಚಿತ್ರದಲ್ಲಿ ಆಗಿತ್ತು.

ಕಳೆದ ವಾರ ಶೈಲೇಂದ್ರಬಾಬು ನಿರ್ಮಾಣದ, ಉಪ್ಪಿ ಅಭಿನಯದ ಹೊಸ ಚಿತ್ರ ಸೆಟ್ಟೇರಿತು. ಇದರ ಬಗ್ಗೆ ಯಾವುದೇ ಸುದ್ದಿಯಾಗಲಿ, ಜಾಹೀರಾತಾಗಲಿ ಪ್ರಕಟವಾಗಲೇ ಇಲ್ಲ. ಸದ್ದಿಲ್ಲದೆ ಸೆಟ್ಟೇರಿದ ಈ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ಶೈಲೇಂದ್ರಬಾಬು ಅವರೇ ಹೇಳುವ ಪ್ರಕಾರ 'ಗೌರಿ' ಎಂಬ ಹೆಸರೇ ಅಂತಿಮಗೊಳ್ಳುವ ಸಾಧ್ಯತೆಯಿದೆ.



ಅದೇನೇ ಇರಲಿ, ಉಪೇಂದ್ರ ನಾಯಕನಾದರೂ, ಚಿತ್ರ ಸೆಟ್ಟೇರಿದ್ದರೂ ನಾಯಕಿ ಮಾತ್ರ ಇನ್ನೂ ಫಿಕ್ಸ್ ಆಗಿರಲಿಲ್ಲ. ಆದರೆ ಇದೀಗ ಬಂದ ಸುದ್ದಿಯ ಪ್ರಕಾರ 'ವಂಶಿ' ಚಿತ್ರದ ನಾಯಕಿ ನಿವೇದಿತಾ ಕೊನೆಕ್ಷಣದಲ್ಲಿ ಆಯ್ಕೆಯಾಗಿದ್ದಾಳಂತೆ. ಸದ್ಯಕ್ಕೆ ಮೈಸೂರಿನಲ್ಲಿ ಇದರ ಶೂಟಿಂಗ್ ನಡೆಯುತ್ತಿದೆ. ನಾಗಣ್ಣ ನಿರ್ದೇಶನದ ಈ ಹೊಸಚಿತ್ರವನ್ನು ಯಾಕೆ ಕದ್ದುಮುಚ್ಚಿ ಮಾಡುತ್ತಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ.

ಸ್ಟಂಟ್ ಹೀರೋ!

ಕನ್ನಡಕ್ಕೆ ಒಬ್ಬ ಹೊಸ ಹೀರೋ ಬಂದಿದ್ದಾನೆ. ಈತನ ಹೆಸರು ವಿಜಯಕುಮಾರ್. ಈತ ಸಿನಿಮಾ ಲೋಕಕ್ಕೆ ಬರುವ ಮೊದಲೇ ನಿಜಜೀವನದಲ್ಲಿ ಹೀರೋಯಿಕ್ ಸಾಹಸಗಳನ್ನು ಮಾಡಿರುವಾತ.

ಯಾರೋ ಹಾಕಿದ ಸವಾಲಿಗೋಸ್ಕರ ಈತ ಬೈಕ್ ರೇಸ್ ಹವ್ಯಾಸವನ್ನು ಮನಸ್ಸಿಗೆ ಹಚ್ಚಿಕೊಂಡ. ಬೈಕ್‌ರೇಸ್ ಕಲಿತು ಅಲ್ಲಲ್ಲಿ ಚಿಕ್ಕಪುಟ್ಟ ಪ್ರಶಸ್ತಿಗಳನ್ನು ಬಾಚಿಕೊಂಡ. ಈ ಯಶಸ್ಸಿನಿಂದ ಉತ್ತೇಜಿತನಾಗಿ ಬೈಕ್ ರೇಸ್‌ನಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಪಡೆಯಲು ಆಸ್ಟ್ರೇಲಿಯಾಕ್ಕೂ ಹೋದ. ಅಲ್ಲಿಂದ ಬಂದ ನಂತರ ಅನೇಕ ಟೂರ್ನಿಮೆಂಟ್‌ಗಳಲ್ಲಿ ಭಾಗವಹಿಸಿ ಅನೇಕ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಗೆದ್ದುಕೊಂಡ. ಆರು ಬಾರಿ ರಾಷ್ಟ್ರೀಯ ಚಾಂಪಿಯನ್ ಕೂಡಾ ಆದ.

ಒಂದು ರೀತಿಯಲ್ಲಿ ಸ್ಟಂಟ್‌ಮೆನ್ ತರಹ ಕಾಣಿಸುವ ವಿಜಯಕುಮಾರ್‌ನನ್ನು ನಿರ್ದೇಶಕ ಪ್ರಕಾಶ್ ನಾಯಕನನ್ನಾಗಿ ಮಾಡುತ್ತಿದ್ದಾರೆ. ಈತ ನಟಿಸುತ್ತಿರುವ ಚಿತ್ರದ ಹೆಸರು 'ಉಲ್ಲಾಸ'. ರಮ್ಯಾ ನಾಯಕಿ.

ಈ ಚಿತ್ರದಲ್ಲಿ ವಿಜಯ್‌ಕುಮಾರ್ ಏನೇನು ಸ್ಟಂಟ್ ಮಾಡುತ್ತಾರೆ ಗೊತ್ತೇ? ಈತ 1800 ಸಿಸಿ ಬೈಕ್‌ನ್ನು ಚಲಿಸುತ್ತಿರುವ ಟ್ರೈನ್ ಮೇಲಿನಿಂದ ಹಾರಿಸುತ್ತಾನೆ. ಹಾಗೆಯೇ ಒಂದು ಮನೆಯ ಮೇಲಿನಿಂದ ಇನ್ನೊಂದು ಮನೆಯ ಮೇಲಕ್ಕೆ ಬೈಕ್‌ನಲ್ಲಿ ಹಾರುವುದು, ಸೇತುವೆಯ ಮೇಲಿನಿಂದ ಕೆಳಗೆ ಹಾರಿಸುವುದು... ಇವೇ ಮೊದಲಾದ ಅನೇಕ ಸ್ಟಂಟ್‌ಗಳನ್ನು ಯಾವುದೇ ಡ್ಯೂಪ್ ಇಲ್ಲದೆ ತೋರಿಸಲಿದ್ದಾನೆ. ಖಂಡಿತವಾಗಿಯೂ ಯುವಕರು ಈತನ ಸ್ಟಂಟ್‌ಗಳನ್ನು ನೋಡಿ ರೋಮಾಂಚನಗೊಳ್ಳುವುದರಲ್ಲಿ ಸಂಶಯವಿಲ್ಲ. ಈ ಚಿತ್ರದ 3 ಹಾಡುಗಳನ್ನು ಆಸ್ಟ್ರೇಲಿಯಾದಲ್ಲಿ ಚಿತ್ರೀಕರಿಸಲಿದ್ದಾರೆ.

ನಮ್ಮ ನಿರ್ದೇಶಕರುಗಳು ಸಾಧಾರಣವಾಗಿ ಇಂತಹ ಸ್ಟಂಟ್‌ಗಳಿಗೆ ನಾಯಕ ನಟನ ಬದಲಾಗಿ ಡ್ಯೂಪ್‌ಗಳನ್ನು ಬಳಸುತ್ತಾರೆ. ತಮ್ಮ ಪ್ರಾಣವನ್ನೇ ಪಕ್ಕಕ್ಕಿಟ್ಟು ಸ್ಟಂಟ್‌ಗಳನ್ನು ಮಾಡುವ ಡ್ಯೂಪ್‌ಗಳನ್ನು ನಿರ್ದೇಶಕರು ಆನಂತರ ಮೂಲೆಗುಂಪು ಮಾಡುತ್ತಾರೆ.

ಆದರೆ ಪ್ರಕಾಶ್ ಹಾಗೆ ಮಾಡದೆ ಆತನನ್ನೇ ನಾಯಕನನ್ನಾಗಿ ಮಾಡಿರುವುದು ಮೆಚ್ಚುವಂತಹ ವಿಷಯ.



ವಿಜಯಕುಮಾರ್, ರಮ್ಯಾ 'ಉಲ್ಲಾಸ'

'ವಂಶಿ'ಗೆ ಅಣ್ಣಾವ್ರ ಹಾಡು



'ವಂಶಿ' ಚಿತ್ರದಲ್ಲಿ ರಾಜ್‌ಕುಮಾರ್ ಅಣ್ಣಾವ್ರ ಅಭಿಮಾನಿಗಳಿಗಾಗಿ ಒಂದು ಆಶ್ಚರ್ಯ ಕಾದಿದೆ. ಅದೇನೆಂದರೆ ಈ ಚಿತ್ರದಲ್ಲಿ ಅಣ್ಣಾವ್ರು ಹಾಡಿದ ಹಾಡೊಂದಕ್ಕೆ ಅಪ್ಪು ಅಭಿನಯಿಸಿದ್ದಾರೆ. ಇದೇನು ವಿಶೇಷ ಸುದ್ದಿ ಅಲ್ಲ, ಯಾಕೆಂದರೆ ಈ ಹಿಂದೆಯೂ ಅಣ್ಣಾವ್ರ ಹಾಡಿಗೆ ಅಪ್ಪು ಕುಣಿದಾಡಿದ್ದಾರೆ. ಆದರೆ ಅಣ್ಣಾವ್ರ ನಿಧನ ನಂತರ ಅವರ ಹಾಡಿಗೆ ಕುಣಿಯುತ್ತಿರುವುದು ಮಾತ್ರ ಇದೇ ಮೊದಲು.

ಈ ಹಾಡಿನ ವಿಶೇಷತೆಯೇನೆಂದರೆ, ಅಪ್ಪನಿಲ್ಲದ ಮಗನಿಗಾಗಿ ಅಣ್ಣಾವ್ರು ಹಾಡಿದ ಹಾಡಿದು. 'ವಂಶಿ' ಚಿತ್ರದಲ್ಲೂ ನಾಯಕ ಪುನೀತ್‌ಗೆ ಅಪ್ಪನಿರುವುದಿಲ್ಲ, ತಾಯಿ ಲಕ್ಷ್ಮೀಯ ಮಮತೆಯಲ್ಲೇ ಆತ ಬೆಳೆದಿರುತ್ತಾನೆ. ಒಂದೆಡೆ ರಿಯಲ್‌ಲೈಫ್‌ನಲ್ಲಿ ಅಪ್ಪಾಜಿ ಇಲ್ಲದ ಶೂನ್ಯ ಇನ್ನೊಂದೆಡೆ ನಟಿಸುತ್ತಿರುವ ಪಾತ್ರದಲ್ಲೂ ಅನಾಥ.... "ಈ ಕಾರಣದಿಂದ ಈ ಹಾಡಿಗೆ ನಟಿಸುವಾಗ ಎಮೋಷನಲ್ ಆದೆ" ಎನ್ನುತ್ತಾರೆ ಪುನೀತ್. ಈ ಹಾಡನ್ನು ಸುಮಾರು ಹತ್ತನ್ನೆರಡು ವರ್ಷಗಳ ಹಿಂದೆ ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಹೂವು-ಹಣ್ಣು' ಚಿತ್ರಕ್ಕಾಗಿ ಹಂಸಲೇಖ ಸಂಗೀತ ಸಾರಥ್ಯದಲ್ಲಿ ಅಣ್ಣಾವ್ರು ಹಾಡಿದ್ದರು. "ನಮ್ಮ ಚಿತ್ರದ ನಿರ್ದೇಶಕ ಪ್ರಕಾಶ್ ಈ ಹಾಡನ್ನು ಒತ್ತಾಯ ಮಾಡಿ ಚಿತ್ರದಲ್ಲಿ ಸೇರಿಸಿದ್ದಾರೆ" ಎಂದು ಪುನೀತ್ ಹೇಳಿದರು. "ಇದೊಂದು ರೀತಿಯಲ್ಲಿ ಅಪ್ಪಾಜಿ ಈ ಚಿತ್ರಕ್ಕೆ ಆಶೀರ್ವಾದ ಮಾಡಿದಂತೆ ನನಗೆ ಅನಿಸುತ್ತಿದೆ" ಎಂದರು ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್. ಇನ್ನೊಂದು ಕಾಕತಾಳಿಯ ಸಂಗತಿ ಯಾವುದೆಂದರೆ ""ಹೂವು-ಹಣ್ಣು" ಚಿತ್ರದಲ್ಲೂ ತಾಯಿಯಾಗಿ ಲಕ್ಷ್ಮೀ ಕಾಣಿಸಿಕೊಂಡಿದ್ದರು. ನಮ್ಮ ಚಿತ್ರದಲ್ಲೂ ಅವರೇ ತಾಯಿಯಾಗಿರುವುದು ನಮ್ಮ ಭಾಗ್ಯ" ಎಂದರು ರಾಘು.

"ಈ ಹಾಡಿನ ಟ್ಯೂನ್ ಮತ್ತು ಸಂಗೀತವನ್ನು ಹಾಗೆ ಬಳಸಿಕೊಂಡಿದ್ದೇವೆ. ಆದರೆ ಸಂಗೀತ ನಿರ್ದೇಶಕ ಆರ್.ಪಿ.ಪಟ್ನಾಯಕ್ ಕೆಲವು ಚಿಕ್ಕಪುಟ್ಟ ಮಾರ್ಪಾಡುಗಳೊಂದಿಗೆ ಹೊಸರೂಪದಲ್ಲಿ ಹಾಡನ್ನು ತಂದಿದ್ದಾರೆ" ಎಂದರು ರಾಘು.

ರಮ್ಯಾಳ ಉಡುಪು ಬದಲಾವಣೆಯ ದಾಖಲೆ

ತನ್ನ ಉಡುಪುಗಳ ಬಗ್ಗೆ ರಮ್ಯಾ ಸಿಕ್ಕಾಪಟ್ಟೆ ಜಾಗರೂಕತೆ ವಹಿಸುತ್ತಾಳೆ. ಅದರಲ್ಲೂ ಸಿನಿಮಾದಲ್ಲಿನ ತನ್ನ ಪಾತ್ರಕ್ಕೆ ಬೇಕಾದ ಉಡುಪುಗಳನ್ನು ಆಕೆ ಸಾಧಾರಣವಾಗಿ ವಿದೇಶದಲ್ಲೇ ಖರೀದಿಸುತ್ತಾಳೆ. ಇತ್ತೀಚೆಗೆ ರಮ್ಯಾ ಚಿತ್ರವೊಂದರಲ್ಲಿ 35 ರೀತಿಯ ಉಡುಪುಗಳನ್ನು ಧರಿಸಿದ್ದಳು. ಅದು ಕನ್ನಡ ಚಿತ್ರರಂಗದ ಮಟ್ಟಿಗೆ ಒಂದು ದಾಖಲೆ.

ಈತ ತಾನು ನಿರ್ಮಿಸಿರುವ ಈ ದಾಖಲೆಯನ್ನು ತಾನೇ ಮುರಿಯಲು ರಮ್ಯಾ ಮುಂದಾಗಿದ್ದಾಳೆ. ಸದ್ಯದಲ್ಲೇ ಸೆಟ್ಟೇರಲಿರುವ 'ಉಲ್ಲಾಸ' ಚಿತ್ರಕ್ಕೆ ನಾಯಕಿಯಾಗಿರುವ ರಮ್ಯಾ ಆ ಚಿತ್ರದಲ್ಲಿ 56 ಬಾರಿ ಉಡುಪುಗಳನ್ನು ಬದಲಾಯಿಸಲಿದ್ದಾಳೆ ಎಂದು ಚಿತ್ರದ ನಿರ್ದೇಶಕ ಪ್ರಕಾಶ್ ಹೆಮ್ಮೆಯಿಂದ ಮೊನ್ನೆ ಗೋಷ್ಠಿಯಲ್ಲಿ ಘೋಷಿಸಿದ್ದಾರೆ. ಈ ಬಗ್ಗೆ ನಿಮಗೇನಾದರೂ ಸಂಶಯವಿದ್ದಲ್ಲಿ 'ಉಲ್ಲಾಸ' ಚಿತ್ರ ವೀಕ್ಷಿಸಲು ಹೋಗುವಾಗ ನೀವು ಪೆನ್ನು ಮತ್ತು ಪೇಪರ್ ತೆಗೆದುಕೊಂಡು ಹೋಗಿ ಲೆಕ್ಕ ಹಾಕಬಹುದು.

'ನಿರುದ್ಯೋಗಿ' ನಾಯಕಿ!

ಮೊನ್ನೆ 'ನಿರುದ್ಯೋಗಿ' ಎಂಬ ಚಿತ್ರ ಸೆಟ್ಟೇರಿತು. ಅದನ್ನು ನಿರ್ದೇಶಿಸುತ್ತಿರುವವರು ಒಂದು ಕಾಲದಲ್ಲಿ 'ಗುಣ' ಎಂಬ ಚಿತ್ರವನ್ನು ತೆರೆಗಿಟ್ಟ ನಾಗ್ ಎಂಬಾತ. 'ನಿರುದ್ಯೋಗಿ' ಚಿತ್ರಕ್ಕೆ ಮೈಸೂರಿನ ಅಂಕಿತರಾವ್ ಎಂಬ ಹುಡುಗಿಯನ್ನು ನಾಯಕಿಯಾಗಿ ಆಯ್ಕೆಮಾಡಲಾಗಿತ್ತು. ಚಿತ್ರದ ಮುಹೂರ್ತದ ದಿನದಂದು ಪತ್ರಿಕಾ ಛಾಯಾಗ್ರಾಹಕರು ಆಕೆಯ ಫೋಟೋಗಳನ್ನೂ ತೆಗೆದಿದ್ದರು.

ಆದರೆ ಅಂದೇ ಸಾಯಂಕಾಲದ ಹೊತ್ತಿಗೆ 'ನಿರುದ್ಯೋಗಿ' ಚಿತ್ರದ ನಾಯಕಿ ಅಂಕಿತರಾವ್ ನಿರುದ್ಯೋಗಿಯಾಗಿದ್ದಳು. ಆಕೆಯನ್ನು ನಾಯಕಿ ಸ್ಥಾನದಿಂದ ಎತ್ತಂಗಡಿ ಮಾಡಲಾಗಿತ್ತು.

"ಮುಹೂರ್ತದ ದಿನ ಬೆಳಿಗ್ಗೆ ಫೋಟೋ ತೆಗೆಯುವಾಗ ಆಕೆ ಸರಿಯಾದ ಪೋಸ್ ಕೊಡಲಿಲ್ಲ. ಹೀಗಾಗಿ ಆಕೆಗೆ ನಟನೆ ಬರುವುದಿಲ್ಲ ಎಂದು ತೆಗೆದುಹಾಕಲಾಯಿತು" ಎಂಬುದು ನಿರ್ದೇಶಕ ನಾಗ್ ನೀಡುವ ಸಮರ್ಥನೆ.



ಕನ್ನಡ ಚಿತ್ರರಂಗದಲ್ಲಿ ಕನ್ನಡ ಹುಡುಗಿಯರಿಗೆ ಯಾವ್ಯಾವ ರೀತಿಯಲ್ಲಿ ಅವಮಾನ ಮಾಡಲಾಗುತ್ತಿದೆ ಎಂಬುದಕ್ಕೆ ಇದೊಂದು ಪುಟ್ಟ ಉದಾಹರಣೆ. ಆಕೆಗೆ ನಟನೆ ಬರುತ್ತದೋ ಇಲ್ಲವೋ ಎಂಬುದನ್ನು ಮೊದಲೇ ಸ್ಕ್ರೀನ್ ಟೆಸ್ಟ್ ಮಾಡಿ ಖಾತರಿಪಡಿಸಿಕೊಂಡ ನಂತರವೇ ಆಯ್ಕೆ ಮಾಡಬೇಕೆನ್ನುವ ಕನಿಷ್ಠ ಜ್ಞಾನವೂ ನಾಗ್‌ಗೆ ಇರಲಿಲ್ಲವೇ? ಈತ ಇನ್ನೆಂತಹ ನಿರ್ದೇಶಕ?

ಏನೇ ಆಗಲಿ ಅವಮಾನಿತಳಾದ ನಾಯಕಿ ಅಂಕಿತರಾವ್ ಬಗ್ಗೆ ನಮ್ಮ ಸಿಂಪತಿ ಇದ್ದೇ ಇದೆ. ಇಂತಹ ಉಡಾಫೆ ರೀತಿಯಲ್ಲಿ ವರ್ತಿಸುವ ನಿರ್ದೇಶಕರ ಬಗ್ಗೆ ಛೇಂಬರ್ ಗಮನಹರಿಸಬೇಕಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate...